ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

12 ಸೆಪ್ಟೆಂಬರ್, 2026 ಶನಿವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -181 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629




ರಷ್ಯಾ ಅಧ್ಯಕ್ಷ ವಾದ್ಲಿಮಿರ್ ಪುಟಿನ್ ಅವರ ಭೇಟಿ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ತಮಿಳಿನ ಪ್ರಮುಖ ಕವಿ ಮತ್ತು ತತ್ವಜ್ಞಾನಿ ತಿರುವಳ್ಳುವರ್ ಅವರ ಶಾಸ್ತ್ರೀಯ ಕವನ ಸಂಕಲನವಾದ ತಿರುಕ್ಕುರಳ್‌ನ ರಷ್ಯನ್ ಭಾಷಾಂತರದ ಪ್ರತಿಯನ್ನು ಅವರಿಗೆ ನೀಡಿದ್ದಾರೆ.


ಹಲಸಿನ ಮರದ ದಶಾವತಾರಗಳು » 2


ರಾಜಕೀಯ ನಿವೃತ್ತಿ ಹೇಳಿಕೆ ನೀಡದಂತೆ ಸೂಚನೆ » 3


ಅರೇಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲೇ ಕಗ್ಗತ್ತಲು » 4

# ನೀರು ಹಂಚಿಕೆ ಬಗ್ಗೆ ಸುಳ್ಳು ಆರೋಪ ಬೇಡ

- ಹೇಮಾವತಿ ನೀರು ತುಮಕೂರಿಗೆ ಹೋಗದಂತೆ ತಡೆಯಲು ಆಗುತ್ತಾ
- ಎ.ಮಂಜು ಆರೋಪಕ್ಕೆ ಸಚಿವ ಕೆ.ಎಂ.ಶಿವಲಿಂಗೇಗೌಡ ತಿರುಗೇಟು

• ಪ್ರಜೋದಯ ವರದಿ

**ಹಾಸನ :** ಹೇಮಾವತಿ ನೀರು ಹಂಚಿಕೆ ವಿಚಾರದಲ್ಲಿ ಏಕ ಪಕ್ಷೀಯವಾಗಿ ನಿರ್ಧಾರ ಕೈಗೊಳ್ಳಲು ಸಾಧ್ಯವಿಲ್ಲ. ಜಲಸಂಪನ್ಮೂಲ ಸಚಿವರ ಅಧ್ಯಕ್ಷತೆಯಲ್ಲಿ ನಡೆಯುವ ಸಲಹಾ ಸಮಿತಿ ಸಭೆಯಲ್ಲಿ ನೀಡುವ ನಿರ್ದೇಶನದಂತೆ ನೀರು ಹರಿಸುವ ಕಾರ್ಯ ನಡೆಯುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ತಿಳಿಸಿದರು.

ಜಿಲ್ಲೆಯ ರೈತರಿಗೆ ಅನ್ಯಾಯ ಮಾಡಿ ತುಮಕೂರು ಜಿಲ್ಲೆಗೆ ಹೆಚ್ಚಿನ ಪ್ರಮಾಣದಲ್ಲಿ ಹೇಮಾವತಿ ನದಿ ನೀರು ಹರಿಸಲಾಗುತ್ತಿದೆ ಎಂಬ ಮಾಜಿ ಸಚಿವ ಎ.ಮಂಜು ಅವರ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಹೇಮಾವತಿ ಜಲಾಶಯ ನೀರು ಹಂಚಿಕೆ ಕುರಿತು ಕರೆದಿದ್ದ ಸಭೆ ಗೆ ಎ.ಮಂಜು ಅವರು ಬಂದಿದ್ದರು. ಆದರೆ, ಸಭೆಯಲ್ಲಿ ಚರ್ಚೆ ನಡೆಸಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸದೆ ಹೋಗಿದ್ದಾರೆ. ಸಭೆಯಲ್ಲಿಯೇ ಏನೇ ವಿಚಾರವಿದ್ದರೂ ಕೇಳಬೇಕಿತ್ತು. ಬಳಿಕ ಹೊರಗೆ ಬಂದು ಆರೋಪ ಮಾಡುವುದು ಏಕೆಂದು ಪ್ರಶ್ನಿಸಿದರು.

ಮೇಲ್ದಂಡೆ ನಾಲೆಗೆ ನೀರು ಬಿಡುವ ಕುರಿತು ನಿರ್ಧಾರ ಕೈಗೊಳ್ಳುವುದು ಜಲಸಂಪನ್ಮೂಲ ಸಚಿವರ ಮಟ್ಟದಲ್ಲಿ ನಡೆಯುವ ಪ್ರಕ್ರಿಯೆ. ಈ ವಿಚಾರದಲ್ಲಿ ನಮ್ಮ ಪಾತ್ರವನ್ನು ತಪ್ಪಾಗಿ ಬಿಂಬಿಸುವ ಅಗತ್ಯವಿಲ್ಲ. ಅಂಕಿ-ಅಂಶಗಳ ಬಗ್ಗೆ ಬೇಕಾದರೆ ನಾನು ಹೇಳಿ ಕೊಡುತ್ತೇನೆ. ಬಂದು ಕೇಳಲಿ. ಅಂಕಿ-ಅಂಶಗಳ ಬಗ್ಗೆ ವಿಧಾನಸಭೆಯಲ್ಲಿ ಎರಡು ಗಂಟೆ ಮಾತನಾಡಿದ್ದೇನೆ. ನೀರಿನ ಹಂಚಿಕೆ ಕುರಿತು ಸಂಪೂರ್ಣ ಮಾಹಿತಿ ನನ್ನ ಬಳಿ ಇದೆ ಎಂದು ಹೇಳಿದರು.



> ನಾನೇನು ಸುಪ್ರೀಂ ಅಲ್ಲ. ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಸಚಿವರು ಯಾವ ನಿರ್ದೇಶನ ಕೊಡುತ್ತಾರೋ ಅದನ್ನು ನಾವು ಕಾರ್ಯಗತಗೊಳಿಸುತ್ತೇವೆ. ಎಷ್ಟು ನೀರು ಬಿಡಬೇಕೆಂದು ಸೂಚಿಸುತ್ತಾರೋ ಅಷ್ಟು ನೀರು ಬಿಡಲಾಗುತ್ತದೆ.
> -ಕೆ.ಎಂ.ಶಿವಲಿಂಗೇಗೌಡ, ಜಿಲ್ಲಾ ಉಸ್ತುವಾರಿ ಸಚಿವ

ಕಾವೇರಿ ನೀರು ನಿರ್ವಹಣೆಗೆ ಸಂಬಂಧಿಸಿದಂತೆ ತಮಿಳುನಾಡಿಗೆ ನಿಗದಿತ ಪ್ರಮಾಣದ ನೀರು ಒದಗಿಸುವ ಕಾನೂನು ಬದ್ಧ ಹೊಣೆಗಾರಿಕೆ ರಾಜ್ಯದ ಮೇಲಿದೆ. ಇದರ ಜೊತೆಗೆ ಹಾಸನ ಹಾಗು ತುಮಕೂರು ಸೇರಿ ವಿವಿಧ ಜಿಲ್ಲೆಗಳ ಕೆರೆಕಟ್ಟೆಗಳನ್ನು ತುಂಬಿಸುವ ಅಗತ್ಯವೂ ಇದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿಯೇ ಜಲಾಶಯದಿಂದ ನೀರು ಹರಿಸಲಾಗುತ್ತಿದೆ. ತಮಿಳುನಾಡಿಗೆ 173 ಟಿಎಂಸಿ ನೀರು ನೀಡಬೇಕೆಂಬ ಕಾನೂನಿದೆ. ನಮ್ಮ ಹಾಸನ, ತುಮಕೂರು ಜಿಲ್ಲೆಗಳ ಕೆರೆಕಟ್ಟೆಗಳನ್ನು ತುಂಬಿಸಬೇಕಿದೆ. ಅದರಂತೆ ನೀರು ಹರಿದು ಹೋಗುತ್ತಿದೆ. ತುಮಕೂರಿಗೆ ಎಲ್ಲಿ ನೀರು ಬಿಟ್ಟಿದ್ದೇವೆ, ಇಲ್ಲಿನ ರೈತರಿಗೆ ಹೇಗೆ ಅನ್ಯಾಯವಾಗಿದೆ ಎಂದು ಕೇಳಿದರು.

ಜಲಾಶಯದಿಂದ ಒಮ್ಮೆ ನೀರು ಹರಿಸಿದ ಬಳಿಕ ಅದರ ನಿಗದಿತ ಕಾಲುವೆ ಅಥವಾ ನದಿ ಮಾರ್ಗದ ಮೂಲಕ ನೀರು ಸಾಗುತ್ತದೆ. ಮಧ್ಯದಲ್ಲಿ ತುಮಕೂರು ಕಡೆಗೆ ಹೋಗದಂತೆ ನೀರನ್ನು ತಡೆದು ನಿಲ್ಲಿಸುವುದು ಸಾಧ್ಯವಿಲ್ಲ. ನೀರು ಬಿಟ್ಟ ಮೇಲೆ ಕೊನೆಯವರೆಗೂ ನೀರು ಹರಿದು ಹೋಗುತ್ತದೆ ಎಂದು ಹೇಳಿದರು.

**ರಾಜಕೀಯ ಪ್ರೇರಿತ ದಾಳಿ**

ಸಚಿವ ಸತೀಶ್ ಜಾರಕಿಹೋಳಿ ಅವರ ಮನೆ ಮೇಲೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ನಡೆಸಿರುವ ದಾಳಿ ದುರುದ್ದೇಶ ಪೂರ್ವಕ ಹಾಗು ರಾಜಕೀಯ ಪ್ರೇರಿತವಾಗಿದೆ ಎಂಬ ಮಾತುಗಳು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿವೆ. ಆದರೆ, ದಾಳಿಯ ಸಂಪೂರ್ಣ ತನಿಖೆ ಪೂರ್ಣಗೊಂಡು ಸತ್ಯಾಸತ್ಯತೆ ಹೊರಬರುವವರೆಗೂ ಈ ಕುರಿತು ಹೆಚ್ಚಿನ ಪ್ರತಿಕ್ರಿಯೆ ನೀಡುವುದಿಲ್ಲ ಎಂದರು.

ದುರುದ್ದೇಶ ಪೂರ್ವಕವಾಗಿ ದಾಳಿ ಮಾಡಲಾಗಿದೆ ಎಂದು ಎಲ್ಲೆಡೆ ಪ್ರಚಾರ ವಾಗಿದೆ. ಇವರೊಬ್ಬರನ್ನೇ ಗುರಿ ಮಾಡಿಕೊಂಡು ದಾಳಿ ಮಾಡಿಸಿದ್ದಾರೆಂಬ ಮಾತುಗಳು ಜನಜನಿತವಾಗಿ ಕೇಳಿ ಬರುತ್ತಿವೆ. ಹಣ ಸಿಕ್ಕಿದೆ, ಅದು ನಮ್ಮದೇ ಹಣ, ಅದರ ಲೆಕ್ಕ ಕೊಡುತ್ತೇವೆ, ಜಾರಿ ನಿರ್ದೇಶನಾಲಯದ ತನಿಖೆಯನ್ನು ಎದುರಿಸುತ್ತೇವೆಂದು ಸತೀಶ್ ಜಾರಕಿಹೋಳಿ ಅವರೇ ಹೇಳಿದ್ದಾರೆ. ಅವರು ತನಿಖೆಯನ್ನು ಎದುರಿಸುತ್ತಾರೆ. ಜಾರಿ ನಿರ್ದೇಶನಾಲಯ ಕೇಂದ್ರ ಸರ್ಕಾರದ ಅಧೀನದಲ್ಲಿರುವ ಸಂಸ್ಥೆಯಾಗಿದ್ದು, ಆಗಾಗ್ಗೆ ದಾಳಿ ನಡೆಸುತ್ತಿದೆ. ಈ ಪ್ರಕರಣದಲ್ಲಿಯೂ ತನಿಖೆ ತನ್ನದೇಯಾದ ರೀತಿಯಲ್ಲಿ ನಡೆಯಲಿದೆ. ತನಿಖೆಯ ಬಳಿಕ ಸತ್ಯಾಂಶ ಏನೆಂಬುದು ಗೊತ್ತಾಗಲಿದೆ ಎಂದು ಹೇಳಿದರು.

**ಅನಗತ್ಯ ರಾಜಕೀಯ ಆರೋಪ ಸರಿಯಲ್ಲ**

ಅನಗತ್ಯವಾಗಿ ರಾಜಕೀಯ ಆರೋಪಗಳನ್ನು ಮಾಡುವ ಮೂಲಕ ಜನರಲ್ಲಿ ತಪ್ಪು ಸಂದೇಶ ಮೂಡಿಸಬಾರದು. ರಾಜಕೀಯ ಲಾಭಕ್ಕಾಗಿ ವೈಯಕ್ತಿಕ ಟೀಕೆ ಮಾಡುವುದು ಸರಿಯಲ್ಲ. ಹಿರಿಯ ಶಾಸಕರಾಗಿ, ಸಚಿವರಾಗಿ ಕಾರ್ಯ ನಿರ್ವಹಿಸಿರುವವರು ಗೌರವಯುತವಾಗಿ ನಡೆದು ಕೊಳ್ಳಬೇಕು. ಅವರ ಬಗ್ಗೆ ನನಗೆ ಗೌರವವಿದೆ. ಆದರೆ, ಅವರು ಹೇಳಿರುವುದೆಲ್ಲಾ ಸುಳ್ಳು. ನೀರಾವರಿ ವಿಚಾರದಲ್ಲಿ ನಾನು ಸುಳ್ಳು ಹೇಳುವುದಿಲ್ಲ. ನಮ್ಮ ಜಿಲ್ಲೆಯ ಜನರನ್ನು ಉಳಿಸಿಕೊಳ್ಳುವುದು ನನಗೆ ಗೊತ್ತಿದೆ ಎಂದು ತಿರುಗೇಟು ನೀಡಿದರು.

## ಅಸ್ಸಾಂನಲ್ಲಿ ಕರ್ತವ್ಯದಲ್ಲಿದ್ದ ಯೋಧ ಅನಾರೋಗ್ಯದಿಂದ ಸಾವು

**ಸೇನಾ ಗೌರವದೊಂದಿಗೆ ಇಂದು ಅಂತ್ಯಕ್ರಿಯೆ**

• ಪ್ರಜೋದಯ ವರದಿ

**ಆಲೂರು :** ಅಸ್ಸಾಂನಲ್ಲಿ ಕರ್ತವ್ಯದಲ್ಲಿದ್ದ ವೇಳೆ ಅನಾರೋಗ್ಯದಿಂದ ತಾಲ್ಲೂಕಿನ ಹಾಂಜಿಹಳ್ಳಿಯ ಯೋಧ ಹೆಚ್.ಮಧು(35) ಅವರು ಗುರುವಾರ ಸಂಜೆ ಮೃತಪಟ್ಟಿದ್ದಾರೆ.

ಮಧು ಅವರು ಕಳೆದ ಮೂರು ದಿನಗಳ ಹಿಂದಷ್ಟೇ ಕರ್ತವ್ಯಕ್ಕೆ ಮರಳಿದ್ದರು. ಗುರುವಾರ ಸಹೋದ್ಯೋಗಿಗಳೊಂದಿಗೆ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಏಕಾಏಕಿ ಅಸ್ವಸ್ಥಗೊಂಡು ಮೃತಪಟ್ಟಿರುವುದಾಗಿ ಗಡಿ ಭದ್ರತಾ ಪಡೆ ಕಚೇರಿಯ ಮೂಲಗಳು ತಿಳಿಸಿವೆ.

ಭಾರತೀಯ ಗಡಿ ಭದ್ರತಾ ಪಡೆಯಲ್ಲಿ 15 ವರ್ಷಗಳ ಕಾಲ ಸೇವೆ ಸಲ್ಲಿಸಿ, ಇನ್ನೇನು ಮೂರು ತಿಂಗಳಲ್ಲಿ ನಿವೃತ್ತಿ ಯಾಗಬೇಕಿದ್ದ ಮಧು ಅವರು ಕರ್ತವ್ಯದಲ್ಲಿದ್ದ ವೇಳೆ ಅಕಾಲಿಕವಾಗಿ ಮೃತಪಟ್ಟಿರುವುದು ಕುಟುಂಬಸ್ಥರು ಹಾಗು ಗ್ರಾಮಸ್ಥರಲ್ಲಿ ತೀವ್ರ ದುಃಖಕ್ಕೆ ಕಾರಣವಾಗಿದೆ. ಮಧು ಅವರ ನಿಧನದ ಸುದ್ದಿ ಹಾಂಜಿಹಳ್ಳಿ ಗ್ರಾಮಕ್ಕೆ ತಲುಪುತ್ತಿದ್ದಂತೆ ಗ್ರಾಮದಲ್ಲಿ ಶೋಕದ ವಾತಾವರಣ ನಿರ್ಮಾಣವಾಗಿದೆ. ಕುಟುಂಬಸ್ಥರ ಆಕ್ರಂಧನ ಮುಗಿಲು ಮುಟ್ಟಿದೆ. ಮೃತ ಮಧು ಅವರಿಗೆ



ತಂದೆ, ತಾಯಿ, ಪತ್ನಿ, ಎರಡು ತಿಂಗಳ ಗಂಡು ಮಗು ಇದ್ದು, ಅವರ ಸಾವಿನಿಂದ ಕುಟುಂಬಕ್ಕೆ ತುಂಬಲಾರದ ನೋವುಂಟಾಗಿದೆ.

ಯೋಧ ಮಧು ಅವರ ಪಾರ್ಥೀವ ಶರೀರವನ್ನು ಅಸ್ಸಾಂನಿಂದ ವಿಮಾನದ ಮೂಲಕ ಬೆಂಗಳೂರಿಗೆ ತರಲಾಗು ವುದು. ಅಲ್ಲಿಂದ ಸೇನಾ ವಾಹನದ ಮೂಲಕ ಹಾಂಜಿಹಳ್ಳಿ ಗ್ರಾಮಕ್ಕೆ ಕೊಂಡೊಯ್ಯಲಾಗುತ್ತದೆ ಎಂದು ಸೇನಾ ಮೂಲಗಳು ತಿಳಿಸಿವೆ. ಪಾರ್ಥೀವ ಶರೀರ ಗ್ರಾಮಕ್ಕೆ ಆಗಮಿಸಿದ ಬಳಿಕ ಸಾರ್ವಜನಿಕ ಅಂತಿಮ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲು ಗ್ರಾಮಸ್ಥರು ಸಿದ್ಧತೆ ನಡೆಸಿದ್ದಾರೆ. ಬಳಿಕ ಸೇನಾ ಸಿಬ್ಬಂದಿಯ ಉಪಸ್ಥಿತಿಯಲ್ಲಿ ಸಕಲ ಸೇನಾ ಗೌರವದೊಂದಿಗೆ ಅಂತ್ಯಕ್ರಿಯೆ ನೆರವೇರಿಸಲು ಸಿದ್ಧತೆ ಕೈಗೊಳ್ಳಲಾಗಿದೆ.

## ಆರು ತಿಂಗಳೊಳಗೆ ಜಿಲ್ಲಾಧಿಕಾರಿ ನೂತನ ಕಚೇರಿ ಉದ್ಘಾಟನೆ

• ಪ್ರಜೋದಯ ವರದಿ

**ಹಾಸನ :** ಜಿಲ್ಲಾಧಿಕಾರಿ ನೂತನ ಕಚೇರಿಯನ್ನು ಆರು ತಿಂಗಳಲ್ಲಿ ಉದ್ಘಾಟಿಸಬೇಕಿದ್ದು, ಬಾಕಿ ಕಾಮಗಾರಿಯನ್ನು ಅಷ್ಟರೊಳಗೆ ಪೂರ್ಣಗೊಳಿಸಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಶುಕ್ರವಾರ ಸಂಜೆ ನಿರ್ಮಾಣ ಹಂತದ ಕಟ್ಟಡ ಪರಿಶೀಲಿಸಿದ ಅವರು, ಕಾಮಗಾರಿಗೆ ಹೆಚ್ಚುವರಿ ಅನುದಾನ ನೀಡಲು ಸಾಧ್ಯವಿಲ್ಲ. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕಟ್ಟಡ ಕೆಡವಲು ಟೆಂಡರ್ ಕರೆಯಬೇಕು. ಅದೊಂದು ಬಿಟ್ಟು ಬೇರೆ ಯಾವ ಕೆಲಸಕ್ಕೂ ಅನುದಾನ ನೀಡುವುದಿಲ್ಲ. ಮುಂದಿನ ವಾರ ಅಗತ್ಯ ದಾಖಲೆಗಳೊಂದಿಗೆ ಬೆಂಗಳೂರಿಗೆ ಬಂದು ನನ್ನನ್ನು ಭೇಟಿಯಾಗಬೇಕು. ತ್ವರಿತ ಗತಿಯಲ್ಲಿ ಕೆಲಸ ಮಾಡುವ ಗುತ್ತಿಗೆದಾರನಿಗೆ ಜವಾಬ್ದಾರಿ ವಹಿಸಿ ಆದಷ್ಟು ಬೇಗ ಕೆಲಸ ಮುಗಿಸಬೇಕೆಂದು ಲೋಕೋಪಯೋಗಿ ಇಲಾಖೆ ಇಇ ಜಯಣ್ಣ ಅವರಿಗೆ ಸೂಚಿಸಿದರು.



**20 ಕೋ.ರೂ. ಮಂಜೂರು**

ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು, ನೂತನ ಜಿಲ್ಲಾಧಿಕಾರಿ ಕಚೇರಿಯನ್ನು ಮುಂದಿನ ಆರು ತಿಂಗಳಲ್ಲಿ ಉದ್ಘಾಟಿಸಲಾಗುವುದು. ವಿಧಾನಸೌಧ ಮಾದರಿಯಲ್ಲಿ ಸ್ವಾಗತ ಕಮಾನು ನಿರ್ಮಾಣವಾಗಬೇಕೆಂದು ಸೂಚಿಸಿದ್ದೇನೆಂದರು.

ಕಾಮಗಾರಿಗೆ ಇನ್ನು 20 ಕೋ. ರೂ. ಬೇಕೆಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ ಅವರಿಗೆ ಕೋರಿದ್ದೆವು. ಈಗಾಗಲೇ ಅನುದಾನ ಮಂಜೂರಾಗಿದೆ. ಈ ವರೆಗೆ 30 ಕೋ.ರೂ.ಗಳಲ್ಲಿ ಕೆಲಸ ಪೂರ್ಣಗೊಂಡಿದೆ. ನಿರೀಕ್ಷೆಯಂತೆ ಕಟ್ಟಡ ನಿರ್ಮಾಣವಾಗಿದೆ. ಹಳೇ ಕಟ್ಟಡ ಕೆಡವಲು ಸೂಚಿಸಿದ್ದೇನೆ. ಆ ಜಾಗದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗುವುದು. ಆದಷ್ಟು ಬೇಗ ಕಟ್ಟಡವನ್ನು ಸಾರ್ವಜನಿಕ ಸೇವೆಗೆ ಒದಗಿಸಲಾಗುವುದೆಂದು ಭರವಸೆ ನೀಡಿದರು.

ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ರಂಜಿತ್ ಗೊರೂರು ಮತ್ತಿತರರಿದ್ದರು.

## ಹೃದಯ ಸ್ತಂಭನಕ್ಕೆ ಇಬ್ಬರು ಸರ್ಕಾರಿ ಅಧಿಕಾರಿಗಳ ಸಾವು

• ಪ್ರಜೋದಯ ವರದಿ

**ಹಾಸನ:** ಸಕಲೇಶಪುರ ಹಾಗು ಹಾಸನ ನಗರದಲ್ಲಿ ಒಂದೇ ದಿನ ಇಬ್ಬರು ಸರ್ಕಾರಿ ಅಧಿಕಾರಿಗಳು ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಸಕಲೇಶಪುರದಲ್ಲಿ ಪಶುಸಂಗೋಪನೆ ಇಲಾಖೆ ಸಹಾಯಕ ನಿರ್ದೇಶಕರಾಗಿದ್ದ ಡಾ.ವೆಂಕಟೇಶ್ (55) ಹಾಗು ಹಾಸನದ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯ ಅಧೀಕ್ಷಕ ವೇಣು ಗೋಪಾಲ್ (45) ಅವರು ಸಾವನ್ನಪ್ಪಿದ್ದಾರೆ.

ಮೂಲತಃ ಚಿಕ್ಕಬಳ್ಳಾಪುರ ಜಿಲ್ಲೆಯವರಾದ ಡಾ.ವೆಂಕಟೇಶ್ ಅವರು ಸಕಲೇಶಪುರದಲ್ಲಿ ಪಶುಸಂಗೋಪನೆ ಇಲಾಖೆ ಸಹಾಯಕ ನಿರ್ದೇಶಕರಾಗಿ ಕಳೆದ ಐದಾರು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದರು. ಅವರ ಕುಟುಂಬ ಬೆಂಗಳೂರಿನಲ್ಲಿ ನೆಲೆಸಿದ್ದು, ಅವರು ಸಕಲೇಶಪುರದಲ್ಲಿ ಒಬ್ಬರೇ ವಾಸವಾಗಿದ್ದರು. ಗುರುವಾರ ಎಂದಿನಂತೆ ಕರ್ತವ್ಯ ಮುಗಿಸಿಕೊಂಡು ಮನೆಗೆ ತೆರಳಿದ್ದರು. ಶುಕ್ರವಾರ



ಡಾ.ವೆಂಕಟೇಶ್



ವೇಣುಗೋಪಾಲ್

ಬೆಳಿಗ್ಗೆ ದೂರವಾಣಿ ಕರೆ ಸ್ವೀಕರಿಸದ ಹಿನ್ನಲೆ ಅನುಮಾನಗೊಂಡು ಮನೆಗೆ ತೆರಳಿ ಪರಿಶೀಲಿಸಿದಾಗ ಹೃದಯಾಘಾತದಿಂದ ಮೃತಪಟ್ಟಿರುವುದು ತಿಳಿದುಬಂದಿದೆ.

ನಗರದ ಸದಾಶಿವನಗರದ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯ ಅಧೀಕ್ಷಕ ವೇಣುಗೋಪಾಲ್ ಶುಕ್ರವಾರ ಮುಂಜಾನೆ 5 ಗಂಟೆ ವೇಳೆಗೆ ಮನೆಯಲ್ಲಿ ಮಲಗಿದ್ದಾಗಲೇ ಹೃದಯಾಘಾತಕ್ಕೆ ಒಳಗಾಗಿ ಮೃತಪಟ್ಟಿದ್ದಾರೆ. ಅವರ ಅಕಾಲಿಕ ನಿಧನದಿಂದ ಶಿಕ್ಷಣ ಇಲಾಖೆ ಅಧಿಕಾರಿಗಳು ಹಾಗೂ ಸಹೋದ್ಯೋಗಿಗಳು ದುಃಖ ವ್ಯಕ್ತಪಡಿಸಿದ್ದಾರೆ.

## ಗ್ರಾಮಗಳಿಗೆ ತೆರಳಿ ಜನರ ಸಮಸ್ಯೆ ಆಲಿಸುವುದು ತಪ್ಪೇ

**ನನ್ನ ಹಕ್ಕಿಗೆ ಧಕ್ಕೆಯಾದರೆ ಕಾನೂನು ಹೋರಾಟ: ಶ್ರೇಯಸ್ ಎಚ್ಚರಿಕೆ**

• ಪ್ರಜೋದಯ ವರದಿ

ಹಾಸನ: ಸಂಸದನಾದ ನಾನು ಕೇವಲ ದಿಶಾ ಸಭೆಗೆ ಸೀಮಿತವಾಗಿ, ಕಚೇರಿಯಲ್ಲಿ ಕುಳಿತುಕೊಳ್ಳಬೇಕೇ, ಅಹವಾಲು ಹಿಡಿದು ಬರುವ ಜನರ ಸಮಸ್ಯೆಗೆ ಸ್ಪಂದಿಸಬಾರದೇ ಎಂದು ಸಂಸದ ಶ್ರೇಯಸ್ ಪಟೇಲ್ ಅವರು ಎ.ಮಂಜು ಆರೋಪಕ್ಕೆ ಟಾಂಗ್ ನೀಡಿದರು.

ಹಳ್ಳಿಮೈಸೂರು ಹೋಬಳಿಯಲ್ಲಿ ಸಭೆ ನಡೆಸಿದ್ದಕ್ಕೆ ಅರಕಲಗೂಡು ಶಾಸಕ ಎ.ಮಂಜು ಅವರ ಆಕ್ಷೇಪಕ್ಕೆ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಜನರ ಪರವಾಗಿ ಕೆಲಸ ಮಾಡಬಾರದಾ, ಜನರ ಧ್ವನಿಯಾಗಬಾರದಾ, ನಾಲ್ಕು ಗೋಡೆಗಳ ಮಧ್ಯೆಯೇ ಕುಳಿತಿರ ಬೇಕಾ ಎಂದು ಖಾರವಾಗಿ ಪ್ರಶ್ನಿಸಿದರು.

ಹಳ್ಳಿಮೈಸೂರು ನಮ್ಮ ಸ್ವಂತ ಹೋಬಳಿ ಹಾಗು ಕರ್ಮಭೂಮಿಯಾಗಿರುವುದರಿಂದ ಅಲ್ಲಿನ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಜನರ ಸಮಸ್ಯೆಗಳನ್ನು ಆಲಿಸಿದ್ದೇನೆ. ಹಿಂದುಳಿದ ಹೋಬಳಿಯಾಗಿರುವ ಹಿನ್ನಲೆಯಲ್ಲಿ ತಹಶೀಲ್ದಾರ್ ಹಾಗು ಕಾರ್ಯನಿರ್ವಹಣಾಧಿಕಾರಿಯನ್ನು ಕರೆಸಿ ಮಾಹಿತಿ ಪಡೆಯಲು ತೆರಳಿದ್ದ ಸಂದರ್ಭದಲ್ಲಿ ಸಾವಿರಾರು ಜನರು ತಮ್ಮ ಅಹವಾಲುಗಳೊಂದಿಗೆ ಆಗಮಿಸಿ ದ್ದರು. ಕೈಯಲ್ಲಿ ಅರ್ಜಿ ಹಾಗೂ ಮನವಿ ಪತ್ರಗಳನ್ನು ಹಿಡಿದು ಬಂದಿದ್ದ ಜನರ ಸಮಸ್ಯೆ ಆಲಿಸುವುದು ತಮ್ಮ ಕರ್ತವ್ಯವೆಂದು ಹೇಳಿದರು.

ನಾನು ಸಭೆ ನಡೆಸಿರುವುದು ಹಕ್ಕುಚ್ಯುತಿ ಆಗಿದೆ ಎಂದು ಎ. ಮಂಜು ಅವರು ಪತ್ರ ಬರೆದಿದ್ದಾರೆ.



> ದಿಶಾ ಸಮಿತಿಯ ಹೆಸರಿನಲ್ಲಿ ಸಂಸದರ ಕೆಲಸವನ್ನು ಕೇವಲ ಸಭೆಗಳಿಗೆ ಸೀಮಿತಗೊಳಿಸಿದರೆ ಜನರಿಗೆ ನ್ಯಾಯ ದೊರೆಯುತ್ತದೆಯೇ, ಅಧಿಕಾರಿಗಳು ಪ್ರಾಮಾಣಿಕತೆ ಹಾಗು ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಹೆಮ್ಮೆ ಇದೆ. ಆದರೆ, ಅವರನ್ನು ಸಂದಿಗ್ಧತೆಗೆ ಸಿಲುಕಿಸುವ ರೀತಿಯ ಪರಿಸ್ಥಿತಿ ನಿರ್ಮಾಣ ಮಾಡಬಾರದು.
> -ಶ್ರೇಯಸ್ ಪಟೇಲ್, ಸಂಸದ

ಆದರೆ, ಇದರಲ್ಲಿ ಹಕ್ಕುಚ್ಯುತಿ ಎಲ್ಲಿ ಬರುತ್ತದೆ ಎಂದು ಪ್ರಶ್ನಿಸಿದ ಶ್ರೇಯಸ್ ಪಟೇಲ್ ಅವರು, ನಾನು ದಿಶಾ ಸಮಿತಿಯ ಅಧ್ಯಕ್ಷರಾಗಿದ್ದು, ಗ್ರಾಮ ಪಂಚಾಯಿತಿಗಳಲ್ಲಿ ಸಭೆ ನಡೆಸುವ ಕುರಿತು ದಿಶಾ ಸಮಿತಿಯಲ್ಲಿಯೇ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸ್ಪಷ್ಟಪಡಿಸಿದರು.

» ನಾಲ್ಕನೇ ಪುಟದಲ್ಲಿ

## ಅರಣ್ಯ ಸಂಪತ್ತು ರಕ್ಷಣೆಗೆ ಎಲ್ಲರೂ ಕೈ ಜೋಡಿಸಬೇಕು

• ಪ್ರಜೋದಯ ವರದಿ

**ಹಾಸನ:** ಅರಣ್ಯ ಸಂಪತ್ತು ಹಾಗು ವನ್ಯಜೀವಿಗಳ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ದೇಶದ ನೈಸರ್ಗಿಕ ಸಂಪತ್ತನ್ನು ಕಾಪಾಡಲು ಎಲ್ಲರೂ ಕೈಜೋಡಿಸಬೇಕೆಂದು ಜಿಲ್ಲಾ ಮತ್ತು ಸತ್ರ ನ್ಯಾಯಾಧೀರಾದ ಹೇಮಾವತಿ ಅವರು ಹೇಳಿದರು.

ನಗರದಲ್ಲಿ ಶುಕ್ರವಾರ ನಡೆದ ಅರಣ್ಯ ಹುತಾತ್ಮರ ದಿನಾಚರಣೆಯಲ್ಲಿ ಹುತಾತ್ಮ ಅರಣ್ಯ ನೌಕರರ ಸ್ಮಾರಕಕ್ಕೆ ಗೌರವ ಸಲ್ಲಿಸಿ ಮಾತನಾಡಿದ ಅವರು , 1730ರ ಸೆ.11ರಂದು ರಾಜಸ್ಥಾನದ ಖೇಜರ್ಲಿ ಗ್ರಾಮದಲ್ಲಿ ಅಮೃತಾ ದೇವಿ ನೇತೃತ್ವದಲ್ಲಿ ಅರಣ್ಯ ಸಂರಕ್ಷಣೆಗಾಗಿ ನಡೆದ ಹೋರಾಟವನ್ನು ಎಲ್ಲರೂ ನೆನಪಿಟ್ಟುಕೊಳ್ಳಬೇಕು. ಮರಗಳ ರಕ್ಷಣೆಗಾಗಿ ಪ್ರಾಣ ತ್ಯಾಗ ಮಾಡಿದವರು ನಮಗೆ ಆದರ್ಶರಾಗುತ್ತಾರೆಂದರು.



ಅರಣ್ಯ ಇಲಾಖೆಯ ಸಿಬ್ಬಂದಿ ಕರ್ತವ್ಯದ ವೇಳೆ ಹಲವು ಸವಾಲು ಎದುರಿಸುತ್ತಾರೆ. ವನ್ಯಜೀವಿಗಳ ಹತ್ಯೆಯನ್ನು ಎಲ್ಲರೂ ಖಂಡಿಸಬೇಕು. ಅರಣ್ಯ ಸಂಪತ್ತಿನ ರಕ್ಷಣೆಗಾಗಿ ಕೆಲಸ ಮಾಡುವ ಸಿಬ್ಬಂದಿಯ ಕುಟುಂಬದ ನೋವನ್ನು ಅರ್ಥಮಾಡಿಕೊಳ್ಳಬೇಕು. ಕರ್ತವ್ಯದ ಜೊತೆಗೆ ಆರೋಗ್ಯಕ್ಕೂ ಆದ್ಯತೆ ನೀಡಬೇಕು. ಏಕೆಂದರೆ ಕುಟುಂಬಗಳು ತಮ್ಮನ್ನು ಅವಲಂಬಿಸಿರುತ್ತವೆಂದು ಹೇಳಿದರು.

ಎಲ್ಲಾ ಸವಲತ್ತುಗಳೊಂದಿಗೆ ಬದುಕುವುದು ಮಾನವನ ಹಕ್ಕು. ಆದರೆ, ಪ್ರಸ್ತುತ ದಿನಮಾನಗಳಲ್ಲಿ ಹೋರಾಟದಿಂದಲೇ ಹಕ್ಕು ಪಡೆಯುವ ಪರಿಸ್ಥಿತಿ

» ನಾಲ್ಕನೇ ಪುಟದಲ್ಲಿ

## ಗಣೇಶ ಹಬ್ಬ : ಕಾನೂನು ಪಾಲನೆಗೆ ಎಸ್‌ಪಿ ಸೂಚನೆ

• ಪ್ರಜೋದಯ ವರದಿ

**ಹಾಸನ :** ಗೌರಿ-ಗಣೇಶ ಹಬ್ಬದ ಉದ್ದೇಶದಿಂದ ಶಾಂತಿ ಸಭೆ ನಡೆಸಲಾಗಿದೆ. ಗಣೇಶ ಪ್ರತಿಷ್ಠಾಪನೆ ವೇಳೆ ಕಾನೂನು ಪಾಲಿಸುವುದು ಎಲ್ಲರ ಜವಾಬ್ದಾರಿ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿದ ಅವರು, ಸೆ.14 ರಿಂದ ಗಣೇಶೋತ್ಸವ ಪ್ರಾರಂಭವಾಗಲಿದೆ. ಜಿಲ್ಲಾದ್ಯಂತ ಕಳೆದ ವರ್ಷ 2542 ಸಾರ್ವಜನಿಕ ಸ್ಥಳಗಳಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪಿಸಿದ್ದು, ಈ ವರ್ಷ



ಅವುಗಳ ಸಂಖ್ಯೆ ಹೆಚ್ಚಿರಬಹುದು. ಅವಘಡ ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ. ಪೊಲೀಸ್ ಠಾಣಾ ಮಟ್ಟದಲ್ಲಿ ಶಾಂತಿಸಭೆ ನಡೆಸಲಾಗಿದೆ ಎಂದರು.

ಈಗಾಗಲೇ ಗಣೇಶ ಉತ್ಸವ ಸಮಿತಿಯವರೊಂದಿಗೆ ಚರ್ಚೆ ನಡೆಸಲಾಗಿದೆ. ಜಿಲ್ಲಾಡಳಿತದೊಂದಿಗೆ ಸಭೆ ನಡೆಸಿ ಏಕ ಗವಾಕ್ಷಿ ವ್ಯವಸ್ಥೆ ಜಾರಿಗೊಳಿಸಲಾಗಿದೆ. ತಾಲ್ಲೂಕು ಕಚೇರಿ ಮೂಲಕ ಗಣೇಶ ಪ್ರತಿಷ್ಠಾಪನೆಗೆ ಅನುಮತಿ ನೀಡಲಾಗುತ್ತದೆ. ಗಣೇಶ ಮೂರ್ತಿ ಕೂರಿಸಲು ಜಾಗದ ಮಾಲೀಕರ, ಸೆಸ್ಕಾಂ, ಪರಿಸರ ಮಾಲಿನ್ಯ ಮತ್ತು ನಿಯಂತ್ರಣ ಮಂಡಳಿ, ಅಗ್ನಿಶಾಮಕ ಠಾಣೆ, ಗಣಪತಿಯ ಮೂರ್ತಿ ಎತ್ತರ 15 ಅಡಿಗಿಂತ ಹೆಚ್ಚಿ

» ನಾಲ್ಕನೇ ಪುಟದಲ್ಲಿ

## ಜೀವ ಜಲ ವಿಮೆ: ಅರ್ಜಿ ಸಲ್ಲಿಕೆಗೆ ಸೆ. 30 ಕಡೇ ದಿನ



• ಪ್ರಜೋದಯ ವರದಿ

**ಬೆಂಗಳೂರು:** ಕೃಷಿಯಲ್ಲಿ ತೊಡಗಿಸಿಕೊಂಡಿರುವ ಸಣ್ಣ ಹಾಗು ಅತಿ ಸಣ್ಣ ರೈತರಿಗೆ ಸೌಲಭ್ಯವನ್ನು ಪಡೆದುಕೊಳ್ಳಲು ಕರ್ನಾಟಕ ಸರ್ಕಾರವು ಅವಕಾಶವನ್ನು ಮಾಡಿಕೊಟ್ಟಿದೆ.

202627ನೇ ಸಾಲಿನಲ್ಲಿ ಜೀವ ಜಲ ಎನ್ನುವ ಯೋಜನೆಯಡಿ ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ವೀರಶೈವ-ಲಿಂಗಾಯತ ಅಭಿವೃದ್ಧಿ ನಿಗಮದಿಂದ ಹಲವು ಯೋಜನೆಗಳನ್ನು ಪ್ರಕಟಿಸಲಾಗಿದೆ. ಅದರಲ್ಲಿ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ 98 ಸಾವಿರ ರೂ. ಹಾಗು ಪಟ್ಟಣ ಪ್ರದೇಶದವರಿಗೆ 1.20 ಲ.ರೂ. ಮಿತಿಯೊಳಗಿರುವ ಸಣ್ಣ ಮತ್ತು ಅತಿ ಸಣ್ಣ ರೈತರ ಜಮೀನುಗಳಿಗೆ ಕೊಳವೆ ಬಾವಿ ಕೊರೆಸುವ ಮುಖೇನ ನೀರಾವರಿ ಸೌಲಭ್ಯ ಒದಗಿಸಲಾಗುವುದು.

ಕನಿಷ್ಟ 2 ಎಕರೆ ಹಾಗು ಗರಿಷ್ಟ 5 ಎಕರೆ ಒಳಗೆ ಜಮೀನು ಹೊಂದಿರಬೇಕು. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ರೈತರ ಫ್ರೂಟ್ಸ್ ಐಡಿ ಮತ್ತು ಸಣ್ಣ ಹಿಡುವಳಿದಾರರ ಪ್ರಮಾಣ ಪತ್ರ ಹೊಂದಿರಬೇಕು ಎಂದು ತಿಳಿಸಲಾಗಿದೆ. ಸೌಲಭ್ಯ ಪಡೆಯಬಯಸುವ ಫಲಾಪೇಕ್ಷಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಸೆ. 30 ಕೊನೆಯ ದಿನವಾಗಿದೆ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ.

## ಕಂಬಿದಿಣ್ಣೆಯಲ್ಲಿ 40ಕ್ಕೂ ಹೆಚ್ಚು ಕಾಡಾನೆಗಳ ಹಿಂಡು



• ಪ್ರಜೋದಯ ವರದಿ

**ಬೇಲೂರು:** ಹಿಂಡು ಹಿಂಡಾಗಿ ಬಂದ 40ಕ್ಕೂ ಹೆಚ್ಚು ಕಾಡಾನೆಗಳು ರಸ್ತೆ ದಾಟಿ, ಕಾಫಿ ತೋಟಕ್ಕೆ ತೆರಳಿದ ಘಟನೆ ತಾಲ್ಲೂಕಿನ ಕಂಬಿದಿಣ್ಣೆ ಗ್ರಾಮದಲ್ಲಿ ನಡೆದಿದೆ.

ಕಾಫಿ ತೋಟದಲ್ಲಿ ಬೀಡು ಬಿಟ್ಟಿದ್ದ ಕಾಡಾನೆಗಳ ಹಿಂಡು ಏಕಾಏಕಿ ರಸ್ತೆ ದಾಟಲು ಮುಂದಾಗಿದೆ. ಈ ವೇಳೆ ಆನೆಗಳನ್ನು ಕಂಡು ಗಾಬರಿಗೊಂಡ ಗ್ರಾಮಸ್ಥರು ಕಿರುಚಾಡಿದ್ದಾರೆ. ಈ ವೇಳೆ ರೊಚ್ಚಿಗೆದ್ದ ಗಜಪಡೆ ಘೀಳಿಟ್ಟು ಅಬ್ಬರಿಸಿದ್ದು, ಭಯಭೀತಗೊಂಡ ಆನೆಗಳು ಮರಗಳನ್ನು ಮುರಿದುಕೊಂಡು ರಸ್ತೆ ದಾಟಿವೆ.

ಹಿಂಡಿನಲ್ಲಿ ಮರಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದವು. ಒಂದೇ ಬಾರಿಗೆ ಇಷ್ಟೊಂದು ಸಂಖ್ಯೆಯಲ್ಲಿ ಕಾಡಾನೆಗಳು ಗ್ರಾಮಕ್ಕೆ ಸಮೀಪದಲ್ಲೇ ಕಾಣಿಸಿಕೊಂಡಿರುವುದು ಸ್ಥಳೀಯರಲ್ಲಿ ಆತಂಕ ಮೂಡಿಸಿದೆ. ಸದ್ಯ ಕಾಡಾನೆಗಳ ಹಿಂಡು ಕಾಫಿ ತೋಟದಲ್ಲೇ ಬೀಡು ಬಿಟ್ಟಿರುವುದರಿಂದ ಸುತ್ತಮುತ್ತಲಿನ ಗ್ರಾಮಗಳ ರೈತರು ಹಾಗೂ ಕಾಫಿ ಬೆಳೆಗಾರರಲ್ಲಿ ಆತಂಕ ಮತ್ತಷ್ಟು ಹೆಚ್ಚಾಗಿದೆ. ತೋಟಗಳಿಗೆ ಕೆಲಸಕ್ಕೆ ತೆರಳುವ ಕಾರ್ಮಿಕರು ಹಾಗೂ ರೈತರು ಎಚ್ಚರಿಕೆಯಿಂದ ಸಂಚರಿಸುವಂತಾಗಿದೆ.

ತಾಲ್ಲೂಕಿನ ವಿವಿಧ ಭಾಗಗಳಲ್ಲಿ ಕಾಡಾನೆಗಳ ಹಾವಳಿ ನಿರಂತರವಾಗಿದ್ದು, ಕಾಫಿ ತೋಟಗಳಿಗೆ ನುಗ್ಗಿ ಬೆಳೆ ಹಾನಿ ಮಾಡುತ್ತಿರುವುದರಿಂದ ರೈತರು ಹಾಗೂ ಕಾಫಿ ಬೆಳೆಗಾರರು ಹೈರಾಣಾಗಿದ್ದಾರೆ. ತಾಲ್ಲೂಕಿನಲ್ಲೇ 70ಕ್ಕೂ ಹೆಚ್ಚು ಕಾಡಾನೆಗಳು ಸಂಚರಿಸುತ್ತಿವೆ ಎನ್ನಲಾಗಿದ್ದು, ಹಿಂಡುಗಳ ಸಂಚಾರದಿಂದ ಗ್ರಾಮೀಣ ಪ್ರದೇಶಗಳಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ. ಅರಣ್ಯ ಇಲಾಖೆ ಆನೆಗಳ ಮೇಲೆ ನಿಗಾ ಇರಿಸ ಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

**ಸೆಸ್ಕಾಂ ಅಧಿಕಾರಿಗಳಿಗೆ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಸೂಚನೆ**

## ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಒದಗಿಸಿ

• ಪ್ರಜೋದಯ ವರದಿ

**ಹಾಸನ:** ರೈತರು, ಸಾರ್ವಜನಿಕರು ಹಾಗು ಕೈಗಾರಿಕಾ ಕ್ಷೇತ್ರಕ್ಕೆ ತೊಂದರೆಯಾಗದಂತೆ ತ್ವರಿತವಾಗಿ ಸಮಸ್ಯೆಗಳನ್ನು ಬಗೆಹರಿಸಲು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಸೆಸ್ಕಾಂ ಅಧಿಕಾರಿಗಳಿಂದ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಎದುರಾಗುತ್ತಿರುವ ವಿದ್ಯುತ್ ಸಮಸ್ಯೆಗಳ ಕುರಿತು ಸಮಗ್ರ ಮಾಹಿತಿ ಪಡೆದು ಮಾತನಾಡಿದ ಅವರು, ಜಿಲ್ಲೆಯಲ್ಲಿ ವಿದ್ಯುತ್ ಪೂರೈಕೆ, ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ, ಗ್ರಾಮೀಣ ಹಾಗು ನಗರ ಪ್ರದೇಶಗಳಲ್ಲಿ ಉಂಟಾಗುತ್ತಿರುವ ಲೋಡ್ ಶೆಡ್ಡಿಂಗ್, ಸುಟ್ಟು ಹೋದ ವಿದ್ಯುತ್ ಪರಿವರ್ತಕಗಳ ಬದಲಾವಣೆ ಸೇರಿ ವಿವಿಧ ಸಮಸ್ಯೆಗಳ ಕುರಿತು ಅಗತ್ಯ ಕ್ರಮ ತೆಗೆದು ಕೊಳ್ಳುವಂತೆ ತಿಳಿಸಿದರು.



ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಸಾರ್ವಜನಿಕರು ಹಾಗು ರೈತರಿಂದ ವಿದ್ಯುತ್ ಸಮಸ್ಯೆಗಳ ಕುರಿತು ದೂರುಗಳು ಬರುತ್ತಿರುವ ಹಿನ್ನಲೆ ಪ್ರತಿಯೊಂದು ತಾಲ್ಲೂಕಿನಲ್ಲಿ ಎದುರಾಗುತ್ತಿರುವ ಸಮಸ್ಯೆಗಳ ಸ್ವರೂಪ ಹಾಗು ಅವುಗಳ ಪರಿಹಾರಕ್ಕೆ ಕೈಗೊಂಡಿರುವ ಕ್ರಮಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆಯಲಾಯಿತು.

ಕೃಷಿ ಚಟುವಟಿಕೆಗಳಿಗೆ ಅಗತ್ಯವಿರುವ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗದಂತೆ ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ನೀಡಬೇಕು. ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾದ ಸಂದರ್ಭದಲ್ಲಿ ರೈತರು ಸಂಕಷ್ಟಕ್ಕೆ ಸಿಲುಕದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಅದೇ ರೀತಿ ಗ್ರಾಮೀಣ, ನಗರ ಪ್ರದೇಶಗಳಲ್ಲಿ ಅನಗತ್ಯವಾಗಿ ಲೋಡ್ ಶೆಡ್ಡಿಂಗ್ ಮಾಡದಂತೆ ಕ್ರಮವಹಿಸಬೇಕು. ಅನಿವಾರ್ಯ ಕಾರಣಗಳಿಂದ ವಿದ್ಯುತ್ ವ್ಯತ್ಯಯ ಉಂಟಾದರೆ, ದುರಸ್ತಿ ಕಾರ್ಯವನ್ನು ವಿಳಂಬ ಮಾಡದೆ ತ್ವರಿತವಾಗಿ ಪೂರ್ಣಗೊಳಿಸಿ ವಿದ್ಯುತ್ ಪೂರೈಕೆ ಪುನಃಸ್ಥಾಪಿಸಬೇಕೆಂದು ನಿರ್ದೇಶನ ನೀಡಿದರು.

ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಶುಭಂಶುಕ್ಲಾ ಮತ್ತಿತರರು ಹಾಜರಿದ್ದರು.



> ಹಲಸಿನ ಮರದ ಮಹಿಮೆಯನ್ನು ಪೂರ್ತಿಯಾಗಿ ಅರಿಯಬೇಕೆಂದರೆ ನಮ್ಮ ರಾಜ್ಯದ ಕರಾವಳಿ ಮತ್ತು ಮಲೆನಾಡಿನ ಪ್ರದೇಶದಲ್ಲಿ ಸುತ್ತಾಡಬೇಕು. ಬಯಲು ಸೀಮೆಯಲ್ಲಿ, ಮೈಸೂರು ಸೀಮೆಯಲ್ಲಿ ಹಲಸಿನ ಹಣ್ಣು ಸಾಕಷ್ಟು ಪ್ರಸಿದ್ಧ ನಿಜ; ಹಣ್ಣಿನ ರುಚಿಗೆ ಸಹ ಬಯಲುಸೀಮೆಯೇ ಹೆಸರುವಾಸಿ. ಆದರೆ ಹಲಸಿನ ಮರದ ಮೋಪು, ಅದರ ಎಲೆಯೂ ಸೇರಿದಂತೆ, ಹಲಸನ್ನು ಸಂಪೂರ್ಣವಾಗಿ ತಮ್ಮ ದಿನಚರಿಯಲ್ಲಿ ಆವಾಹಿಸಿಕೊಂಡ ಪರಿಯನ್ನು ನೋಡಬೇಕೆಂದರೆ ಮಲೆನಾಡು ಮತ್ತು ಕರಾವಳಿಯೇ ಸೂಕ್ತ ಪ್ರದೇಶ. ಹಲಸಿನಹಣ್ಣಿನ ರುಚಿಯ ವಿಚಾರಕ್ಕೆ ಬಂದರೆ ಬಯಲುಸೀಮೆಯದೇ ಮೇಲುಗೈ ಎಂದು ನನ್ನ ಅನುಭವ.

# ಹಲಸಿನ ಮರದ ದಶಾವತಾರಗಳು

ಕೇಳಿದ್ದನ್ನೆಲ್ಲ ಕೊಡುವ ಮರವನ್ನು ಕಲ್ಪವೃಕ್ಷ ಎಂದು ಕರೆಯುವುದು ಎಲ್ಲರಿಗೂ ಗೊತ್ತೇ ಇದೆ. ತೆಂಗಿನ ಮರವು ನಮ್ಮ ನಿಮ್ಮೆಲ್ಲರ ಮೆಚ್ಚಿನ ಕಲ್ಪವೃಕ್ಷ; ಅದನ್ನು ಮೀರುವ ಇನ್ನೊಂದು ಮರವಿಲ್ಲ ಎನ್ನಬಹುದು. ತೆಂಗು ತನ್ನಷ್ಟಕ್ಕೆ ತಾನೇ ಚೆನ್ನಾಗಿ ಬೆಳೆಯುವ ಅರಸಿಕೆರೆ ತಿಪಟೂರು ಪ್ರದೇಶದವರು ತಮ್ಮನ್ನು ಕಲ್ಪವೃಕ್ಷದ ನಾಡು ಎಂದೂ ಕರೆದುಕೊಳ್ಳುವುದುಂಟು. ಇಂತಹ ಕಲ್ಪವೃಕ್ಷಕ್ಕೆ ತುಸುವಾದರೂ ಹೋಲಿಸಬಹುದಾದ ಒಂದು ಮರವೆಂದರೆ ಹಲಸಿನ ಮರ ಎಂದು ನನ್ನ ಅಭಿಪ್ರಾಯ. ಮೂಲತಃ ಕಾಡುಮರವಾದ ಹಲಸಿನ ಇಂತಹದೊಂದು ದೊಡ್ಡ ಸ್ಥಾನವನ್ನು ನೀಡಿದ್ದನ್ನು ಕಂಡು, ಆರಂಭದಲ್ಲಿ ಕೆಲವರಾದರೂ ತುಸು ಅಸಮ್ಮತಿ ಸೂಚಿಸಿಯಾರೇನೋ! ಅದಕ್ಕೆ ಪುರಾವೆಯಾಗಿ ಹಲಸಿನ ಹಲವು ರೂಪಗಳನ್ನೇ ಪಟ್ಟಿ ಮಾಡಬಹುದು. ಆದರೆ ಒಂದಂತೂ ನಿಜ.

ಹಲಸಿನ ಮರದ ಮಹಿಮೆಯನ್ನು ಪೂರ್ತಿಯಾಗಿ ಅರಿಯಬೇಕೆಂದರೆ ನಮ್ಮ ರಾಜ್ಯದ ಕರಾವಳಿ ಮತ್ತು ಮಲೆನಾಡಿನ ಪ್ರದೇಶದಲ್ಲಿ ಸುತ್ತಾಡಬೇಕು. ಬಯಲು ಸೀಮೆಯಲ್ಲಿ, ಮೈಸೂರು ಸೀಮೆಯಲ್ಲಿ ಹಲಸಿನ ಹಣ್ಣು ಸಾಕಷ್ಟು ಪ್ರಸಿದ್ಧ ನಿಜ; ಹಣ್ಣಿನ ರುಚಿಗೆ ಸಹ ಬಯಲುಸೀಮೆಯೇ ಹೆಸರುವಾಸಿ. ಆದರೆ ಹಲಸಿನ ಮರದ ಮೋಪು, ಅದರ ಎಲೆಯೂ ಸೇರಿದಂತೆ, ಹಲಸನ್ನು ಸಂಪೂರ್ಣವಾಗಿ ತಮ್ಮ ದಿನಚರಿಯಲ್ಲಿ ಆವಾಹಿಸಿಕೊಂಡ ಪರಿಯನ್ನು ನೋಡಬೇಕೆಂದರೆ ಮಲೆನಾಡು ಮತ್ತು ಕರಾವಳಿಯೇ ಸೂಕ್ತ ಪ್ರದೇಶ. ಹಲಸಿನಹಣ್ಣಿನ ರುಚಿಯ ವಿಚಾರಕ್ಕೆ ಬಂದರೆ ಬಯಲುಸೀಮೆಯದೇ ಮೇಲುಗೈ ಎಂದು ನನ್ನ ಅನುಭವ.

ಚನ್ನಪಟ್ಟಣ ಸನಿಹದ ಹಲಸಿನಹಳ್ಳಿ ಎಂಬ ಊರಿನಲ್ಲಿ ಬೆಳೆದಿದ್ದ ಹಲಸಿನ ಹಣ್ಣನ್ನು ಒಂದೆರಡು ಬಾರಿ ತಿಂದಿದ್ದೆ: ಅದೆಷ್ಟು ರುಚಿ ಎಂದರೆ, ನೆನಪಿಸಿಕೊಂಡರೆ ಈಗಲೂ ಬಾಯಲ್ಲಿ ನೀರೂರುತ್ತದೆ ಮತ್ತು ಇನ್ನಷ್ಟು ತಿನ್ನಬೇಕು ಎನಿಸುತ್ತದೆ. ಕೊಬ್ಬರಿ ಕಾಯಿ ಎಂದು ಕರೆಯುವ ಆ ಸುತ್ತಮುತ್ತಲಿನಲ್ಲಿ ಬೆಳೆಯುವ ಹಲಸಿನ ಹಣ್ಣಿನ ತೊಳೆಯ ಸಮಾನ ರುಚಿಯನ್ನು ನಾನು ಬೇರೆ ಎಲ್ಲೂ ಕಂಡಿಲ್ಲ. ಅದೇ ರೀತಿ ಅರಕಲಗೂಡು ಹತ್ತಿರದ ಮುತ್ತಿಗೆ ಎಂಬ ಊರಿನ ಹಲಸಿನ ಹಣ್ಣು ಸಹ ಸಾಕಷ್ಟು ಪ್ರಸಿದ್ಧವಾಗಿದೆ.

ಹಿಂದೆ ಮೈಸೂರು ಮಹಾರಾಜರ ಅರಮನೆಗೆ ಪ್ರತಿವರ್ಷ ಮುತ್ತಿಗೆಯಿಂದ ಹಲಸಿನ ಹಣ್ಣನ್ನು ತರಿಸಿಕೊಳ್ಳುತ್ತಿದ್ದರು ಎಂದು ಆ ಊರಿನವರು ಹೆಮ್ಮೆಯಿಂದ ಹೇಳುವುದನ್ನು ಕೇಳಿಸಿಕೊಂಡಿದ್ದೆ ಮತ್ತು ಅಲ್ಲಿನ ಹಣ್ಣನ್ನು ತಿನ್ನುವ ಅವಕಾಶ ನನಗೂ ದೊರಕಿತ್ತು. ಚಿಕ್ಕಮಗಳೂರು ಜಿಲ್ಲೆಯ ಸಖರಾಯಪಟ್ಟಣದ ಹಲಸಿನ ಹಣ್ಣು ಸಕ್ಕರೆಯ ರೀತಿ ರುಚಿ ಎಂದು ಹೇಳುವುದುಂಟು. ಇದೇ ರೀತಿ ಚೇಳೂರು ಹಲಸು ಸಹ ಪ್ರಸಿದ್ಧ. ಹಾಸನ, ಕನಕಪುರ ಮೊದಲಾದ ಕಡೆಗಳ ಹಣ್ಣುಗಳು ನಿಜಕ್ಕೂ ಬಲು ರುಚಿ.

ಮಳೆ ಹದವಾಗಿ ಅಥವಾ ತುಸು ಕಡಿಮೆ ಬೀಳುವ ಪ್ರದೇಶದಲ್ಲಿ ಇರುವುದರಿಂದಲೇ ಬಯಲು ಸೀಮೆಯ ಹಲಸಿನ ರುಚಿ ಜಾಸ್ತಿ ಎಂದೆನ್ನಬಹುದು. ಇದರ ಹೋಲಿಕೆಯಲ್ಲಿ ಕರಾವಳಿ ಮತ್ತು ಮಲೆನಾಡಿನ ಹಲಸಿನ ಹಣ್ಣಿಗೆ ಸಿಹಿ ಕಡಿಮೆ. ಜೂನ್ ಜುಲೈನಲ್ಲಿ ಅಧಿಕವಾಗಿ ಸುರಿಯುವ ಮಳೆಯಿಂದಾಗಿ, ಅಲ್ಲಿನ ಹಲಸಿನ ಕಾಯಿಯ ಒಳಗೆ ನೀರು ಹೋಗಿ, ಸಪ್ಪಗೆ ಆಗುತ್ತವೆ. ನಮ್ಮೂರಿನ ಕೆಲವು ಹಲಸಿನ ಮರಗಳ ಹಣ್ಣುಗಳನ್ನು ಬಿಡಿಸಿದರೆ ತೊಳೆಯ ಒಳಗಿನ ಬೀಜ ಅದಾಗಲೇ ಬೇರು ಬಿಟ್ಟಿರುತ್ತದೆ!

ಅಂದರೆ ಮಳೆ ಜಾಸ್ತಿಯಾದ ಗುರುತು ಅದು. ಅಂತಹ ತೊಳೆಗಳ ರುಚಿ ಕಡಿಮೆ. ಹಾಗಂತ ನಮ್ಮ ಪ್ರದೇಶದಲ್ಲಿ ತುಂಬಾ ರುಚಿಯಾದ ಹಲಸಿನ ಹಣ್ಣುಗಳು ಇಲ್ಲವೇ ಎಂದು ನೀವು ಕೇಳಿದರೆ, ನಮ್ಮೂರಿನ ಹಣ್ಣುಗಳನ್ನು ಬಿಟ್ಟುಕೊಡಲು ನಾನಂತೂ ತಯಾರಿಲ್ಲ. ನಮ್ಮೂರಿನ ಸನಿಹದ ಅಬ್ಲಿಕಟ್ಟೆ ಎಂಬ ಹಳ್ಳಿಯ ಬಿಳಿ ಬಕ್ಕೆ ಎಂಬ ಹಲಸಿನ ಮರದ ಹಣ್ಣುಗಳು ಭಾರಿ ರುಚಿಯಾಗಿದ್ದವು: ತೊಳೆಗಳ ಬಣ್ಣ ಬಿಳಿ, ರುಚಿಯಲ್ಲಿ ಅಪ್ರತಿಮ. ಈಗ ಆ ಮರ ಇಲ್ಲದಿದ್ದರೂ, ಅದರ ಪೀಳಿಗೆಯ ಮರಗಳು, ತುಸು ರುಚಿ ಬದಲಿಸಿಕೊಂಡು ಅಲ್ಲಲ್ಲಿ ಇವೆ.

ನಮ್ಮೂರಿನ ಸುತ್ತಮುತ್ತಲು ತುಂಬಾ ವೈವಿಧ್ಯದ ಹಣ್ಣು ನೀಡುವ ಹಲವು ಹಲಸಿನ ಮರಗಳಿದ್ದವು. ಕೆಲವು ಮರಗಳ ಕಾಯಿಗಳು ಚಿಕ್ಕವು, ಆದರೂ ರುಚಿ ಜಾಸ್ತಿ. ಇನ್ನು ಕೆಲವು ಮರಗಳ ಕಾಯಿಗಳೆಂದರೆ ಒಂದಾಳು ಹೊರುವ ತೂಕ! ಒಮ್ಮೆ ಕತ್ತರಿಸಿದರೆ ಮನೆಮಂದಿಯೆಲ್ಲಾ ತಿನ್ನಬಹುದು ಮತ್ತು ಆ ದಿನ ಮಧ್ಯಾಹ್ನ ಅಡುಗೆ ಮಾಡುವ ಕೆಲಸವಿಲ್ಲ, ಅಷ್ಟು ತೊಳೆಗಳು! ಅಷ್ಟೇ ರುಚಿ. ಕೆಲವು ಹಣ್ಣುಗಳಲ್ಲಿ ಸೊನೆ ಅಥವಾ ಬಿಳಿ ಅಂಟು ಕಡಿಮೆ. ಅಂತ ಹಣ್ಣುಗಳಿಗೆ ಹೆಚ್ಚು ಬೇಡಿಕೆ. ಕರಾವಳಿ ಪ್ರದೇಶದಲ್ಲಿ ಇಂಬ ಎಂಬ ಮೆದು ತೊಳೆಯ ಹಲಸಿನ ಹಣ್ಣು ಸಿಗುತ್ತದೆ. (ತುಳುವೆ ಎಂದೂ ಕರೆಯುವುದುಂಟು).

ಇಂತಹ ತಳಿಯ ಕೆಲವು ಮರಗಳ ಹಣ್ಣುಗಳು ಬಲು ರುಚಿ; ಅದರಲ್ಲೂ, ಹಲ್ಲುಗಳು ಇಲ್ಲದ ಹಳಬರಿಗೆ ಇಂಬ ಎಂದರೆ ಬಹಳ ಇಷ್ಟ. ನಾಲಗೆಯಲ್ಲೇ ಅತ್ತಿತ್ತ ಮಾಡಿ ನೇರವಾಗಿ ನುಂಗಬಹುದಾದ ಇಂಬ ತೊಳೆಗಳ ಕುರಿತು ಒಂದು ಗಾದೆಯೇ ಇದೆ ಇಂಬ ಕೊಟ್ಟರೆ ತಿಂಬ! ಅಂದ ಹಾಗೆ ಇಂಬ ತಳಿಯ (ಪೂರ್ತಿ ಮೆದು ತೊಳೆ) ಮರಗಳು ಬಯಲು ಸೀಮೆಯಲ್ಲಿ ಯಾಕೆ ಬೆಳೆಯುವುದಿಲ್ಲ ಎಂಬ ಪ್ರಶ್ನೆಗೆ ಉತ್ತರ ಹುಡುಕಲು ಪ್ರಯತ್ನಿಸಿದರೂ, ಸಮರ್ಪಕ ಉತ್ತರ ನನಗೆ ದೊರಕಿಲ್ಲ. ಇರಲಿ, ನಮ್ಮ ರಾಜ್ಯದ ಹಲಸು ಬಲು ರುಚಿ ಎಂಬುದರಲ್ಲಿ ಎರಡು ಮಾತಿಲ್ಲ. ಹಲಸಿನ ಹಣ್ಣಿನ ರುಚಿಯ ಕುರಿತು ಬರೆದ ಮಾತ್ರಕ್ಕೆ ಹಲಸಿನ ಹಿರಿಮೆಯನ್ನು ಪೂರ್ತಿ ವರ್ಣಿಸಿದಂತೆ ಆಗದು.

ಹಲಸಿನ ಮರದ ದಶಾವತಾರಗಳು ನಮ್ಮ ಹಳ್ಳಿಯ ಮನೆಯಲ್ಲಿ ತನ್ನ ಸ್ವಭಾವವನ್ನು ತೋರುವ ಪರಿ ಹೀಗಿದೆ. ಹಲಸಿನ ಹಣ್ಣನ್ನು ತಿಂದು ತೊಳೆಗಳೆಲ್ಲವೂ ಹೊಟ್ಟೆಗೆ ಸೇರಿದ ನಂತರ, ಹಲಸಿನ ದಶಾವತಾರದ ಒಂದು ಪ್ರಕಾರ ಶುರು. ಮೊದಲಿಗೆ ಹಲಸಿನ ಬೀಜ ಅಥವಾ ನಮ್ಮವರು ಕರೆಯುವಂತೆ ದಾನಿ ಬೇಳೆಯ ವಿಚಾರಕ್ಕೆ ಬರೋಣ. (ಈ ದಾನಿ ಎಂಬುದು ಧಾನ್ಯದ ಅಪಭ್ರಂಶವೇ? ಭಾಷಾ ತಜ್ಞರು ತಿಳಿಸಬೇಕು). ಹಲಸಿನ ಬೀಜವನ್ನು ಒಣಗಿಸಿ ಡಬ್ಬಿಯಲ್ಲಿ ಹಾಕಿಟ್ಟರೆ ಹಲವು ತಿಂಗಳುಗಳ ತನಕ ರುಚಿಕರ ತಿನಿಸು ಆಗಬಲ್ಲದು. ದಾನಿ ಬೇಳೆಯನ್ನು ಮಡಕೆಯಲ್ಲಿ ಹುರಿದು ತಿನ್ನಲು ಸಾಧ್ಯ. ಅದೇ ರೀತಿ ನೀರಿನಲ್ಲಿ ಬೇಯಿಸಿಯೂ ತಿನ್ನಬಹುದು. ಬಣ್ಣದ ಸೌತೆಕಾಯಿ ಹುಳಿ ಮಾಡುವಾಗ ಒಂದೆರಡು ಮುಷ್ಟಿ ದಾನಿ ಬೇಳೆಯನ್ನು ಹಾಕಿ ಬೇಯಿಸಿದರೆ ಊಟದ ಜೊತೆ ಬಲು ರುಚಿ. ಹಲಸಿನ ಬೀಜವನ್ನು ಅರೆದು ರೊಟ್ಟಿ ಮತ್ತು ಹೋಳಿಗೆಯನ್ನು ಹೋಲುವ ತಿನಿಸನ್ನು ಮಾಡುವುದುಂಟು. ಹಸಿ ಹಲಸಿನ ಬೀಜಕ್ಕೆ ಉಪ್ಪು ಬೆರೆಸಿ ಬೇಯಿಸಿದರೆ ಒಂದು ಹೊತ್ತಿನ ಆಹಾರವೇ ಆದೀತು!

ಬಹು ಹಿಂದೆ ಮಳೆಗಾಲದಲ್ಲಿ, ಊಟಕ್ಕೆ ಕಷ್ಟವೆನಿಸಿದಾಗ ನಮ್ಮ ಹಳ್ಳಿಯ ಕೆಲವು ಕೃಷಿ ಕಾರ್ಮಿಕರು ಹಸಿವು ನೀಗಲು ಅನುಸರಿಸುತ್ತಿದ್ದ ಹಲವು ಉಪಾಯಗಳಲ್ಲಿ ಹಲಸಿನ ಬೀಜವನ್ನು ಸುಟ್ಟು ಅಥವಾ ಬೇಯಿಸಿ ತಿನ್ನುವುದೂ ಸೇರಿದೆ. ಹಲಸಿನ ಕಾಯಿಯನ್ನು ಒಂದು ಪ್ರಮುಖ ತರಕಾರಿಯಾಗಿ ಕರಾವಳಿ ಮತ್ತು ಮಲೆನಾಡಿನವರು ಬಳಸುವ ರೀತಿಯು ಬಹು ವಿಶೇಷ. ತರಕಾರಿಯಾಗಿ ಹಲಸು, ಹಸಿವನ್ನೂ ನೀಗಬಲ್ಲದು ಮತ್ತು ಆರೋಗ್ಯಕ್ಕೂ ಉತ್ತಮ. ಹಲಸಿನ ಕಾಯಿಯನ್ನು ಹೋಳುಗಳ ರೀತಿ ಕತ್ತರಿಸಿ ಸಾಂಬಾರು ಮಾಡಬಹುದು. ಹಲಸಿನ ಕಾಯಿಯ ಸಿಪ್ಪೆ ತೆಗೆದು ಚೆನ್ನಾಗಿ ಕೊಚ್ಚಿ ಪಲ್ಯ ಮಾಡಿದರೆ ಬಲು ರುಚಿ. ಇದು ಕಡಗಿ ತಾಳ್ಳು ಎಂದೇ ನಮ್ಮೂರಿನಲ್ಲಿ ಹೆಸರುವಾಸಿ.

ಹಲವು ವಿಶೇಷದ ಅಡುಗೆಗೆ ಕಡಗಿ ತಾಳ್ಳು ಕಾಯಂ ವ್ಯಂಜನ. ತುಸು ಬೆಳೆದ ಹಲಸಿನಕಾಯಿಯ ತೊಳೆಗಳನ್ನು ಮಾತ್ರ ಒಂದು ತರಕಾರಿಯಾಗಿ ಬಳಸಿ ಸಾಂಬಾರು ಮಾಡಬಹುದು; ಕಾಯಿ ಎಳೆಯದಿದ್ದರೆ ಕಾಯಿಯನ್ನೇ ತರಕಾರಿ ಹೋಳುಗಳನ್ನು ಕತ್ತರಿಸಿ ಸಾಂಬಾರು ಮಾಡಬಹುದು. (ಹೊರಗಿನ ಸಿಪ್ಪೆಯನ್ನು ಮಾತ್ರ ಬೇರ್ಪಡಿಸಿ ಬಿಸಾಕಬೇಕು) ಇಂತಹ ಸಾಂಬಾರಿನಲ್ಲಿ ಹಲಸಿನ ಕಾಯಿಯ ಸಾಡೆ ಅಥವಾ ಸಾರೆಯೂ ವಿಶೇಷ ರುಚಿಯನ್ನು ನೀಡಬಲ್ಲದು.

ಮಳೆಗಾಲದಲ್ಲಿ ವಿಶೇಷವಾಗಿ ತಯಾರಿಸುವ ಹುರುಳಿ ಸಾರಿನಲ್ಲಿ ಬೇಯುವ ಹಲಸಿನ ಬೀಜಗಳ ರುಚಿಯನ್ನು ತಿಂದವರೇ ಬಲ್ಲರು! ಹಲಸಿನ ಹಣ್ಣಿನ ತೊಳೆಗಳನ್ನು ಅಕ್ಕಿ ಹಿಟ್ಟಿನ ಜೊತೆ ಬೆರೆಸಿ, ಹಬೆಯಲ್ಲಿ ಬೇಯಿಸುವ ಹಲಸಿನ ಕಡುಬು (ಸಿಹಿ) ಹೆಚ್ಚಿನವರಿಗೆ ಗೊತ್ತೇ ಇದೆ. ಇದರಲ್ಲೂ ಕೆಲವು ವೈವಿಧ್ಯ ಉಂಟು! ಬಾಳೆ ಎಲೆಯಲ್ಲಿ ಸುತ್ತಿ ಬೇಯಿಸುವುದು, ಅರಿಶಿನದ ಎಲೆಯಲ್ಲಿ ಸುತ್ತಿ ಬೇಯಿಸುವುದು, ನಾಗಸಂಪಿಗೆ ಎಲೆಯಲ್ಲಿ ಸುತ್ತಿ ಬೇಯಿಸುವುದು ಈ ರೀತಿ. ಎಳೆ ಹಲಸಿನ ಕಾಯಿಯ ಇನ್ನೊಂದು ತಯಾರಿಯನ್ನು ಇಲ್ಲಿ ಪ್ರಸ್ತಾಪಿಸಲೇಬೇಕು. ಅದೆಂದರೆ ಹಲಸಿನ ಕಾಯಿಯ ಉಪ್ಪಿನಕಾಯಿ! ನಾನು ಇದುವರೆಗೆ ರುಚಿಕಂಡ ಯಾವುದೇ ರೀತಿಯ ಉಪ್ಪಿನಕಾಯಿಗಿಂತಲೂ, ಹಲಸಿನ ಕಾಯಿ ಉಪ್ಪಿನಕಾಯಿ ಹೆಚ್ಚಿನ ರುಚಿ ಹೊಂದಿದೆ. ಎಳೆ ಕಾಯಿಯನ್ನು ಕತ್ತರಿಸಿ, ಕಾಟು ಮಾವಿನ ಹೋಳುಗಳ ಜೊತೆ ಬೆರೆಸಿ ತಯಾರಿಸಿದ ಉಪ್ಪಿನಕಾಯಿಯ ರುಚಿಯನ್ನು ಪೂರ್ತಿಯಾಗಿ ವರ್ಣಿಸಲು ಪದಗಳಿಂದ ಸಾಧ್ಯವಿಲ್ಲ; ಅದನ್ನು ಚಪ್ಪರಿಸಿದ್ದ ನಾಲಿಗೆಯಿಂದಲೂ ಅಸಾಧ್ಯ; ನೀವೇ ಒಮ್ಮೆ ಅದರ ರುಚಿಯನ್ನು ಸವಿದರೆ ಮಾತ್ರ ಸಾಧ್ಯ.

ಹಲಸಿನ ಕಾಯಿಯ ಉಪ್ಪಿನಕಾಯಿಯನ್ನು ತಿನ್ನುವ ಭಾಗ್ಯ ಈಚಿನ ವರ್ಷಗಳಲ್ಲಿ ಮರೀಚಿಕೆ ಎನಿಸಿದೆ, ಏಕೆಂದರೆ ಹಿಂದೆ ನಮ್ಮ ಅಜ್ಜಿ ತಯಾರಿಸಿದ್ದು, ಆಗ ತಿಂದದ್ದು ಮಾತ್ರ ಗೊತ್ತು. ನಂತರ ಇದನ್ನು ನಮ್ಮ ಮನೆಯಲ್ಲಿ ತಯಾರಿಸುವ ಪದ್ಧತಿ ಬಿಟ್ಟು ಹೋಗಿದೆ! ಮುಂದಿನ ವರ್ಷವಾದರೂ, ಒಂದು ಎಳೆಯ ಹಲಸಿನ ಕಾಯಿ ತಂದು ಅದರ ಉಪ್ಪಿನಕಾಯಿ ತಯಾರಿಸುವ ಸಾಹಸಕ್ಕೆ ಕೈಹಾಕಬೇಕು ಎಂದುಕೊಂಡಿದ್ದೇನೆ! ಹಲಸಿನ ಕಾಯಿಯ ಇನ್ನೊಂದು ಬಹು ಪ್ರಸಿದ್ಧ ಉಪಯೋಗ ವೆಂದರೆ ಹಪ್ಪಳ. ಇದು ಬಹಳ ರುಚಿಯೂ ಹೌದು. ಹದವಾಗಿ ಕರಿದ ಹಲಸಿನ ಹಪ್ಪಳವನ್ನು ಕರಿದ ಗೋಡಂಬಿಯ ಜೊತೆ ತಿಂದರೆ ಆ ರುಚಿಗೆ ಸರಿ ಸಾಟಿ ಎನಿಸುವ ಬೇರೆ ರುಚಿ ಇಲ್ಲ.

ಚೆನ್ನಾಗಿ ಬಲಿತ ಹಲಸಿನ ತೊಳೆಗಳನ್ನು ಹಬೆಯಲ್ಲಿ ಬೇಯಿಸಿ, ಕಲ್ಲಿನಲ್ಲಿ ಅರೆದು ಉಂಡೆ ಮಾಡಿ, ಎರಡು ಮರದ ಮಣೆಗಳ ನಡುವೆ ಇಟ್ಟು ಒತ್ತಿ ಹಪ್ಪಳದ ಸ್ವರೂಪಕ್ಕೆ ತಂದು, ಬಿರು ಬಿಸಿಲಿನಲ್ಲಿ ಎರಡು ದಿನ ಒಣಗಿಸಿ ಇಟ್ಟರೆ ಹಲಸಿನ ಹಪ್ಪಳ ಸಿದ್ಧ. ಇದನ್ನು ತುಸು ವಿಭಿನ್ನವಾಗಿ ತಯಾರಿಸುವ ಪದ್ಧತಿ ಮಲೆನಾಡಿನಲ್ಲಿದೆ. ಹಲಸಿನ ಹಪ್ಪಳವನ್ನು ಆರೆಂಟು ತಿಂಗಳುಗಳ ಕಾಲ ಉಪಯೋಗಿಸ ಬಹುದು.

ಕೆಂಡದಲ್ಲಿ ಸುಟ್ಟು ಸಹ ತಿನ್ನಬಹುದು, ಎಣ್ಣೆಯಲ್ಲಿ ಕರಿಯಲೂಬಹುದು. ಊಟದ ಜೊತೆ ವ್ಯಂಜನಕ್ಕೂ ಸೈ, ತುರ್ತು ದಿನಗಳಲ್ಲಿ ಬೆಳಗಿನ ಉಪಹಾರವಾಗಿಯೂ ಸೈ. ಹಲಸಿನ ಕಾಯಿಯ ತೊಳೆಗಳನ್ನು ವ್ಯಾಲ್ಯೂ ಎಡಿಷನ್ ರೂಪದಲ್ಲಿ ಹಲವು ತಿಂಗಳುಗಳ ಕಾಲ ರಕ್ಷಿಸಿ ಇಟ್ಟುಕೊಂಡು, ಆಹಾರದ ರೀತಿ ಸೇವಿಸುವ ವಿಧಾನವೇ ಹಲಸಿನ ಹಪ್ಪಳ ಎಂದು ಗುರುತಿಸಬಹುದು.



ಕರಾವಳಿಯವರು ಹಲಸಿನ ತೊಳೆಗಳನ್ನು ಇನ್ನೂ ಹಲವು ಅಡುಗೆಗೆ ಪಕ್ಕಾಗಿಸಿದ್ದಾರೆ. ಹಲಸಿನ ತೊಳೆ ತೆಗೆದ ನಂತರ, ತಳಭಾಗದ ದಪ್ಪನೆಯ ಮಗಡದಿಂದ ಪಲ್ಯ ತಯಾರಿಸುವುದುಂಟು. ಹಣ್ಣಿನ ತೊಳೆಗಳನ್ನು ಅರೆದು ಪಕೋಡದ ರೀತಿ ತಯಾರಿಸುವ ಮುಳಕ, ಹಣ್ಣಿನ ತೊಳೆ ಹಾಕಿ ತಯಾರಿಸುವ ಬಿಸಿ ಪಾಯಸ, ಕಾಯಿಯ ತೊಳೆಗಳನ್ನು ಅರೆದು ತಯಾರಿಸ ಬಹುದಾದ ಅಪ್ಪ (ಅಂಬೋಡೆ ಹೋಲಿಕೆ), ಕಾಯಿ ತೊಳೆಗಳ ಚಿಪ್ಸ್, ಹಲಸಿನ ಹಣ್ಣಿನ ತೊಳೆಗಳ ಹಪ್ಪಳ ಹೀಗೆ ಪಟ್ಟಿ ಬೆಳೆಯುತ್ತದೆ. ಹಲಸಿನ ಕಾಯಿಯ ತೊಳೆಗಳನ್ನು ಉಪ್ಪು ನೀರಿನಲ್ಲಿ ನೆನೆಸಿ ನಾಲ್ಕಾರು ತಿಂಗಳು ಕಾಪಿಟ್ಟು ಅದರಿಂದ ಪಲ್ಯ ತಯಾರಿಸುವುದುಂಟು. ಈಗ ಓದುಗರಿಗೆ ಸ್ವಲ್ಪವಾದರೂ ಅರ್ಥವಾಗಿರಬೇಕು, ಹಲಸಿನ ಮರದ ದಶಾವತಾರ ಎಂಬ ಪದವನ್ನು ಬಳಸಲಾಗಿದೆ ಎಂದು!

ಇನ್ನೂ ಮುಗಿದಿಲ್ಲ ಹಲಸಿನ ವಿಶ್ವರೂಪ! ಹಲಸಿನ ಎಲೆಗಳ ಕೊಟ್ಟೆ ಕಡುಬು ಕರಾವಳಿಯ ಮತ್ತು ಮಲೆನಾಡಿನ ವಿಶೇಷ. ನಾಲ್ಕು ಎಲೆಗಳನ್ನು ಕಡ್ಡಿಯ ಸಹಾಯದಿಂದ ಒಂದು ಲೋಟದ ರೂಪಕ್ಕೆ ಸೆಡಬೇಕು– ಅದರೊಳಗೆ ಇಡ್ಲಿ ಹಿಟ್ಟನ್ನು ಹಾಕಿ, ಹಬೆಯಲ್ಲಿ ಬೇಯಿಸಿದರೆ ಮೃದುವಾದ ಕೊಟ್ಟೆ ಕಡುಬು ಸಿದ್ಧ. ಚಟ್ನಿ ಮತ್ತು ಸಾಂಬಾರ್ ಜೊತೆ ಸೇವನೆ. ಇದು ಬಹುಮಟ್ಟಿಗೆ ಇಡ್ಲಿಯನ್ನು ಹೋಲಿದರೂ, ಇಡ್ಲಿಗಿಂತ ಹೆಚ್ಚು ರುಚಿ. ಎಲೆಯ ಜತೆ ಹಬೆಯಲ್ಲಿ ಬೇಯಿಸಿದಾಗ, ಮೃದುವಾಗಿ ಬೇಯುವುದಲ್ಲದೇ, ಹಲಸಿನ ಎಲೆಯ ಪರಿಮಳವು ಬೆರೆತು ರುಚಿ ಹೆಚ್ಚುತ್ತದೆ ಎಂದು ತಿಂದವರ ಅನುಭವ. ಇಂತಹ ಹಲಸಿನ ಎಲೆಯ ಕೊಟ್ಟೆಗಳು (ಖಾಲಿ) ಈಗ ಆನ್‌ಲೈನ್‌ನಲ್ಲೂ ಖರೀದಿಗೆ ಲಭ್ಯ! ಹಲಸಿನ ಮರವನ್ನು, ಅದಕ್ಕೆ ವಯಸ್ಸಾದ ನಂತರ, ಕತ್ತರಿಸಿದರೆ ದೊರಕುವ ಮೋಪು, ಒಂದು ವಿಶೇಷ ಬಣ್ಣವನ್ನು ನೈಸರ್ಗಿಕವಾಗಿಯೇ ಪಡೆದಿದೆ.

ಹೊಳೆಯುವ ಹಳದಿ ಬಣ್ಣದ ಹಲಸಿನ ಮೋಪು ಮತ್ತು ಹಲಗೆಗಳಿಂದ ಚಂದದ ಪೀಠೋಪಕರಣಗಳ ತಯಾರಿ ಸಾಧ್ಯ. ಆ ಮರವು ಒಳ್ಳೆಯ ಪಾಲಿಶ್ ಪಡೆದು ಹೊಳೆವ ಹಳದಿ ಬಣ್ಣದಲ್ಲಿ ಮಿಂಚುವುದುಂಟು. ಮನೆ ಬಾಗಿಲಿಗೆ, ಬಾಗಿಲಿನ ಮೇಲಿನ ಕೆತ್ತನೆಗಳಗೆ ಹಲಸಿನ ಮರ ಹೇಳಿ ಮಾಡಿಸಿದ್ದು. ಹಲಸಿನ ಮರವನ್ನು ಉಪಯೋಗಿಸಿ ವೀಣೆಯನ್ನು ಸಹ ತಯಾರಿಸುತ್ತಾರಂತೆ!

ಹಲಸಿನ ಮರದಿಂದ ಹೊಳೆಯುವ ಹಳದಿ ಬಣ್ಣದ ಮಂಚವನ್ನು ಮಾಡಲು ಸಾಧ್ಯವಿದ್ದರೂ, ಅದೇಕೋ ಹಲಸಿನ ಮರದ ಮಂಚವು ಉತ್ತಮವಲ್ಲ ಎಂಬ ನಂಬಿಕೆ ಕರಾವಳಿಯ ಕೆಲವು ಪ್ರದೇಶಗಳಲ್ಲಿದೆ. ಅಕಸ್ಮಾತ್ ಅದರ ಹಳದಿ ಹಲಗೆಯ ಮಂಚ ಮಾಡಿಸಿ, ಅದರ ಮೇಲೆ ಯಾರಾದರೂ ಮಲಗಿದರೆ, ಅವರಿಗೆ ಹಳದಿ ಕಾಮಾಲೆ ರೋಗ ಬರುತ್ತದೆ ಎಂಬ ಗುಸುಗುಸು ಇದೆ. ಹಿಂದೆ ಅಂತಹ ಕೆಲವು ಅಪರೂಪದ ಘಟನೆಗಳು ನಡೆದಿದ್ದನ್ನು ನಮ್ಮ ಹಳ್ಳಿಯವರು ನೆನಪಿಸಿಕೊಳ್ಳುವುದುಂಟು.

ಇದು ಶುದ್ಧ ಮೂಢ ನಂಬಿಕೆಯೇ ಇರಬಹುದು, ಹೊರತು, ವೈಜ್ಞಾನಿಕವಾಗಿ ಯೋಚಿಸಿದರೆ ಅಂತಹ ಸಾಧ್ಯತೆ ಇಲ್ಲ. ಆಹಾರವಾಗಿ, ಉತ್ತಮ ಹಣ್ಣಿನ ರೂಪದಲ್ಲಿ, ಪೀಠೋಪಕರಣಗಳ ತಯಾರಿಕೆಗೆ, ಸಂಗೀತ ವಾದ್ಯ ತಯಾರಿಕೆಗೆ ಹೀಗೆ ಹಲವು ಆಯಾಮಗಳಲ್ಲಿ ಉಪಯೋಗವಾಗುವ ಹಲಸಿನ ಲಾಭಗಳನ್ನು ದಶಾವತಾರಗಳು ಎಂದು ಕರೆದರೆ, ತಪ್ಪೇನಿಲ್ಲ ಅಲ್ಲವೇ?

– **ಶಶಿಧರ** ಹಾಲಾಡಿ

# ಗುತ್ತ ಮತ್ತು ಗೀಟು

ಜೋಗ ಜಲಪಾತದ ದಟ್ಟ ಮಂಜು ಮುಸುಕಿದ ಕಣಿವೆಯ ಕಡೆಗೆ ಮುಖ ಮಾಡಿ ನಿಂತಿದ್ದ ಶರಾವತಿ ವ್ಯಾಲಿ ಪ್ರಾಜೆಕ್ಟ್ (ಎಸ್.ವಿ.ಪಿ) ಕಾಲೋನಿಯ ಸಾಲು ಮನೆಗಳು ಮೌನವಾಗಿ ಕಾಣಿಸುತ್ತಿದ್ದವು.

ಅಲ್ಲಿನ ಪ್ರತಿಯೊಂದು ಕ್ವಾರ್ಟರ್ಸ್ ಸಾಲೂ ಒಂದೇ ತರಹ ಇತ್ತುಕೆಂಪು ಹಂಚಿನ ಇಳಿಜಾರು ಸೂರುಗಳು, ಮಣ್ಣಿನ ತೇವಕ್ಕೆ ಚಿಗುರಿದ ಕಾಡು ಜೀಗುರ್ತಿ ಗಿಡಗಳಿಂದ ಆವೃತವಾದ ಬಿಳಿ ಗೋಡೆಗಳು ಮತ್ತು ಕೇಸರಿ ಬಣ್ಣದ ದಾಸವಾಳದ ಹೂವುಗಳಿಂದ ತುಂಬಿದ ಪುಟ್ಟ ಹಿತ್ತಲಿನ ತೋಟಗಳು. ತೇಗ ಮತ್ತು ನೀಲಗಿರಿ ಮರಗಳ ದಟ್ಟ ಹಂದರದ ಮೇಲಿಂದ, ರಾಜಾ ಮತ್ತು ರೋರರ್ ಜಲಪಾತಗಳ ಗಂಭೀರವಾದ ಗರ್ಜನೆ ಹಿನ್ನೆಲೆಯಲ್ಲಿ ಸದಾ ಕೇಳಿಬರುತ್ತಿತ್ತು.

ಈ ಇಡೀ ಜಗತ್ತಿನ ಕೇಂದ್ರಬಿಂದುವಾಗಿದ್ದದ್ದು ಕಾಲೋನಿಯ ಆಟದ ಮೈದಾನ. ಅಲ್ಲಿನ ಕೆಂಪು ಜೇಡಿಮಣ್ಣು ತಲೆಮಾರುಗಳ ಮಕ್ಕಳ ಓಟಕ್ಕೆ ಸಿಕ್ಕು ನುಣುಪಾಗಿತ್ತು. ಮಧ್ಯಾಹ್ನದ ಬಿಸಿಲು ಕೊಂಚ ತಣ್ಣಗಾಗುತ್ತಿದ್ದಂತೆ ಮೈದಾನಕ್ಕೆ ಜೀವ ಬರುತ್ತಿತ್ತು. ಒಂದು ಮೂಲೆಯಲ್ಲಿ ದೊಡ್ಡ ಹುಡುಗರು ಕ್ರಿಕೆಟ್ ಪಿಚ್‌ಗಾಗಿ ಜಗಳವಾಡುತ್ತಿದ್ದರು. ಹಳೆಯ ಹಲಸಿನ ಮರದ ಕೆಳಗೆ ಹೆಣ್ಣುಮಕ್ಕಳು ಹಾಡುತ್ತಾ ಸ್ಕಿಪ್ಪಿಂಗ್ ಆಡುತ್ತಿದ್ದರು.

ಆದರೆ ಆಲದ ಮರದ ಕೆಳಗೆ ನಿಜವಾದ ಜಿದ್ದಾಜಿದ್ದಿ ಶುರುವಾಗಲು ಸಿದ್ಧವಾಗಿತ್ತು. ಐದು ಜನ ಹುಡುಗರು ಸುತ್ತಲೂ ಮಂಡಿಯೂರಿ ಕುಳಿತು, ಗೋಲಿ ಆಟಕ್ಕೆ ತಯಾರಿ ನಡೆಸುತ್ತಿದ್ದರು.

ವಿಷಿ ಆಲದ ಮರದ ನೆರಳಿಗೆ ಬಂದಾಗ, ಅವನ ಚಡ್ಡಿಯ ಜೇಬಿನಿಂದ ಗಾಜಿನ ಗೋಲಿಗಳು ಒಂದಕ್ಕೊಂದು ತಾಗಿ ಚುರುಕಾದ ಸದ್ದು ಮಾಡಿದವು. ಅವನ ಹತ್ತಿರ ಇದ್ದದ್ದು ಕೇವಲ ನಾಲ್ಕೇ ನಾಲ್ಕು ಗೋಲಿಗಳು ಒಂದು ಮಬ್ಬು ಹಳದಿ ಬಣ್ಣದ್ದು, ಮತ್ತೊಂದು ಬೂದು ಬಣ್ಣದ್ದು, ಮೂರನೆಯದು ಕಡು ಹಸಿರು ಬಣ್ಣದ ಗಂಡು ಗೋಲಿ, ಮತ್ತು ಅವನಿಗೆ ಎಲ್ಲದಕ್ಕಿಂತ ಇಷ್ಟವಾದ ಸಮುದ್ರ ನೀಲಿ ಬಣ್ಣದ ಗೋಲಿ. ಅದರ ಮಧ್ಯೆ ಹಾಲಿನಂತಹ ಬಿಳಿ ಮೋಡವೊಂದು ಸುರುಳಿಯಾಕಾರದಲ್ಲಿ ಹೆಪ್ಪುಗಟ್ಟಿದಂತೆ ಕಾಣಿಸುತ್ತಿತ್ತು.

ಕೇವಲ ನಾಲ್ಕಾ ವಿಷಿ? ಸೀನಾ ತನ್ನ ಕೈಯಲ್ಲಿದ್ದ ಭಾರವಾದ ಗೋಲಿಯನ್ನು ಗಾಳಿಯಲ್ಲಿ ಹಾರಿಸಿ ಹಿಡಿಯುತ್ತಾ ಲೇವಡಿ ಮಾಡಿದ.

ಸಂಖ್ಯೆಗಿಂತ ಆಟ ಮುಖ್ಯ ಸೀನಾ, ವಿಷಿ ಧೈರ್ಯದಿಂದ ಹೇಳಿದ.

ಅದು ಆಟ ಮುಗಿಯುವಾಗ ಗೊತ್ತಾಗುತ್ತೆ, ಶಾಸ್ತ್ರಿ ನೆಲದ ಕಡೆಗೆ ಕಣ್ಣಿಟ್ಟು ಗೊಣಗಿದ.

ಪ್ರಾಣೇಶ, ಒಂದು ಸಣ್ಣ ಕಡ್ಡಿಯಿಂದ ಮಣ್ಣನ್ನು ಕೆರೆದು ಪುಟ್ಟ ಬಟ್ಟಲಿನಂತಹ ಗುಂಡಿಯನ್ನು ಮಾಡಿದ. ಇದಕ್ಕೆ ಗುತ್ತ ಎನ್ನುತ್ತಿದ್ದರು. ಸ್ವಲ್ಪ ದೂರದ ಹಿಂದೆ ಹೋಗಿ ಅನಂತು ತನ್ನ ಹಿಮ್ಮಡಿಯಿಂದ ಒಂದು ನೇರವಾದ ಗೆರೆ ಎಳೆದ ಅದೇ ಗೀಟು.

ಲೇಯ್ ಸೀನಾ, ನಿಯಮ ಗೊತ್ತಲ್ಲ? ಅನಂತು ಎಚ್ಚರಿಸಿದ.

ಗೊತ್ತ ಕಣ್ರೋ! ಸೀನಾ ತಕ್ಷಣ ನಿಯಮ ಒಪ್ಪಿಸಿದ. ಗೀಟಿನಿಂದ ಶೂಟರ್ ಬಿಡಬೇಕು. ಗುತ್ತಕ್ಕೆ ಬಿದ್ರೆ ಹತ್ತು ಅಂಕ, ಬೇರೆಯವರ ಗೋಲಿಗೆ ತಾಗಿಸಿದ್ರೆ ಐದು ಅಂಕ. ಆದರೆ ಅಂಕ ಸಿಕ್ಕ ತಕ್ಷಣ ಮತ್ತೊಂದು ಏಟು ಹೊಡೆಯೋ ಮುನ್ನ ನಮ್ ಶೂಟರ್ ವಾಪಸ್ ಬಂದು ಗುತ್ತ ಮುಟ್ಟಿರಬೇಕು! ಮೊದಲು ಯಾರು ನೂರು ಅಂಕ ಮಾಡ್ತಾರೋ ಅವರೇ ಕಿಂಗ್. ಕೊನೆಗೆ ಸೋತವರೆಲ್ಲ ತಲಾ ಒಂದೊಂದು ಗೋಲಿ ಕೊಡಬೇಕು!

ಕರೆಕ್ಟ್! ಐದೂ ಜನ ತಲೆ ಅಲ್ಲಾಡಿಸಿದರು.

ಮೊದಲು ಯಾರು ಆಡಬೇಕು ಎಂದು ನಿರ್ಧರಿಸಲು ಎಲ್ಲರೂ ಗೀಟಿನ ಹಿಂದೆ ನಿಂತು ಗುತ್ತದ ಕಡೆಗೆ ತಮ್ಮ ಶೂಟರ್ ಗೋಲಿಗಳನ್ನು ಚಿಮ್ಮಿಸಿದರು.

ಸೀನಾ ಜೋರಾಗಿ ಹೊಡೆದಿದ್ದರಿಂದ ಅವನ ಗೋಲಿ ದೂರ ಸಾಗಿತು. ಪ್ರಾಣೇಶನ ಗೋಲಿ ಗುತ್ತದ ದಂಡೆಯ ಹತ್ತಿರ ಬಂದು ನಿಂತಿತು. ವಿಷಿಯ ಹಸಿರು ಗೋಲಿ ಸಲೀಸಾಗಿ ಉರುಳಿ, ಗುತ್ತದ ಅಂಚನ್ನು ಮುಟ್ಟಿತು. ಆದರೆ ಶಾಸ್ತ್ರಿಯ ಗೋಲಿ ಮಾತ್ರ ಅಚ್ಚುಕಟ್ಟಾಗಿ ಗುತ್ತದ ಮಧ್ಯಕ್ಕೆ ಬಿದ್ದು ಟಪ್ ಎಂದು ಸದ್ದು ಮಾಡಿತು.

ನನ್ನದೇ ಮೊದಲ ಆಟ! ಶಾಸ್ತ್ರಿ ಘೋಷಿಸಿದ.

ಆಟ ಶುರುವಾಯಿತು. ಶಾಸ್ತ್ರಿ ಹತ್ತು ಅಂಕ ಪಡೆದರೂ ಮುಂದಿನ ಕಷ್ಟದ ಗುರಿಗೆ ಸರದಿ ಕಳೆದುಕೊಂಡ. ಮುಂದೆ ಬಂದ ಅನಂತು ಸಖತ್ ಕೈಚಳಕದಲ್ಲಿದ್ದ. ಗೀಟಿನ ಹಿಂದೆ ಅರ್ಧ ಮಂಡಿಯೂರಿ ಕಣ್ಣು ಕಿರಿದುಗೊಳಿಸಿ ತನ್ನ ಹಸಿರು ಗೋಲಿಯನ್ನು ಚಿಮ್ಮಿಸಿದ. ಗೋಲಿ ಗುತ್ತದ ಮಣ್ಣಿನ ಕುಳಿಗೆ ಬಿದ್ದು ಟಪ್ ಎಂದು ಸದ್ದು ಮಾಡಿತು ಹತ್ತು ಅಂಕ! ಅಲ್ಲಿಂದಲೇ ದೂರದಲ್ಲಿದ್ದ ಸೀನಾನ ಗೋಲಿಗೆ ಗುರಿ ಇಟ್ಟ. ಬೆರಳು ಬಿಟ್ಟ ಮರುಕ್ಷಣವೇ ಅವನ ಗೋಲಿ ಸೀದಾ ಹೋಗಿ ಸೀನಾನ ಗೋಲಿಗೆ ಟಣ್ ಎಂದು ಬಡಿಯಿತು ಐದು ಅಂಕ! ನಿಯಮದ ಪ್ರಕಾರ, ಅನಂತು ತನ್ನ ಗೋಲಿ ನಿಂತಿದ್ದ ಜಾಗದಲ್ಲೇ ಕುಳಿತು, ಮತ್ತೊಮ್ಮೆ ಹಿಂದಕ್ಕೆ ಚಿಮ್ಮಿಸಿ ತನ್ನ ಶೂಟರ್ ಅನ್ನು ಯಶಸ್ವಿಯಾಗಿ ಗುತ್ತದ ಒಳಗೆ ತಂದು ನಿಲ್ಲಿಸಿದ.

ಇಪ್ಪತ್ತು ನಿಮಿಷಗಳ ಕಾಲ ಆಟದ ಮುನ್ನಡೆ ಬದಲಾಗುತ್ತಲೇ ಇತ್ತು. ಪ್ರಾಣೇಶ ಲೆಕ್ಕಾಚಾರದಿಂದ ಆಡಿದರೆ, ಸೀನಾ ಕೂಗಾಡುತ್ತಾ ಆಡಿದ. ಶಾಸ್ತ್ರಿ ನಿಖರವಾಗಿ ಗುರಿ ಇಟ್ಟರೆ, ವಿಷಿ ಮಾತ್ರ ಕೇವಲ ಭರವಸೆಯ ಮೇಲೆ ಆಡುತ್ತಿದ್ದ. ಕೊನೆಗೆ ಅನಂತು ನೂರು ಅಂಕಗಳನ್ನು ಗಳಿಸಿ ಮೊದಲ ಆಟ ಗೆದ್ದ.

ವಿಷಿ ತನ್ನ ಜೇಬಿಗೆ ಕೈಹಾಕಿ ಹಳದಿ ಬಣ್ಣದ ಗೋಲಿಯನ್ನು ಅನಂತುಗೆ ಕೊಟ್ಟ.

ಆಲದ ಮರದ ನೆರಳಿನಲ್ಲಿ ಸಂಜೆ ಕರಗುತ್ತಾ ಸಾಗಿತು. ಪ್ರತಿ ಆಟ ಮುಗಿದಂತೆ ವಿಷಿಯ ಜೇಬು ಹಗುರವಾಗುತ್ತಾ ಹೋಯಿತು. ಬೂದು ಬಣ್ಣದ ಗೋಲಿ ಪ್ರಾಣೇಶನ ಪಾಲಾಯಿತು. ಹಸಿರು ಗೋಲಿ ಸೀನಾನ ಕೈ ಸೇರಿತು. ಸಂಜೆ ಮುಳುಗಿ ಆಕಾಶ ಕೆಂಪು–ಕಿತ್ತಳೆ ಬಣ್ಣಕ್ಕೆ ತಿರುಗುವ ಹೊತ್ತಿಗೆ, ವಿಷಿಯ ಹತ್ತಿರ ಕೇವಲ ಆ ನೀಲಿ ಸುರುಳಿಯ ಗೋಲಿ ಮಾತ್ರ ಉಳಿದಿತ್ತು.

ಕತ್ತಲಾಗುವ ಮುನ್ನ ಕೊನೆಯ ಒಂದು ಆಟ ಆಡೋಣ, ಸೀನಾ ಒತ್ತಾಯಿಸಿದ. ಎಲ್ಲರೂ ಒಪ್ಪಿದರು.

ಈ ಕೊನೆಯ ಆಟ ತೀವ್ರವಾದ ಪೈಪೋಟಿಯಿಂದ ಕೂಡಿತ್ತು. ಶಾಸ್ತ್ರಿ ಅಂಕಗಳಲ್ಲಿ ತುಂಬಾ ಮುಂದೆ ಸಾಗಿದ. ಅವನಿಗೆ ಗೆಲ್ಲಲು ಕೇವಲ ಐದು ಅಂಕಗಳು ಅಂದರೆ ಒಂದೇ ಒಂದು ಸಣ್ಣ ಏಟು ಸಾಕಿತ್ತು. ಹುಡುಗರೆಲ್ಲಾ ಉಸಿರು ಬಿಗಿಹಿಡಿದು ಗುತ್ತದ ಸುತ್ತಲೂ ಜಮಾಯಿಸಿದರು. ಜಲಪಾತದ ಭೋರ್ಗರೆತ ಮಾತ್ರ ಮುಸ್ಸಂಜೆಯ ನಿಶ್ಶಬ್ದವನ್ನು ತುಂಬುತ್ತಿತ್ತು. ವಿಷಿಯ ನೀಲಿ ಗೋಲಿ ಸ್ವಲ್ಪ ದೂರದಲ್ಲಿದ್ದ ಆನೆಹುಲ್ಲಿನ ಪೊದೆಯ ಹತ್ತಿರ ಕಷ್ಟದ ಕೋನದಲ್ಲಿ ಬಿದ್ದಿತ್ತು.

ಗುತ್ತದ ಪಕ್ಕದಲ್ಲೇ ಕುಳಿತ ಶಾಸ್ತ್ರಿ, ತನ್ನ ಕೈಯನ್ನು ಸಿದ್ಧಪಡಿಸಿಕೊಂಡನು.

ತನ್ನ ಎಡಗೈ ಹೆಬ್ಬೆರಳನ್ನು ಗುತ್ತದ ಅಂಚಿನಲ್ಲಿ ಗಟ್ಟಿಯಾಗಿ ಊರಿಅದೇ ಅವನ ನೆಲದ ಬೆರಳುತನ್ನ ತೋರುಬೆರಳಿನ ಮೇಲೆ ಗೋಲಿಯನ್ನು ಸಮತೋಲನಗೊಳಿಸಿದ. ದಾರಿಯಲ್ಲಿ ಆಲದ ಎಲೆಗಳು, ಸಣ್ಣ ಕಲ್ಲುಗಳು ಮತ್ತು ಮರದ ಬೇರು ಅಡ್ಡಲಾಗಿ ನಿಂತಿದ್ದವು.

ಟಿಕ್!

ಅವನ ಬೆರಳು ಸವರಿದ ಸದ್ದು ಕೇಳಿಸಿತು. ಗೋಲಿ ಗುತ್ತದಿಂದ ಚಿಮ್ಮಿ, ಕೆಂಪು ಧೂಳನ್ನು ಎಬ್ಬಿಸುತ್ತಾ ಸಾಗಿತು. ಮೊದಲು ನೇರವಾಗಿ ಹೋದ ಗೋಲಿ, ನಂತರ ಇಳಿಜಾರಿಗೆ ತಕ್ಕಂತೆ ತಿರುವು ಪಡೆದು, ಕಲ್ಲಿನ ಪಕ್ಕದಿಂದ ಬಳಸಿ ಬಂದು, ಮರದ ಬೇರಿನ ಅಂಚಿನಲ್ಲೇ ಸಾಗಿತು.

ಅಬ್ಬಾ! ಗೋಲಿ ಹೆಂಗೆ ಸ್ಪಿನ್ ಆಗ್ತಿದೆ ನೋಡು! ಪ್ರಾಣೇಶ ಆಶ್ಚರ್ಯದಿಂದ ಪಿಸುಗುಟ್ಟಿದ.

ಮರುಕ್ಷಣದಲ್ಲೇಕ್ಲಿಕ್!

ಅದು ವಿಷಿಯ ನೀಲಿ ಗೋಲಿಗೆ ಸರಿಯಾಗಿ ಮಧ್ಯಕ್ಕೆ ಬಡಿಯಿತು. ನೀಲಿ ಗೋಲಿ ಗಾಳಿಯಲ್ಲಿ ಹಾರಿ ಹುಲ್ಲಿನ ಮೇಲೆ ಬಿದ್ದಿತು.

ಅದ್ಭುತ ಶೂಟ್! ಶಾಸ್ತ್ರಿ ಗೆದ್ದ! ಸೀನಾ ಜಿಗಿದ.

ಶಾಸ್ತ್ರಿ ಎದ್ದು ನಿಂತು ಮೆಲ್ಲನೆ ನಕ್ಕ. ವಿಷಿ ಜೇಬಿನಲ್ಲಿದ್ದ ಆ ನುಣುಪಾದ ಗೋಲಿಯನ್ನು ಕೊನೆಯ ಬಾರಿಗೆ ಕೈಯಿಂದ ಸವರಿ, ಅದನ್ನು ಶಾಸ್ತ್ರಿಯ ಕೈಯಲ್ಲಿ ಇಟ್ಟನು. ಅವನ ಜೇಬು ಈಗ ಸಂಪೂರ್ಣ ಖಾಲಿಯಾಗಿತ್ತು.

ಮಕ್ಕಳೆಲ್ಲಾ ತಮ್ಮ ತಮ್ಮ ಮನೆಗಳ ಕಡೆಗೆ ಹೆಜ್ಜೆ ಹಾಕಲಾರಂಭಿಸಿದರು. ಕಿಟಕಿಗಳಿಂದ ಬಿಸಿಬಿಸಿ ಸಾರು ಮತ್ತು ಸಾಸಿವೆ ಒಗ್ಗರಣೆಯ ವಾಸನೆ ಮೂಗಿಗೆ ಬಡಿಯುತ್ತಿತ್ತು.

ಆದರೆ ವಿಷಿ ತನ್ನ ಮನೆಯ ಕಡೆಗೆ ಹೋಗಲಿಲ್ಲ. ಬದಲಿಗೆ ಕಾಲೋನಿಯ ಕೊನೆಯಲ್ಲಿದ್ದ, ಯಾರು ಹೋಗದ ಹಾಳುಬಿದ್ದ ಟೈಪ್– ಕ್ವಾರ್ಟರ್ಸ್ ಕಡೆಗೆ ತಿರುಗಿದ.

ಎಸ್.ವಿ.ಪಿ ಕಾಲೋನಿಯ ಪ್ರತಿಯೊಬ್ಬ ಮಗುವಿಗೂ ಆ ರಹಸ್ಯ ಗೊತ್ತಿತ್ತು. ಹತ್ತು ವರ್ಷಗಳ ಹಿಂದೆ ಇದ್ದ ಕೆಂಪಣ್ಣ ಎಂಬ ಮಾಸ್ಟರ್ ಪ್ಲೇಯರ್, ಬೆಂಗಳೂರಿಗೆ ಹೊರಡುವ ಮುನ್ನ ತನ್ನ ಸೋಲಿಸಲಾಗದ ಗೋಲಿಗಳಿದ್ದ ಡಬ್ಬವನ್ನು ಈ ಹಾಳುಬಿದ್ದ ಕ್ವಾರ್ಟರ್ಸ್‌ನ ಆಲದ ಮರದ ಕೆಳಗೆ ಹೂತಿಟ್ಟಿದ್ದಾನೆ ಎಂಬ ಮಾತು ಹರಡಿತ್ತು. ಹಲವರು ಅದನ್ನು ಹುಡುಕಲು ಹೋಗಿದ್ದರು, ಆದರೆ ಅಲ್ಲಿನ ಕಾಡು ಪೊದೆಗಳು ಮತ್ತು ಚೇಳುಗಳ ಭಯ ಅವರನ್ನು ಹಿಂದಕ್ಕೆ ತಳ್ಳಿತ್ತು.

ಆದರೆ ಇಂದು, ಜೇಬಿನಲ್ಲಿದ್ದ ಆ ಖಾಲಿ ಭಾವನೆ ವಿಷಿಗೆ ಒಂದು ಹೊಸ ಧೈರ್ಯವನ್ನು ತಂದಿತ್ತು. ಕಳೆದುಕೊಳ್ಳಲು ಅವನ ಬಳಿ ಇನ್ನು ಏನೂ ಇರಲಿಲ್ಲ.

ಅವನು ಹಾಳುಬಿದ್ದ ಕ್ವಾರ್ಟರ್ಸ್‌ನ ತುಕ್ಕು ಹಿಡಿದ ಮುಳ್ಳುತಂತಿಯ ಬೇಲಿಯನ್ನು ದಾಟಿದ. ಅಲ್ಲಿನ ಗಾಳಿ ತಣ್ಣಗಿದ್ದು, ಹಸಿ ಪಾಚಿ ಮತ್ತು ಕೊಳೆತ ಮರದ ವಾಸನೆ ಬರುತ್ತಿತ್ತು.

ಅವನು ಆ ಹಳೆಯ ಆಲದ ಮರದ ಬಳಿಗೆ ಬಂದನು. ಮೈದಾನದ ಹುಡುಗರು ಪಿಸುಗುಟ್ಟುತ್ತಿದ್ದ ಮಾತುಗಳು ಅವನಿಗೆ ನೆನಪಾದವು: ಎಲ್ಲಿ ದಪ್ಪನೆಯ ಬೇರು ಹಳೆಯ ಕಲ್ಲಿನ ತಡೆಗೋಡೆಯನ್ನು ಒಡೆದಿದೆಯೋ ಅಲ್ಲಿ...

ಎದೆ ಬಡಿತ ಪಲಾಯನದ ಮಿತಿ ಮೀರುತ್ತಿರಲು, ಆಲದ ಬೇರು ಕಲ್ಲಿನ ಗೋಡೆಯನ್ನು ಬಿರಿದು ಹೋಗಿದ್ದ ಜಾಗವನ್ನು ಅವನು ಗುರುತಿಸಿದ. ಬಿದ್ದಿದ್ದ ತೇಗದ ಒಣ ಕೊಂಬೆಯೊಂದನ್ನು ಹಿಡಿದು ಒದ್ದೆಯಾದ ಎಲೆಗಳು ಮತ್ತು ಕೆಂಪು ಮಣ್ಣನ್ನು ಸವರಿ ಅಗೆಯಲು ಶುರು ಮಾಡಿದ.

ಟಪ್.

ಕಡ್ಡಿ ಯಾವುದೋ ಗಟ್ಟಿ ವಸ್ತುವಿಗೆ ತಗುಲಿತು.

ವಿಷಿ ಕಡ್ಡಿಯನ್ನು ಪಕ್ಕಕ್ಕೆ ಎಸೆದು ತನ್ನ ಬರಿಗೈಯಿಂದ ಮಣ್ಣನ್ನು ಕೆರೆಯಲಾರಂಭಿಸಿದ. ಸ್ವಲ್ಪ ಸಮಯದ ನಂತರ, ಒದ್ದೆಯಾದ ಪ್ಲಾಸ್ಟಿಕ್ ಹಾಳೆಯಲ್ಲಿ ಸುತ್ತಿದ್ದ ಆಯತಾಕಾರದ ವಸ್ತುವೊಂದನ್ನು ಹೊರಗೆಳೆದ. ಪ್ಲಾಸ್ಟಿಕ್ ಹರಿದಾಗ ಹಳೆಯ ಬಿಸ್ಕೆಟ್ ಡಬ್ಬವೊಂದು ಪ್ರತ್ಯಕ್ಷವಾಯಿತು.

ಅದರ ಮುಚ್ಚಳ ಮಳೆಯ ತೇವಕ್ಕೆ ಗಟ್ಟಿಯಾಗಿ ಹಿಡಿದುಕೊಂಡಿತ್ತು. ವಿಷಿ ಒಂದು ಚೂಪಾದ ಕಲ್ಲನ್ನು ಮುಚ್ಚಳದ ಅಂಚಿಗೆ ಸಿಕ್ಕಿಸಿ ಜೋರಾಗಿ ಒತ್ತಿದಾಗ, ಅದು ಕಟಕ್ ಎಂದು ಸದ್ದು ಮಾಡುತ್ತಾ ತೆರೆದುಕೊಂಡಿತು.

ವಿಷಿ ಆಶ್ಚರ್ಯದಿಂದ ಉಸಿರು ಬಿಗಿಹಿಡಿದು ನೋಡಿದ.

ಅಲ್ಲಿ ಅವನ ಕಲ್ಪನೆಗೂ ಮೀರಿದ ನಿಧಿ ಕಾಯುತ್ತಿತ್ತು! ಬೇರೆ ಬೇರೆ ಆಕಾರ ಮತ್ತು ಬಣ್ಣದ ಗೋಲಿಗಳು ಅಂಬರ್ ಬಣ್ಣದ ಕಾಂತಿ, ಹಾಲು ಬಿಳಿ ಬಣ್ಣದ ಸುಂದರ ಶೂಟರ್‌ಗಳು, ಮತ್ತು ನುಣುಪಾದ ಹಸಿರು ರತ್ನಗಳಂತಹ ಗೋಲಿಗಳು ಕಾಲದ ಹಂಗಿಲ್ಲದೆ ಹೊಳೆಯುತ್ತಿದ್ದವು. ಇವು ದಶಕಗಳ ಹಿಂದೆ ನಡೆದ ಐತಿಹಾಸಿಕ ಆಟಗಳಲ್ಲಿ ಭಾಗವಹಿಸಿದ ವೀರ ಗೋಲಿಗಳಾಗಿದ್ದವು.

ಅವನು ನಡುಗುವ ಬೆರಳುಗಳಿಂದ ಎಣಿಸಿದ. ಇಪ್ಪತ್ತು! ಇಪ್ಪತ್ತು ಅತ್ಯಂತ ಅಪರೂಪದ ಸುಂದರ ಗೋಲಿಗಳು.

ವಿಷಿ ಆ ಭಾರವಾದ ಡಬ್ಬವನ್ನು ತನ್ನ ಎದೆಗೆ ಗಟ್ಟಿಯಾಗಿ ಅಪ್ಪಿಕೊಂಡು, ಕಾಲೋನಿಯ ಹಳದಿ ಬೀದಿದೀಪಗಳು ಬೆಳಗುತ್ತಿದ್ದಂತೆ ಓಡುತ್ತಾ ಮನೆಗೆ ತಲುಪಿದ.

ಮರುದಿನ ಸಂಜೆ, ಹುಡುಗರೆಲ್ಲಾ ಮತ್ತೆ ಹಲಸಿನ ಮರದ ಕೆಳಗೆ ಜಮಾಯಿಸಿದರು. ಅನಂತು, ಪ್ರಾಣೇಶ, ಸೀನಾ ಮತ್ತು ಶಾಸ್ತ್ರಿ ಬಂದ ತಕ್ಷಣವೇ ವಿಷಿ ನಿಧಾನವಾಗಿ ಹೆಜ್ಜೆ ಹಾಕುತ್ತಾ ಅಲ್ಲಿಗೆ ಬಂದ.

ಹುಡುಗರು ಅವನ ಕೈಯಲ್ಲಿದ್ದ ಹಳೆಯ ಲೋಹದ ಡಬ್ಬವನ್ನು ತಕ್ಷಣವೇ ಗಮನಿಸಿದರು.

ಅದೇನು ವಿಷಿ? ಸೀನಾ ಕೇಳಿದ.

ವಿಷಿ ಏನೂ ಮಾತನಾಡದೆ ಮೆಲ್ಲನೆ ಡಬ್ಬದ ಮುಚ್ಚಳವನ್ನು ತೆಗೆದ. ಹಲಸಿನ ಎಲೆಗಳ ನಡುವಿನಿಂದ ಮೂಡಿಬಂದ ಬಿಸಿಲಿಗೆ ಆ ಇಪ್ಪತ್ತು ಅಪರೂಪದ ಗೋಲಿಗಳು ಜೋಗದ ಮಂಜಿನ ಹನಿಗಳಂತೆ ಮಿಂಚಿದವು!

ಇಡೀ ಮೈದಾನ ಒಂದು ಕ್ಷಣ ಮೌನವಾಯಿತು.

ಇದನ್ನು ನೀನು ಎಲ್ಲಿಂದ... ಶಾಸ್ತ್ರಿಯ ಮಾತು ಅರ್ಧಕ್ಕೇ ನಿಂತಿತು, ಅವನ ಕಣ್ಣುಗಳು ಅಚ್ಚರಿಯಿಂದ ದೊಡ್ಡದಾಗಿದ್ದವು.

ನಿನ್ನೆ ಸಂಜೆ ಖಾಲಿ ಜೇಬಿನಿಂದ ಮನೆಗೆ ಹೋಗಿದ್ದ ವಿಷಿ, ಇಂದು ಆಲದ ಮರದ ಕೆಳಗೆ ಕಾಲೋನಿಯ ಗೋಲಿ ಆಟದ ರಾಜನಾಗಿ ನಿಂತಿದ್ದ.

ಮತ್ತೆ ಮೈದಾನದಲ್ಲಿ ಆ ಹಳೆಯ ಲಯಬದ್ಧ ಸಂಗೀತ ಶುರುವಾಯಿತು.

ಕ್ಲಿಕ್... ಕ್ಲಾಕ್...

ನಗು, ಮುನಿಸು, ಗೆಳೆತನದ ಜಗಳಗಳ ನಡುವೆ ಗೋಲಿ ಆಟದ ಮತ್ತೊಂದು ಅಮೋಘ ಸರಣಿ ಆರಂಭವಾಯಿತು

– **ಶ್ರೀಕಾಂತ್** ಶ್ರೀನಿವಾಸ್





# ಸರಳ ವಿಧಾನದಿಂದ ದಾಳಿಂಬೆ ಬೆಳೆಯ ಸಸ್ಯೋತ್ಪಾದನೆ

ಈಗ ದಾಳಿಂಬೆ ಹಣ್ಣಿನ ಸೀಸನ್, ಎಲ್ಲಾ ಹಣ್ಣು–ತರಕಾರಿ ಅಂಗಡಿಗಳಲ್ಲಿ, ಬೀದಿಬದಿ ಹಣ್ಣು ವ್ಯಾಪಾರಿಗಳಲ್ಲಿ ಯಥೇಚ್ಛ ದಾಳಿಂಬೆ ಹಣ್ಣು ಮಾರಾಟಕ್ಕೆ ಬಂದಿದೆ. ಬೆಲೆಯೂ 100–150/ ಕೆಜಿಗೆ ಇರುವುದರಿಂದ ಎಲ್ಲರೂ ಆರೋಗ್ಯಕ್ಕೆ ಉತ್ತಮವಾದ ಈ ಹಣ್ಣನ್ನು ಈಗಲೇ ಖರೀದಿಸಿ ಸವಿಯುವುದು ಉತ್ತಮ.

ದಾಳಿಂಬೆ ಇಂದು ತೋಟಗಾರಿಕಾ ಹಣ್ಣಿನ ಬೆಳೆಗಳಲ್ಲಿ ಅಧಿಕ ಆದಾಯ ತಂದು ಕೊಡುವ ಬೆಳೆಯಾಗಿದ್ದು, ಬಾಗಲಕೋಟೆ ಜಿಲ್ಲೆಯಿಂದ ಮೊದಲ್ಗೊಂಡು ನೆರೆಯ ಬಳ್ಳಾರಿ, ಚಿತ್ರದುರ್ಗ, ತುಮಕೂರು, ಬೆಂಗಳೂರು, ಚಾಮರಾಜನಗರ,ಕೊಳ್ಳೇಗಾಲ ತನಕ ಬೆಳೆ ಪ್ರದೇಶ ವಿಸ್ತಾರವಾಗುತ್ತಿದೆ. ಹೊಸ ಹೊಸ ಬೆಳೆಗಾರರು, ಹೆಚ್ಚು ಹೆಚ್ಚು ಬೆಳೆ ಪ್ರದೇಶಗಳು ಸೇರ್ಪಡೆಯಾಗುತ್ತಿದ್ದು, ಇವರೆಲ್ಲರಿಗೂ ಗಣನೀಯ ಪ್ರಮಾಣದಲ್ಲಿ ನೆಡು ಸಾಮಾಗ್ರಿಯ ಅವಶ್ಯಕತೆ ಇರುತ್ತದೆ.

ದಾಳಿಂಬೆಯನ್ನು ಅಧಿಕ ಪ್ರಮಾಣದಲ್ಲಿ ಗೆಲ್ಲು ತುಂಡುಗಳಿಗೆ ಬೇರು ಬರಿಸುವ ಗೂಟಿ ಕಸಿ ವಿಧಾನದಲ್ಲಿ ಅಭಿವೃದ್ಧಿ ಮಾಡಲಾಗುತ್ತಿದೆ. ಇತ್ತೀಚೆಗೆ ಅಂಗಾಶ ಕಸಿಯ ಮೂಲಕವೂ ಸಸ್ಯಾಭಿವೃದ್ಧಿ ಮಾಡಲು ಪ್ರಾರಂಭಿಸಲಾಗಿದ್ದು, 99% ಹೆಚ್ಚಿನ ಬೆಳೆಗಾರರು ಈವರೆಗೂ ಗೂಟಿ ಸಸ್ಯಗಳನ್ನೇ ಬಳಕೆ ಮಾಡುತ್ತಿದ್ದಾರೆ. ಎಲ್ಲಾ ಕಡೆಯ ಎಲ್ಲಾ ದಾಳಿಂಬೆ ಸಸ್ಯದಿಂದ ಸಸ್ಯೋತ್ಪಾದನೆ ಮಾಡಲಾಗುತ್ತಿಲ್ಲ. ಆರೋಗ್ಯವಂತ ಸಸಿಗಳೇ ದಾಳಿಂಬೆ ಕೃಷಿಯ ಮೂಲವಾದ ಕಾರಣ ಇಲ್ಲಿ ಯಾವುದೇ ನಿರ್ಲಕ್ಷ್ಯ ಮಾಡಬಾರದು. ದಾಳಿಂಬೆಗೆ ಸಸ್ಯ ಮೂಲದಿಂದ ಬರುವ ವೈರಾಣು ಹಾಗೂ ದುಂಡಾಣು ಮತ್ತು ಸೊರಗು ರೋಗ ಮುಕ್ತವಾದ ಹೊಲದಿಂದ ಮಾತ್ರವೇ ಸಸ್ಯಾಭಿವೃದ್ಧಿ ಮಾಡಲು ಸಾಧ್ಯ. ಇದಕ್ಕೆ ರೋಗ ಮುಕ್ತ ಪ್ರಮಾಣೀಕರಣ ವ್ಯವಸ್ಥೆ ಇದ್ದು, ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ತಜ್ಞರು ಅಥವಾ ರಾಜ್ಯ ಕೃಷಿ ವಿಶ್ವ ವಿಧ್ಯಾನಿಲಯದ ತಜ್ಞರು ನಿರಂತರವಾಗಿ ಪರಿವೀಕ್ಷಣೆ ನಡೆಸಿ, ಅವರಿಂದ ಪ್ರಮಾಣಿತವಾದಾಗ ಮಾತ್ರ ಅಲ್ಲಿ ಸಸ್ಯಾಭಿವೃದ್ಧಿ ಮಾಡಿ ಮಾರಾಟ ಮಾಡಬಹುದು. ಈ ರೀತಿ ಪ್ರಮಾಣೀಕೃತವಾದ ಕೆಲವು ಸಸ್ಯೋತ್ಪಾದನಾ ನರ್ಸರಿಗಳು ನಮ್ಮ ರಾಜ್ಯದಲ್ಲಿ ಇದ್ದು ಇವರಿಂದ ಮಾತ್ರ ರೋಗ ಮುಕ್ತ ಸಸ್ಯಗಳನ್ನು ಪಡೆಯಲು ಸಾಧ್ಯ.

**ಗೆಲ್ಲಿಗೆ ಬೇರು ಬರಿಸುವಿಕೆ:** ಇದು ದಾಳಿಂಬೆ ಬೆಳೆಗಾರರಿಗೆಲ್ಲಾ ಸುಲಭವಾದ ವಿಧಾನ ಕೂಡಾ. ಈ ಸಸ್ಯೋತ್ಪಾದನೆಗೆ ಗರಿಷ್ಟ ಒಂದು ವರ್ಷ ಪ್ರಾಯ ಬೆಳೆದ ಗೆಲ್ಲನ್ನು ಮಾತ್ರ ಆಯ್ಕೆ ಮಾಡಬೇಕು. ಇದನ್ನು ತೆರೆದ ವಾತಾವರಣದಲ್ಲಿ ಬೇರು ಬರಿಸಲು ಸಾಧ್ಯವಿಲ್ಲ. ಅದಕ್ಕೆ ಪಾಲಿ ಹೌಸ್ ಬೇಕಾಗುತ್ತದೆ. ಪ್ರತೀ ವರ್ಷ ದಾಳಿಂಬೆ ಸಸಿಯನ್ನು ಪ್ರೂನಿಂಗ್ ಮಾಡಲಾಗುತ್ತದೆ. ಪ್ರೂನಿಂಗ್ ಮಾಡಲು ಬಳಕೆ ಮಾಡಿದ ಕಡ್ಡಿಗಳನ್ನೇ ಬಳಕೆ ಮಾಡಬಹುದು. ಯಾವಾಗ ಬೆಳೆ ಇಲ್ಲದೆ ಸಸಿ ವಿರಾಮದಲ್ಲಿರುತ್ತದೆಯೋ ಆ ಸಮಯದಲ್ಲಿ ಪಡೆದ ಗೆಲ್ಲುಗಳಾಗಿರಬೇಕು. 6–8 ತಿಂಗಳು ಬೆಳೆದ, 0.6 ರಿಂದ 1.2 ಸೆಂ. ಮೀ. ದಪ್ಪದ, 20–25 ಸೆಂ. ಮೀ. ಉದ್ದದ ಗೆಲ್ಲುಗಳಾಗಿರಬೇಕು. ಇದನ್ನು 5 ನಿಮಿಷ ಕಾಲ 1ಗ್ರಾಂ ಪ್ರಮಾಣದ ಬಾವಿಸ್ಟಿನ್ ದ್ರಾವಣದಲ್ಲಿ ಅದ್ದಿ ಸ್ಟೆರಿಲೈಸ್ ಮಾಡಿ. ನಂತರ 52–53 ಡಿಗ್ರಿ ಉಷ್ಣತೆಯ ಬಿಸಿ ನೀರಿನಲ್ಲಿ ಅದ್ದಿ ಯಾವುದೇ ರೋಗ ಕಾರಕಗಳಿರದಂತೆ ಮಾಡಿಕೊಳ್ಳಿ.



ತುಂಡು ಮಾಡಿ ಸಿದ್ದಪಡಿಸಿಟ್ಟುಕೊಂಡ ಕಡ್ಡಿಯ ಬುಡವನ್ನು 3 ರಿಂದ 5 ನಿಮಿಷ ಕಾಲ ಇಂಡೋಲ್ ಬ್ಯೂಟ್ರಿಕ್ ಎಸಿಡ್‌ನಲ್ಲಿ (1 ಲೀ ನೀರಿಗೆ 2.5 ರಿಂದ 5 ಗ್ರಾಂ ತನಕ ಮಿಶ್ರಣ ಮಾಡಿ) ಅದ್ದಿ ಬೇರು ಬರಲು ಪ್ರಚೋದಿಸಬೇಕು. ಇದನ್ನು ನಂತರ ಕೋಕೋ ಪೀಟ್ ತುಂಬಿದ ರೂಟ್ ಟ್ರೈನರ್ ಟ್ರೇಯಲ್ಲಿ ಹಾಕಿ ಪಾಲಿ ಹೌಸ್ ಒಳಗೆ 40–60 ದಿನ ಕಾಲ ಇಟ್ಟಾಗ ಅದರಲ್ಲಿ ಬೇರು ಬಂದು ಚಿಗುರುತ್ತದೆ. ನಂತರ ಅದನ್ನು ಪಾಲಿ ಹೌಸ್ ನಿಂದ ಹೊರಗೆ ತಂದು 50% ನೆರಳಿನಲ್ಲಿ ಇಡಬೇಕು. ನಂತರ 50 ದಿನ ಕಳೆದು ನಾಟಿ ಮಾಡಬಹುದು. ಇಲ್ಲವೇ ದೊಡ್ಡ ಪಾಲೀ ಬ್ಯಾಗಿಗೆ ವರ್ಗಾಯಿಸಬೇಕು.

**ಕಸಿ ಮಾಡುವಿಕೆ:** ಮೃದು ಕಾಂಡ ಕಸಿವಿಧಾನದಂತೆ ದಾಳಿಂಬೆಯನ್ನು ಅದೇ ಜಾತಿಯ ಸಸ್ಯಕ್ಕೆ ಕಸಿ ಮಾಡಬಹುದು. ಕಸಿಗೆ ಬೇರು ಸಸ್ಯವಾಗಿ ಗಣೇಶ್ ಇಲ್ಲವೇ ಭಗವಾ ತಳಿಯ ಸಸಿಯನ್ನು ಬಳಸಬೇಕು. 1 ರಿಂದ 1–1/2 ವರ್ಷದ ಬೇರು ಸಸ್ಯ ಬೇಕು. ಚಳಿ ಕಳೆದ ಮೇಲೆ ಕಸಿ ಮಾಡಬೇಕು. 6 ರಿಂದ 12 ತಿಂಗಳು ಪ್ರಾಯದ ಕಸಿ ಕಡ್ಡಿಯನ್ನು ಆಯ್ಕೆ ಮಾಡಬೇಕು. ಬೇರು ಸಸ್ಯದ ಬುಡದಿಂದ 25–30 ಸೆಂ. ಮೀ ಎತ್ತರಕ್ಕೆ ತುಂಡು ಮಾಡಿ ಅದನ್ನು 1–1.5 ಇಂಚು ಸಿಗಿದು, ಆ ಭಾಗಕ್ಕೆ ಕಸಿ ಕಡ್ಡಿಯ ಭಾಗವನ್ನು ವಿ ಆಕಾರದಲ್ಲಿ ಕತ್ತರಿಸಿ ಅದರ ಎಡೆಗೆ ತುರುಕಿ ಆ ಭಾಗವನ್ನು ಕಸಿ ಪಟ್ಟಿಯಿಂದ ಗಾಳಿಯಾಡಂತೆ ಕಟ್ಟಬೇಕು. ಕಸಿ ಕಡ್ಡಿ ತುರುಕಿದ ಭಾಗಕ್ಕೆ ಒಂದು ಕಸಿ ಕೊಟ್ಟೆಯನ್ನು ಮುಚ್ಚಿ ಪಾಲಿ ಹೌಸ್‌ನಲ್ಲಿ 25–30 ದಿನ ಇಟ್ಟಾಗ ಕಸಿ ಜೋಡಣೆ ಭಾಗ ಸೇರಿಕೊಳ್ಳುತ್ತದೆ. ಇದನ್ನೂ ಬೆಳೆಗಾರರು ಅವರವರ ಹೊಲದಲ್ಲೇ ಮಾಡಿಕೊಳ್ಳಬಹುದು.



**ಗೂಟಿ ವಿಧಾನ:** ಭಾರತದಾದ್ಯಂತ ಹೆಚ್ಚಿನ ದಾಳಿಂಬೆ ಬೆಳೆಗಾರರು ಈ ವಿಧಾನವನ್ನೇ ಅನುಸರಿಸುತ್ತಿದ್ದು, ಅನುಭವ ಇದ್ದರೆ ಇದು ಉತ್ತಮ ಕಸಿ ವಿಧಾನ. ದಾಳಿಂಬೆಯ ಗಿಡದ ಮೇಲ್ಮುಖ ಗೆಲ್ಲುಗಳ ದಪ್ಪ 0.8 ಸೆಂ. ಮೀ. ನಿಂದ 1.5 ಸೆಂ. ಮೀ. ಇರುವ ಗೆಲ್ಲುಗಳಿಗೆ 1/2 ಸೆಂ. ಮೀ. ಅಗಲಕ್ಕೆ ಮೇಲೆ ಮತ್ತು ಕೆಳಗೆ ಗಚ್ಚು ಹಾಕಿ ಸಿಪ್ಪೆಯನ್ನು ತೆಗೆಯಿರಿ. ಈ ಭಾಗಕ್ಕೆ ಮೇಲೆ 2000 –3000 ಪಿ ಪಿ ಎಂ ಸಾಂದ್ರತೆಯ ಬೇರು ಬರಿಸುವ ಹಾರ್ಮೋನು (ಐಬಿಎ) ಹಚ್ಚಿರಿ. ಒಂದು ಪಾಲಿಥೀನ್ ಕಾಗದಕ್ಕೆ (6 6 ಇಂಚು ಉದ್ದ ಅಗಲ) ಸ್ಟೆರಿಲೈಸ್ ಮಾಡಲಾದ ತೆಂಗಿನ ನಾರಿನ ಹುಡಿ ಹಾಕಿ, ಗಚ್ಚು ತೆಗೆದ ಭಾಗಕ್ಕೆ ಸುತ್ತಲೂ ಬರುವಂತೆ ಇಟ್ಟು, ಕೆಳಗೆ, ಮೇಲೆ ಮತ್ತು ಮಧ್ಯೆ ಬಿಗಿಯಾಗಿ ಕಟ್ಟು ಹಾಕಿರಿ. ಹೀಗೆ 6 ಇಂಚು ಬಿಟ್ಟು ಮತ್ತೆ ಮತ್ತೊಂದು ಗಚ್ಚು ಹಾಕಿ ಕಸಿ ಮಾಡಬಹುದು. ಗೆಲ್ಲಿನ ಉದ್ದಕ್ಕನುಗುಣವಾಗಿ 8–10 ತನಕವೂ ಗೂಟಿ ಕಸಿ ಮಾಡಬಹುದು. ವಾರಕ್ಕೆ ಒಮ್ಮೆ ಅಥವಾ ಎರಡು ಭಾರಿ ಪವರ್ ಸ್ಪ್ರೇಯರ್ ಮೂಲಕ ನೀರು ಸಿಂಪಡಿಸುತ್ತಿದ್ದರೆ 75 –90 ದಿನಕ್ಕೆ ಬೇರು ಬರುತ್ತದೆ. ನಂತರ ಗೆಲ್ಲನ್ನು ತುಂಡು ಮಾಡಿ ಪಾಲಿಥೀನ್ ಹಾಳೆ ಬಿಚ್ಚಿ ಅದನ್ನು ಬೇರೆ ಮಾಧ್ಯಮ ತುಂಬಿದ ಪ್ಲಾಸ್ಟಿಕ್ ಕೊಟ್ಟೆಯಲ್ಲಿ ಹಾಕಿ ಬೆಳೆಸಬೇಕು. ಅಲ್ಲಿ ಸುಮಾರು 1–2 ತಿಂಗಳು ಬೆಳೆದ ಮೇಲೆ ನಾಟಿ ಮಾಡಬಹುದು. ಈ ಕಸಿಗೆ ಜೂನ್ ತಿಂಗಳಿನಿಂದ ಆಗಸ್ಟ್ ತನಕದ ಅವಧಿ ಹೆಚ್ಚು ಸೂಕ್ತ. ನಂತರ ನೀರು ಸ್ಪ್ರೇ ಮಾಡಿ ಮಾಡಬೇಕು.

– **ರಾಧಾಕೃಷ್ಣ** ಹೊಳ್ಳ

# ರಾಜಕೀಯ ನಿವೃತ್ತಿ ಹೇಳಿಕೆ ನೀಡದಂತೆ ಸೂಚನೆ

## ಮಾಜಿ ಸಿ.ಎಂ. ಸಿದ್ದರಾಮಯ್ಯಗೆ ರಾಹುಲ್ ಗಾಂಧಿ ಕಿವಿಮಾತು | ಪ್ರಸ್ತುತ ವಿದ್ಯಮಾನ ಚರ್ಚೆ

• ಪ್ರಜೋದಯ ವರದಿ

ನವದೆಹಲಿ: ರಾಜಕೀಯ ನಿವೃತ್ತಿ ಕುರಿತು ಸಾರ್ವಜನಿಕವಾಗಿ ಪದೇ ಪದೇ ಹೇಳಿಕೆ ನೀಡದಂತೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸಲಹೆ ನೀಡಿದ್ದಾರೆ.

ದೆಹಲಿ ಭೇಟಿ ವೇಳೆ ರಾಹುಲ್ ಗಾಂಧಿ ಅವರನ್ನು ಭೇಟಿಯಾದ ಸಿದ್ದರಾಮಯ್ಯ ಅವರೊಂದಿಗೆ ರಾಜ್ಯ ರಾಜಕೀಯ ವಿದ್ಯಮಾನಗಳ ಕುರಿತು ಚರ್ಚಿಸಲಾಯಿತು. ಈ ವೇಳೆ ರಾಜಕೀಯ ನಿವೃತ್ತಿ ಬಗ್ಗೆ ಸಾರ್ವಜನಿಕವಾಗಿ ಪದೇ ಪದೇ ಮಾತನಾಡುವುದರಿಂದ ಪಕ್ಷದ ಕಾರ್ಯಕರ್ತರಲ್ಲಿ ಗೊಂದಲ ಮೂಡುವುದರ ಜೊತೆಗೆ ಸಾರ್ವಜನಿಕ ವಲಯಕ್ಕೂ ತಪ್ಪು ಸಂದೇಶ ರವಾನೆಯಾಗುವ ಸಾಧ್ಯತೆ ಇದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಇಂತಹ ಬಹಿರಂಗ ಹೇಳಿಕೆಗಳನ್ನು ನೀಡದಿರುವುದು ಸೂಕ್ತ ಎಂದು ರಾಹುಲ್ ಗಾಂಧಿ ಸಲಹೆ ನೀಡಿರುವ ವಿಚಾರ ಮೂಲಗಳಿಂದ ತಿಳಿದು



ಬಂದಿದೆ.

ರಾಹುಲ್ ಗಾಂಧಿ ಅವರ ಸಲಹೆಗೆ ಸಕಾರಾತ್ಮಕವಾಗಿ ಉತ್ತರಿಸಿದ ಸಿದ್ದರಾಮಯ್ಯ, ತಮ್ಮ ಹೇಳಿಕೆಯ ಹಿಂದಿನ ಸ್ಪಷ್ಟ ಉದ್ದೇಶವನ್ನು ವಿವರಿಸಿದ್ದಾರೆ. ನಾನು ಚುನಾವಣಾ ರಾಜಕೀಯದಿಂದ ನಿವೃತ್ತಿಯಾಗುವ ಕುರಿತಷ್ಟೇ ಮಾತನಾಡಿದ್ದೇನೆ. ವಯಸ್ಸಿನ ಕಾರಣದಿಂದಾಗಿ ಮುಂದಿನ ದಿನಗಳಲ್ಲಿ ಸ್ಪರ್ಧಿಸುವುದು ಕಷ್ಟವಾಗಬಹುದು ಎಂದಿದ್ದೇನೆಯೇ ಹೊರತು, ಸಕ್ರಿಯ ರಾಜಕೀಯದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ಸಾರ್ವಜನಿಕ ಜೀವನ, ಪಕ್ಷ ಸಂಘಟನೆ ಹಾಗು ಕಾಂಗ್ರೆಸ್‌ನ ಎಲ್ಲಾ ಚಟುವಟಿಕೆಗಳಲ್ಲಿ ಎಂದಿನಂತೆ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತೇನೆಂದು ಅವರು ಸ್ಪಷ್ಟಪಡಿಸಿದ್ದಾರೆ.

ಇದೇ ವೇಳೆ ರಾಜ್ಯ ರಾಜಕೀಯದ ಹಲವು ಪ್ರಮುಖ ವಿಚಾರಗಳ ಕುರಿತು ರಾಹುಲ್ ಗಾಂಧಿ ಅವರೊಂದಿಗೆ ಸಿದ್ದರಾಮಯ್ಯ ಚರ್ಚೆ ನಡೆಸಿದ್ದಾರೆ. ಮುಂಬರುವ ಸಚಿವ ಸಂಪುಟ ಪುನಾರಚನೆ/ವಿಸ್ತರಣೆಯ ಸಂದರ್ಭದಲ್ಲಿ ತಮ್ಮ ಆಪ್ತರಿಗೆ ಸೂಕ್ತ ಸಚಿವ ಸ್ಥಾನ ಕಲ್ಪಿಸುವುದು. ವಿಧಾನ ಪರಿಷತ್ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ, ರಾಜ್ಯದಲ್ಲಿ ಬಹುಚರ್ಚಿತ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ (ಜಾತಿ ಗಣತಿ) ವರದಿಯ ಜಾರಿ ಹಾಗೂ ಅದರ ರಾಜಕೀಯ ಪರಿಣಾಮಗಳ ಕುರಿತು ಉಭಯ ನಾಯಕರು ಗಂಭೀರ ಸಮಾಲೋಚನೆ ನಡೆಸಿದ್ದಾರೆಂದು ತಿಳಿದುಬಂದಿದೆ.

**ನಿವೃತ್ತಿ ಮಾತು ತಂದ ಆತಂಕ:**

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪದೇ ಪದೇ ನೀಡುತ್ತಿರುವ ನಿವೃತ್ತಿ ಮಾತು ಕಾಂಗ್ರೆಸ್‌ನಲ್ಲಿ ಕಂಪನ ಸೃಷ್ಟಿಸಿದೆ. ಮುಖ್ಯಮಂತ್ರಿಯಾಗಿ ಮೂರು ವರ್ಷದ ಬಳಿಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಅವರು ನಂತರದ ಸಾರ್ವಜನಿಕ ಸಭೆಗಳಲ್ಲಿ ಚುನಾವಣಾ ರಾಜಕೀಯದಿಂದ ನಿವೃತ್ತಿ ಹೊಂದುತ್ತೇನೆ. ಪ್ರಸ್ತುತ ದಿನಗಳಲ್ಲಿ ಚುನಾವಣೆ ಎದುರಿಸುವುದು ಕಷ್ಟ. ಭಾರೀ ದುಡ್ಡು ಖರ್ಚಾಗುತ್ತದೆ. ಈ ವ್ಯವಸ್ಥೆ ಸರಿಯಾಗಬೇಕು ಎನ್ನುತ್ತಿದ್ದಾರೆ.

ಜೊತೆಗೆ ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಸಮಾವೇಶವೊಂದರಲ್ಲಿ ಅಹಿಂದಕ್ಕೆ ಶೇ. 75 ಮೀಸಲಾತಿ ಕಲ್ಪಿಸಬೇಕೆಂದು ಹೇಳುವ ಮೂಲಕ ಹೊಸ ದಾಳ ಉರುಳಿಸಿದ್ದಾರೆ. ಸಿದ್ದರಾಮಯ್ಯ ಅವರ ಈ ನಡೆ ಕಾಂಗ್ರೆಸ್ ಹೈಕಮಾಂಡ್‌ನಲ್ಲಿ ಭಾರೀ ಚರ್ಚೆಗೆ ಎಡೆಮಾಡಿಕೊಟ್ಟಿವೆ. ಹಾಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಕಟ್ಟಿಹಾಕಲು ಸಿದ್ದರಾಮಯ್ಯ ಈ ರೀತಿಯ ದಾಳ ಉರುಳಿಸುತ್ತಿದ್ದಾರೆಯೇ ಎಂಬ ಚರ್ಚೆಗಳು ಕೇಳಿಬಂದಿವೆ.

### ಜಾತಿ ಗಣತಿ ವರದಿ ಜಾರಿಗೆ ಮನವಿ

ಕರ್ನಾಟಕದಲ್ಲಿ ಜಾತಿ ಗಣತಿ ವರದಿಯನ್ನು ಶೀಘ್ರವಾಗಿ ಜಾರಿಗೆ ತರುವಂತೆಯೂ ಸಿದ್ದರಾಮಯ್ಯ ಅವರು ರಾಹುಲ್ ಗಾಂಧಿಗೆ ಒತ್ತಾಯಿಸಿದ್ದಾರೆ. ಜಾತಿ ಗಣತಿ ವರದಿಯ ಶಿಫಾರಸುಗಳನ್ನು ಯಾವುದೇ ವಿಳಂಬವಿಲ್ಲದೆ ಜಾರಿಗೆ ತರಬೇಕೆಂದು ಒತ್ತಾಯಿಸಿದ್ದಾರೆ.
ರಾಜಕೀಯ ಮತ್ತು ಸಾಂಸ್ಥಿಕ ಅವಕಾಶಗಳ ಕುರಿತು ನಿರ್ಧಾರ ಕೈಗೊಳ್ಳುವಾಗ ಅಹಿಂದ ವರ್ಗಗಳ ಹಿತಾಸಕ್ತಿಗಳನ್ನು ರಕ್ಷಿಸುವ ಅಗತ್ಯವನ್ನೂ ಸಿದ್ದರಾಮಯ್ಯ ಅವರು ಒತ್ತಿ ಹೇಳಿದ್ದಾರೆಂದು ತಿಳಿದು ಬಂದಿದೆ.

# ಹೆಬ್ಬಾಳು ಏತ ನೀರಾವರಿ ಯೋಜನೆ ಅನುಷ್ಠಾನಕ್ಕೆ ಆಗ್ರಹ

• ಪ್ರಜೋದಯ ವರದಿ



**ಬೇಲೂರು:** ಹೆಬ್ಬಾಳು ಏತ ನೀರಾವರಿ ಯೋಜನೆಯನ್ನು ಕೂಡಲೇ ಅನುಷ್ಠಾನಕ್ಕೆ ತಂದು ಎಂಟು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ 61 ಕೆರೆಗಳಿಗೆ ನೀರು ತುಂಬಿಸುವ ಮೂಲಕ ರೈತರ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು ಎಂದು ವಾಲ್ಮೀಕಿ ಸಂಘದ ಜಿಲ್ಲಾಧ್ಯಕ್ಷ ಮಧು ನಾಯಕ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆ.7ರಂದು ಬಸವ ವೃತ್ತದಿಂದ ತಾಲೂಕು ಕಚೇರಿವರೆಗೆ ಹಮ್ಮಿಕೊಳ್ಳಲಾಗಿದ್ದ ಹೆಬ್ಬಾಳು ಏತ ನೀರಾವರಿ ಹೋರಾಟಕ್ಕೆ ಯಶಸ್ವಿಯಾಗಿ ಬೆಂಬಲ ನೀಡಿದ ಸಾರ್ವಜನಿಕರು ಹಾಗೂ ರೈತರಿಗೆ ಧನ್ಯವಾದ ಅರ್ಪಿಸಿದರು. ಸಾಮಾಜಿಕ ಜಾಲತಾಣಗಳಲ್ಲಿ ಈ ಹೋರಾಟವನ್ನು ಯಾವುದೋ ಒಂದು ರಾಜಕೀಯ ಪಕ್ಷಕ್ಕೆ ಸೀಮಿತಗೊಳಿಸಿ ಪ್ರಚಾರ ಮಾಡಲಾಗುತ್ತಿರುವುದು ಸರಿಯಲ್ಲ. ಹೋರಾಟವು ಯಾವುದೇ ಒಂದು ರಾಜಕೀಯ ಪಕ್ಷಕ್ಕೆ ಸೇರಿದದ್ದಲ್ಲ. ಎಂಟು ಪಂಚಾಯಿತಿಗಳ 61 ಕೆರೆಗಳು ಹಾಗೂ 50ಕ್ಕೂ ಹೆಚ್ಚು ಗ್ರಾಮಗಳಿಗೆ ನೀರು ತಲುಪಿಸುವ ಉದ್ದೇಶದಿಂದ ಪಕ್ಷಾತೀತವಾಗಿ ಹೋರಾಟ ನಡೆಸಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು.

ತಾಲ್ಲೂಕಿನಲ್ಲಿ ತೀವ್ರ ಬರಗಾಲ ಆವರಿಸಿದ್ದು, 1000 ಅಡಿ ಆಳಕ್ಕೆ ಕೊಳವೆಬಾವಿ ಕೊರೆದರೂ ನೀರು ಸಿಗದ ಪರಿಸ್ಥಿತಿ ನಿರ್ಮಾಣವಾಗಿದೆ. ಕೆರೆ-ಕಟ್ಟೆಗಳು ಬತ್ತಿ ಹೋಗಿದ್ದು, ಜಾನುವಾರುಗಳಿಗೆ ಕುಡಿಯುವ ನೀರು ಒದಗಿಸುವುದೂ ಕಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಕೂಡಲೇ ಸ್ಪಂದಿಸಿ ಹೆಬ್ಬಾಳು ಏತ ನೀರಾವರಿ ಯೋಜನೆಗೆ ಅಗತ್ಯ ಕ್ರಮ ಕೈಗೊಂಡು ಕಾಮಗಾರಿಯನ್ನು ಪೂರ್ಣಗೊಳಿಸಬೇಕು. ಜೊತೆಗೆ ಬೇಲೂರು ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸಬೇಕು ಎಂದು ಒತ್ತಾಯಿಸಿದರು.

ಹೆಬ್ಬಾಳು ಗ್ರಾಮದ ಗ್ರಾಮಸ್ಥ ಉಮಾಶಂಕರ ಮಾತನಾಡಿ, ತಾಲೂಕಿನ ಎಂಟು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ 61 ಕೆರೆಗಳಿಗೆ ನೀರು ತುಂಬಿಸುವ ಬೇಡಿಕೆ ಮುಂದಿಟ್ಟುಕೊಂಡು ಪಕ್ಷಾತೀತ ಹಾಗೂ ಜಾತ್ಯಾತೀತವಾಗಿ ನೀರಾವರಿ ಹೋರಾಟ ನಡೆಸಲಾಗುತ್ತಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬಂಟೇನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಇಸ್ಮಾಯಿಲ್, ರಾಕೇಶ್, ರಘು ಉಪಸ್ಥಿತರಿದ್ದರು.


ಅರಕಲಗೂಡು ಗೌರವಾನ್ವಿತ 1ನೇ ಹೆಚ್ಚುವರಿ ಸಿವಿಲ್ ಜೆಡ್ಜ್ & ಜೆ.ಎಂ.ಎಫ್.ಸಿ ರವರ ಘನ ನ್ಯಾಯಾಲಯದಲ್ಲಿ

ಸಿ.ಆರ್.ಮಿಸ್ ಸಂಖ್ಯೆ898/2026

ಅರ್ಜಿದಾರರು :

1) ದ್ಯಾವಮ್ಮ ಕೋಂ ಲೇಟ್ ವೀರಪ್ಪ ಸುಮಾರು 83 ವರ್ಷ,
2) ಕೆ.ವಿ ವೀರಭದ್ರಪ್ಪ ಬಿನ್ ಲೇಟ್ ವೀರಪ್ಪ ಸುಮಾರು 65 ವರ್ಷ,
3) ಗಂಗಾಬಿಕೆ ಕೋಂ ಲೇಟ್ ಸುರೇಶ ಸುಮಾರು 59 ವರ್ಷ
ಬಸವಾಪಟ್ಟಣ, ಜನತಾ ಕಾಲೋನಿ, ರಾಮನಾಥಪುರ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
4) ಸುಧಾ ಕೋಂ ಮಲ್ಲಪ್ಪ ಸುಮಾರು 45 ವರ್ಷ.
5) ಕುಮಾರ ಕೆ.ವಿ ಬಿನ್ ಲೇಟ್ ವೀರಪ್ಪ ಸುಮಾರು 43 ವರ್ಷ
1.2, 4.5ನೇ ಅರ್ಜಿದಾರರ ವಿಳಾಸ: ಕೇರಳಾಪುರ ಗ್ರಾಮ, ರಾಮನಾಥಪುರ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.

ವಿರುದ್ಧ:

ಎದುರುಅರ್ಜಿದಾರರು :-ತಹಸೀಲ್ದಾರ್ ರವರು ಜನನ-ಮರಣ ನೋಂದಾಣಾಧಿಕಾರಿಗಳ ಕಛೇರಿ, ಅರಕಲಗೂಡು, ಅರಕಲಗೂಡು ತಾಲ್ಲೂಕು.

ಪತ್ರಿಕಾ ಪ್ರಕಟಣೆ

1ನೇ ಅರ್ಜಿದಾರರ ಗಂಡ, 2,4&5ನೇ ಅರ್ಜಿದಾರರ ತಂದೆ, 3ನೇ ಅರ್ಜಿದಾರರ ಮಾವನವರಾದ ವೀರಪ್ಪ ಬಿನ್ ನಾಗಪ್ಪ ರವರು ದಿನಾಂಕ:- 28/02/2014 ರಂದು ಹಾಸನ ಜಿಲ್ಲೆ. ಅರಕಲಗೂಡು ತಾಲ್ಲೂಕು, ರಾಮನಾಥಪುರ ಹೋಬಳಿ, ಕೇರಳಾಪುರ ಗ್ರಾಮದ ಅರ್ಜಿದಾರರುಗಳ ಮನೆಯಲ್ಲಿ ಮೃತರಾಗಿರುತ್ತಾರೆ. ಸದರಿರವರು ಮೃತರಾಗಿರುವ ಬಗ್ಗೆ ಮರಣ ದೃಢೀಕರಣ ಪತ್ರವನ್ನು ಕೋರಿ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿಯವರು ಮೃತರಾದ ಬಗ್ಗೆ ಮೇಲ್ಕಂಡ ಅರ್ಜಿಯಲ್ಲಿ ಹಿತಾಸಕ್ತಿ ಉಳ್ಳವರು ಯಾರಾದರು ಇದ್ದಲ್ಲಿ ಘನ ನ್ಯಾಯಾಲಯಕ್ಕೆ ದಿನಾಂಕ 4/11/26ರ ಬೆಳಿಗ್ಗೆ 11-00 ಗಂಟೆಗೆ ನೀವಾಗಲಿ ಅಥವಾ ನಿಮ್ಮ ಪರವಾಗಿ ನಿಮ್ಮ ವಕೀಲರ ಮೂಲಕವಾಗಲಿ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ಈ ಅರ್ಜಿಯನ್ನು ಏಕ ಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.2026ನೇ ವರ್ಷದ 8/9/26 ದಿನಾಂಕದಂದು ಇದನ್ನು ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು (ಚಲುವರಾಜು ಹೆಚ್.ಜೆ) ವಕೀಲರು, ಅರಕಲಗೂಡು ದಿನಾಂಕ:8/9/26

ನ್ಯಾಯಾಲಯದ ಅಪ್ಪಣೆ ಮೇರೆಗೆ ಶಿರಸ್ತೇದಾರರು ಗೌರವಾನ್ವಿತ 1ನೇ ಹೆಚ್ಚುವರಿ ಸಿವಿಲ್ ಜೆಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಅರಕಲಗೂಡು


## ಸೆ.15 ರಂದು ಅಂತರಾಷ್ಟ್ರೀಯ ಪ್ರಜಾ ಪ್ರಭುತ್ವ ದಿನಾಚರಣೆ




• ಪ್ರಜೋದಯ ವರದಿ

**ಹಾಸನ:** ಅಂತರಾಷ್ಟ್ರೀಯ ಪ್ರಜಾ ಪ್ರಭುತ್ವ ದಿನಾಚರಣೆ ಪ್ರಯುಕ್ತ ಸೆ.15 ರಂದು ಬೆಳಿಗ್ಗೆ 10.30ಕ್ಕೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಡಾ|| ಬಿ.ಆರ್‌ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ಬೆಳಿಗ್ಗೆ 11 ಗಂಟೆಗೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ವೇದಿಕೆ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಕಾರ್ಯಕ್ರಮಕ್ಕೆ ಎಲ್ಲಾ ಜನ ಪ್ರತಿನಿಧಿಗಳು, ಅಧಿಕಾರಿಗಳು, ನೌಕರರು ಹಾಗೂ ಎಲ್ಲಾ ಸಂಘ ಸಂಸ್ಥೆಗಳ ಮುಖಂಡರು, ಶಾಲಾ/ಕಾಲೇಜು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರು ಕೋರಿದ್ದಾರೆ.

## ಎಸ್‌ಐಆರ್: 13,870 ಮಂದಿಗೆ ನೋಟಿಸ್



• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನಲ್ಲಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಪ್ರಗತಿಯಲ್ಲಿದ್ದು, ಈಗಾಗಲೇ 13,870 ಮಂದಿಗೆ ನೋಟಿಸ್ ನೀಡಲಾಗಿದೆ. ನೋಟಿಸ್ ಪಡೆದವರು ಅಗತ್ಯ ಮಾಹಿತಿ ಹಾಗೂ ಸೂಕ್ತ ದಾಖಲೆಗಳನ್ನು ಸಲ್ಲಿಸಿ, ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಕಡ್ಡಾಯವಾಗಿ ಖಚಿತಪಡಿಸಿಕೊಳ್ಳಬೇಕೆಂದು ತಹಶೀಲ್ದಾರ್ ಕೆ.ಸಿ.ಸೌಮ್ಯ ಅವರು ಮನವಿ ಮಾಡಿದರು.

ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯದ ಹಿನ್ನಲೆಯಲ್ಲಿ ತಾಲ್ಲೂಕಿನ ಐದು ಹೋಬಳಿಗಳು ಹಾಗೂ ಹಳ್ಳಿ ಮೈಸೂರು ಹೋಬಳಿ ಸೇರಿ ಒಟ್ಟು ಆರು ಹೋಬಳಿಗಳಿಗೆ ತಲಾ ಇಬ್ಬರಂತೆ 12 ಮಂದಿ ಸಹಾಯಕ ಚುನಾವಣಾಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದರು.

ನೇಮಕಗೊಂಡಿರುವ ಸಹಾಯಕ ಚುನಾವಣಾಧಿಕಾರಿಗಳು ಆಯಾ ಮತಗಟ್ಟೆಗಳಲ್ಲಿ ನಿಗದಿತ ಸಮಯಕ್ಕೆ ಹಾಜರಿದ್ದು, ಮತದಾರರಿಗೆ ನೀಡಿರುವ ನೋಟಿಸ್‌ಗೆ ಸಂಬಂಧಿಸಿದಂತೆ ಅಗತ್ಯ ದಾಖಲೆಗಳನ್ನು ಸ್ವೀಕರಿಸಿ ಸಲ್ಲಿಸುವುದು ಕಡ್ಡಾಯವಾಗಿದೆ. ನೋಟಿಸ್ ಪಡೆದ ಮತದಾರರು ಸಹ ಅಧಿಕಾರಿಗಳಿಗೆ ಅಗತ್ಯ ಮಾಹಿತಿ ಹಾಗೂ ದಾಖಲೆಗಳನ್ನು ಒದಗಿಸಿ, ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಸರಿಯಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕೆಂದು ಹೇಳಿದರು.

ಮತದಾರರ ನೋಂದಣಾಧಿಕಾರಿ ಬಿ.ಕೆ.ರುದ್ರಮುನಿ, ಚುನಾವಣಾ ಶಾಖೆಯ ಶಿರಸ್ತೇದಾರ್ ಕಿರಣ್ ಹಾಗೂ ಸಿಬ್ಬಂದಿ ಉಜ್ವಲ್ ಕುಮಾರ್ ಇದ್ದರು.

## ಸೆ.16 ರಂದು ಕ್ರೀಡೆ, ಸಾಂಸ್ಕೃತಿಕ ಸ್ಪರ್ಧೆಗಳು

• ಪ್ರಜೋದಯ ವರದಿ

ಹಾಸನ: ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯಿತಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲೆಯ ಹಿರಿಯ ನಾಗರಿಕರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ ಹಿರಿಯ ನಾಗರಿಕರ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಅ.1 ರಂದು ವಿಶ್ವ ಹಿರಿಯ ನಾಗರಿಕರ ದಿನಾಚರಣೆ- 2026ರ ಪ್ರಯುಕ್ತ ಜಿಲ್ಲೆಯ ಹಿರಿಯ ನಾಗರಿಕರಿಗಾಗಿ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

ಸೆ.16 ರಂದು ಜಿಲ್ಲಾ ನಿವೃತ್ತ ನೌಕರರ ಭವನದಲ್ಲಿ ವಯೋಮಿತಿ ಆಧಾರದ ಮೇಲೆ ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು, ಜಿಲ್ಲೆಯ ಹಿರಿಯ ನಾಗರೀಕರು ಹೆಚ್ಚಿನ ಸಂಖ್ಯೆ ಯಲ್ಲಿ ಭಾಗವಹಿಸಲು ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

**ಸಾಂಸ್ಕೃತಿಕ ಸ್ಪರ್ಧೆಗಳು:** 60 - 69, ವರ್ಷ ಹಾಗೂ 70 ಮೇಲ್ಪಟ್ಟ ವರಿಗೆ ಪುರುಷರು, ಮಹಿಳೆಯರಿಗೆ ಏಕಪಾತ್ರ ಅಭಿನಯ ಹಾಗೂ ಗಾಯನ ಸ್ಪರ್ಧೆಯನ್ನು (ಜಾನಪದ ಗೀತೆ), ಏರ್ಪಡಿಸಲಾಗಿದೆ.




ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಸೃಜನಶೀಲ ಆರ್ಥಿಕತೆಯ ಪಾಲುದಾರಿಕೆಯನ್ನು ಬಲಪಡಿಸುವ ನಿಟ್ಟಿನಲ್ಲಿ, ಸಂಸ್ಥೆಯು ದಕ್ಷಿಣ ಆಫ್ರಿಕಾ ಮತ್ತು ಜೊತೆಗೆ ತ್ರಿಪಕ್ಷೀಯ ಸಮನ್ವಯ ಒಪ್ಪಂದಕ್ಕೆ ಸಹಿ ಹಾಕಿದೆ. ಕಾರ್ಯಕ್ರಮವು ಸೆ. 10 ರಂದು ನವದೆಹಲಿಯ ತೀನ್ ಮೂರ್ತಿ ಭವನದಲ್ಲಿರುವ ಪ್ರಧಾನಮಂತ್ರಿ ಸಂಗ್ರಹಾಲಯದಲ್ಲಿ ನಡೆಯಿತು.



ಅರಕಲಗೂಡು: ತಾಲೂಕು ಕಚೇರಿಯ ತಹಸೀಲ್ದಾರ್ ಕೆ.ಸಿ.ಸೌಮ್ಯ ಅವರಿಗೆ ಕಚೇರಿ ಸಿಬ್ಬಂದಿ ಆತ್ಮೀಯವಾಗಿ ಬಾಗಿನ ನೀಡಿ ಗೌರವಿಸಿ, ಶುಭ ಹಾರೈಸಿದರು.
ಶುಕ್ರವಾರ ತಾಲ್ಲೂಕು ಕಚೇರಿಯಲ್ಲಿ ಸಿಬ್ಬಂದಿಗಳು ಹಣ್ಣು-ಹಂಪಲು ಸೇರಿದಂತೆ ವಿವಿಧ ಸಾಮಗ್ರಿಗಳನ್ನು ಒಳಗೊಂಡ ಬಾಗಿನವನ್ನು ತಹಸೀಲ್ದಾರ್ ಕೆ.ಸಿ.ಸೌಮ್ಯ ಅವರಿಗೆ ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಕಚೇರಿ ಸಿಬ್ಬಂದಿ ಉಪಸ್ಥಿತರಿದ್ದರು.

# ಕಾಡು ಕೃಷಿ ನಿಸರ್ಗದ ಸತ್ಯವನ್ನು ತಿಳಿಸುವ ಕೃಷಿ

• ಪ್ರಜೋದಯ ವರದಿ

**ಸಕಲೇಶಪುರ:** ಕಾಡು ಕೃಷಿ ನಿಸರ್ಗದ ಸತ್ಯವನ್ನು ತಿಳಿಸುವ ಕೃಷಿ ಪದ್ಧತಿ ಯಾಗಿದ್ದು, ಕೃಷಿ ಕ್ಷೇತ್ರದಲ್ಲಿನ ಪ್ರಸ್ತುತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕಾಡು ಕೃಷಿಕರ ಪಾಠಶಾಲೆ ಉತ್ತಮ ದಾರಿಯಲ್ಲಿ ಸಾಗುತ್ತಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಹೇಳಿದರು.

ಐಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳ್ಳಿಗದ್ದೆ ಗ್ರಾಮದ ರೈತ ಪುಟ್ಟಸ್ವಾಮಿಗೌಡ ಅವರ ಜಮೀನಿ ನಲ್ಲಿ ಬುಧವಾರ ಕಾಡು ಕೃಷಿಕರ 20ನೇ ಪಾಠಶಾಲೆಯನ್ನು ಉದ್ಘಾಟಿಸಿ ಮಾತ ನಾಡಿ, ಕೃಷಿ ಪುರಾತನ ವಿದ್ಯೆ ಯಾಗಿದ್ದು, ಆಧುನಿಕ ಕೃಷಿಯಲ್ಲಿ ವಿವೇಚನೆಯಿಲ್ಲದ ರಾಸಾಯನಿಕ ಬಳಕೆಯಿಂದ ಮಣ್ಣು ಮತ್ತು ಆಹಾ ರದ ಗುಣಮಟ್ಟದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಈ ಹಿನ್ನಲೆ ಯಲ್ಲಿ ಪರಿಸರ ಸ್ನೇಹಿ ಹಾಗೂ ನೈಸರ್ಗಿಕ ಕೃಷಿ ಪದ್ಧತಿಗಳತ್ತ ಗಮನ ಹರಿಸುವ ಅಗತ್ಯವಿದೆ ಎಂದರು.

ಕಾಡು ಕೃಷಿಕರ ಪಾಠಶಾಲೆಯ ಸಂಸ್ಥಾಪಕ ಡಾ.ಮಳಲಿಗೌಡ ಅವರನ್ನು ಕಾಡು ಕೃಷಿಯ ಮಹರ್ಷಿ ಎಂದು ಬಣ್ಣಿಸಿದ ಅಮೇರಿಕಾದಿಂದ ಭಾರತಕ್ಕೆ ಮರಳಿದ ಅವರು ಸಾಮಾನ್ಯ ರೈತರೊಂದಿಗೆ ನಿಂತು ಕಾಡು ಕೃಷಿಯ ಪರಿಕಲ್ಪನೆಯನ್ನು ಬೆಳೆಸುತ್ತಿರುವುದು ಶ್ಲಾಘನೀಯ ಎಂದರು. ದಟ್ಟ ಕಾಡಿನಲ್ಲಿ ಯಾವುದೇ ಕೃತಕ ಪೋಷಣೆ ಇಲ್ಲದೆ ಮರ- ಗಿಡಗಳು ಸಹಬಾಳ್ವೆಯಿಂದ ಆರೋಗ್ಯಕರವಾಗಿ ಬೆಳೆಯುವ ಪ್ರಕೃತಿಯ ವ್ಯವಸ್ಥೆಯನ್ನು ವೈಜ್ಞಾನಿಕವಾಗಿ ಅರಿತು ಕೃಷಿಯಲ್ಲಿ ಅಳವಡಿಸಿಕೊಳ್ಳುವ ವಿಧಾನವನ್ನು ಕಾಡು ಕೃಷಿ ಪಾಠಶಾಲೆ



ತಿಳಿಸಿಕೊಡುತ್ತಿದೆಂದು ಹೇಳಿದರು.

ರೈತರು ಮಳೆ ಕೊರತೆ, ನೀರು, ವಿದ್ಯುತ್ ಹಾಗೂ ಮಾರುಕಟ್ಟೆ ಸೇರಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಸಣ್ಣ ಮತ್ತು ಅತಿ ಸಣ್ಣ ರೈತರು ಆರ್ಥಿಕವಾಗಿ ಮೇಲೇರಲು ಉತ್ಪಾದ ನೋತ್ತರ ಕೃಷಿಗೂ ಆದ್ಯತೆ ನೀಡಬೇಕು. ಒಂದು ಬೀಜದಿಂದ ಸಾವಿರಾರು ಬೀಜಗಳನ್ನು ಉತ್ಪಾದಿಸುವ ಸಾಮರ್ಥ್ಯ ಕೃಷಿಯಲ್ಲಿ ಮಾತ್ರ ಸಾಧ್ಯವಾಗಿದ್ದು, ಈ ಪ್ರಕೃತಿದತ್ತ ಶಕ್ತಿಯನ್ನು ಸಮರ್ಥವಾಗಿ ಬಳಸಿ ಕೊಳ್ಳಬೇಕು. ಕಾಡು ಕೃಷಿಕರ ಪಾಠ ಶಾಲೆ ರೈತರ ಬದುಕನ್ನು ಹಸನಗೊಳಿಸುವ ನಿಟ್ಟಿನಲ್ಲಿ ನಡೆಸುತ್ತಿರುವ ಪ್ರಯತ್ನ ಆಶಾದಾಯಕವಾಗಿದ್ದು, ಇಂತಹ ಇನ್ನಷ್ಟು ಪಾಠ ಶಾಲೆಗಳಿಗೆ ಅವಕಾಶ ದೊರೆಯಬೇಕು ಎಂದರು.

ಕಾಡು ಕೃಷಿ ಪಾಠಶಾಲೆಯ ಸಂಸ್ಥಾಪಕ ಡಾ. ಮಳಲಿಗೌಡ ಅವರು ಮಾತನಾಡಿ, ಕಾಡು ಕೃಷಿ ಪಾಠ ಶಾಲೆಗಳು ಬೆಳೆದು ಬಂದ ಹಾದಿ ಯನ್ನು ವಿವರಿಸಿದರು. ವಿವಿಧ ಜಿಲ್ಲೆಗಳಲ್ಲಿ ನಡೆದ ಪಾಠ ಶಾಲೆಗಳ ಮೂಲಕ ರೈತರಲ್ಲಿ ಉಂಟಾಗಿರುವ ಬದಲಾವಣೆಗಳ ಕುರಿತು ಮಾಹಿತಿ ನೀಡಿದರು. 20ನೇ ಪಾಠಶಾಲೆಯ ಆತಿಥೇಯ ರೈತ ಪುಟ್ಟಸ್ವಾಮಿಗೌಡ ಹಾಗೂ ಮೊದಲ ಕಾಡು ಕೃಷಿ ಪಾಠ ಶಾಲೆಯ ಗುರು ಸೋಮಶೇಖರ್ ತಮ್ಮ ಅನುಭವ ಹಂಚಿಕೊಂಡರು.

ಕಾರ್ಯಕ್ರಮಕ್ಕೂ ಮುನ್ನ ಜಿಲ್ಲಾಧಿಕಾರಿ ಅವರು ರೈತರ ಕಾಡು-ತೋಟಕ್ಕೆ ಭೇಟಿ ನೀಡಿ ವಿವಿಧ ಕಾಡು ಜಾತಿಯ ಗಿಡ-ಮರಗಳು, ದೇಶೀಯ ಹಾಗೂ ವಿದೇಶಿ ಹಣ್ಣುಗಳ ಗಿಡ- ಮರಗಳು, ಕಾಫಿ ತೋಟ, ಮಣ್ಣು ಮತ್ತು ನೀರು ಸಂರಕ್ಷಣಾ ಪದ್ಧತಿ ಹಾಗೂ ನೈಸರ್ಗಿಕ ಕೃಷಿ ಅಳವಡಿಸಿರುವ ಕ್ಷೇತ್ರಗಳನ್ನು ವೀಕ್ಷಿಸಿದರು.

ಜಂಟಿ ಕೃಷಿ ನಿರ್ದೇಶಕ ರಮೇಶ್ ಕುಮಾರ್, ರೈತ ಮಹಿಳೆ ಹೊನ್ನಮ್ಮ, ಸಹಾಯಕ ಕೃಷಿ ನಿರ್ದೇಶಕ ಪ್ರಕಾಶ್ ಕುಮಾರ್, ಸಾಹಿತಿ ಹಾಗೂ ಕೃಷಿಕ ಬಿ.ಡಿ.ಕುಮಾರ್ ಸೇರಿ ವಿವಿಧ ಜಿಲ್ಲೆ ಹಾಗೂ ತಾಲ್ಲೂಕುಗಳಿಂದ ಆಗಮಿಸಿದ್ದ ರೈತರು, ಯುವಕರು ಉಪಸ್ಥಿತರಿದ್ದರು.

# ಹೋಬಳಿ ಮಟ್ಟದ ಕ್ರೀಡಾಕೂಟ: ವಿದ್ಯಾರ್ಥಿಗಳ ಸಾಧನೆ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಹೆತ್ತೂರು ಸಾನ್ವಿಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು 2026-27ನೇ ಸಾಲಿನ ಹೆತ್ತೂರು ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ಅಥ್ಲೆಟಿಕ್ಸ್ ಹಾಗೂ ಗುಂಪು ಕ್ರೀಡೆಗಳಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾರೆ.

ಆಗಸ್ಟ್ 24 ಮತ್ತು 25ರಂದು ನಡೆದ ಕೆಪಿಎಸ್ ಹೆತ್ತೂರು ಕ್ರೀಡಾಂಗಣ ಹಾಗೂ ಮಲ್ಲೇಶ್ವರ ಹೈಸ್ಕೂಲ್ ಕ್ರೀಡಾಂಗಣದಲ್ಲಿ ನಡೆದ ಕ್ರೀಡಾಕೂಟದಲ್ಲಿ ಸಾನ್ವಿ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ವಿವಿಧ ವೈಯಕ್ತಿಕ ಹಾಗೂ ಗುಂಪು ಸ್ಪರ್ಧೆಗಳಲ್ಲಿ ಭಾಗವಹಿಸಿ ಹಲವು ಬಹುಮಾನಗಳನ್ನು ಪಡೆದುಕೊಂಡಿದ್ದಾರೆ.

**ಅಥ್ಲೆಟಿಕ್ಸ್‌ನಲ್ಲಿ ಮಿಂಚು**

ಹಿರಿಯ ಪ್ರಾಥಮಿಕ ಶಾಲಾ ವಿಭಾಗದಲ್ಲಿ ಆರೋಹಿ 100 ಮೀ. ಓಟದಲ್ಲಿ ಪ್ರಥಮ ಹಾಗೂ ಲಾಂಗ್ ಜಂಪ್‌ನಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ವೈ.ಬಿ.ಮೋಕ್ಷಾ ಲಾಂಗ್ ಜಂಪ್‌ನಲ್ಲಿ ಪ್ರಥಮ ಹಾಗೂ 100 ಮೀ. ಓಟದಲ್ಲಿ ತೃತೀಯ ಸ್ಥಾನ ಗಳಿಸಿದ್ದಾರೆ. ಸಮನ್ವಿ ಹೈಜಂಪ್‌ನಲ್ಲಿ ಪ್ರಥಮ, ವೇದಶ್ರೀ ಡಿಸ್ಕಸ್ ಥ್ರೋ ಹಾಗೂ ಶಾಟ್‌ಪುಟ್ ನಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

ಶಿವರಾಜ್ 100 ಮೀ. ಓಟದಲ್ಲಿ ಪ್ರಥಮ ಹಾಗೂ ಲಾಂಗ್ ಜಂಪ್‌ನಲ್ಲಿ ದ್ವಿತೀಯ ಸ್ಥಾನ, ಅದ್ವೈತ್ ಹೈಜಂಪ್ ನಲ್ಲಿ ಪ್ರಥಮ ಸ್ಥಾನ ಪಡೆದರೆ, ಯಶವಂತ್ 200 ಮೀ. ಓಟದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ತನ್ಮಯಿ ಶಾಟ್ ಪುಟ್‌ನಲ್ಲಿ ದ್ವಿತೀಯ, ವರ್ಷಿಣಿ ಹಾಗೂ ಚಿರಂತ್‌ರಾಜ್ ಡಿಸ್ಕಸ್ ಥ್ರೋನಲ್ಲಿ ತೃತೀಯ ಸ್ಥಾನ ಗಳಿಸಿದ್ದಾರೆ.

**ಗುಂಪು ಕ್ರೀಡೆಗಳಲ್ಲೂ ಸಾಧನೆ**

ಬಾಲಕಿಯರ ಥ್ರೋಬಾಲ್ ಹಾಗೂ ಕಬಡ್ಡಿ ತಂಡಗಳು




ಪ್ರಥಮ ಸ್ಥಾನ ಪಡೆದಿವೆ. ಬಾಲಕಿ ಯರ ರಿಲೇ ತಂಡ ದ್ವಿತೀಯ ಹಾಗೂ ಬಾಲಕರ ಥ್ರೋಬಾಲ್ ತಂಡ ತೃತೀಯ ಸ್ಥಾನ ಪಡೆದುಕೊಂಡಿದೆ.

ಹೈಸ್ಕೂಲ್ ವಿಭಾಗದ ಅಥ್ಲೆಟಿಕ್ಸ್‌ನಲ್ಲಿ ಎಚ್.ಸಿ.ಮನನ್ ಹೈಜಂಪ್ ಹಾಗೂ ಎಂ.ಆರ್.ರಚನಾ ಹ್ಯಾಮರ್ ಥ್ರೋನಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಮೇಘರಾಜು ಹೈಜಂಪ್‌ನಲ್ಲಿ ದ್ವಿತೀಯ, ದೀಪಾಲಿ ಜಾವೆಲಿನ್ ಥ್ರೋನಲ್ಲಿ ತೃತೀಯ, ಎಲ್.ಜೆ.ಚಿನ್ಮಯಿ 200 ಮೀ. ಓಟದಲ್ಲಿ ಹಾಗೂ ಹೆಚ್.ಕೆ.ಹೇಮಲತಾ ಹ್ಯಾಮರ್ ಥ್ರೋನಲ್ಲಿ ತೃತೀಯ ಸ್ಥಾನ ಗಳಿಸಿದ್ದಾರೆ.

ಶಿವರಾಜ್ (8ನೇ ತರಗತಿ) ಹಾಗೂ ಆರೋಹಿ (8ನೇ ತರಗತಿ) ವೈಯಕ್ತಿಕ ಚಾಂಪಿಯನ್‌ಗಳಾಗಿ ಹೊರಹೊಮ್ಮಿರುವುದು ಶಾಲೆಯ ಹೆಗ್ಗಳಿಕೆಗೆ ಪಾತ್ರವಾಗಿದೆ.

ವಿದ್ಯಾರ್ಥಿಗಳ ಸಾಧನೆಗೆ ಶಾಲೆಯ ಆಡಳಿತ ಮಂಡಳಿ, ಮುಖ್ಯಶಿಕ್ಷಕರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಮತ್ತು ಕಾರ್ಯದರ್ಶಿ ಲೋಕೇಶ್, ಕ್ರೀಡಾ ತಂಡದ ಸದಸ್ಯರು ಅಭಿನಂದನೆ ಸಲ್ಲಿಸಿದ್ದಾರೆ. ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿದ ಎಲ್ಲರಿಗೂ ಶಾಲೆಯ ಮುಖ್ಯಶಿಕ್ಷಕರು ಕೃತಜ್ಞತೆ ಸಲ್ಲಿಸಿದ್ದಾರೆ.

## ಸೆ.15 ರಂದು ವಿಕಲಚೇತನರ ಕುಂದು ಕೊರತೆ ಸಭೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸೆ. 15 ರಂದು ಮಧ್ಯಾಹ್ನ 12.30 ಕ್ಕೆ ಜಿಲ್ಲಾಧಿಕಾರಿ ಕಚೇರಿ ವಿಡಿಯೋ ಕಾನ್ಫರೆನ್ಸ್ ಹಾಲ್‌ನಲ್ಲಿ ವಿಕಲಚೇತನರುಗಳ ಕುಂದುಕೊರತೆ ಸಭೆ ನಡೆಯಲಿದ್ದು, ಸದರಿ ಸಭೆಗೆ ಜಿಲ್ಲೆಯಲ್ಲಿನ ವಿಕಲಚೇತನರು/ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಹಾಜರಾಗಿ ತಮ್ಮ ಕುಂದು ಕೊರತೆಗಳ ಬಗ್ಗೆ ಅಹವಾಲುಗಳನ್ನು ಸಲ್ಲಿಸುವಂತೆ ವಿಕಲಚೇತನರ ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆಯ ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳು ಕೋರಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಹಾಗೂ ದೂರವಾಣಿ ಸಂಖ್ಯೆ: 08172-295546 ಗೆ ಸಂಪರ್ಕಿಸಬಹುದಾಗಿದೆ ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ಬಿ.ಎಂ.ರಸ್ತೆ, ಹಾಸನ
ದೂರವಾಣಿ ಸಂಖ್ಯೆ: 08172-268876, 266719

ಕ್ರ.ಸಂ.ಹಾನಪ್ರಾ/ನ.ಯೋ.ವಿ/ಭೂ.ಉ.ಬ/01/2026-27 ದಿನಾಂಕ:10.09.2026

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961, ಕಲಂ 69(2)ರನ್ವಯ ಭೂಉಪಯೋಗ ಬದಲಾವಣೆ ಕೋರಿರುವ ಬಗ್ಗೆ.
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961, ಕಲಂ 69(2)ರನ್ವಯ ವಸತಿ ಭೂಉಪಯೋಗಕ್ಕೆ ಭೂಉಪಯೋಗ ಬದಲಾವಣೆಯನ್ನು ಕೋರಿ ಅರ್ಜಿದಾರರು ಈ ಕೆಳಕಂಡ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸದರಿ ಜಮೀನಿನ ಭೂಉಪಯೋಗ ಬದಲಾವಣೆ ಬಗ್ಗೆ ಸಾರ್ವಜನಿಕರು/ಸಂಘ ಸಂಸ್ಥೆಗಳ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ 15 ದಿನಗಳೊಳಗಾಗಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ ರವರಿಗೆ ಬರಹದ ಮೂಲಕ ಮೇಲಿನ ವಿಳಾಸದಲ್ಲಿರುವ ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿಗೆ ಖುದ್ದಾಗಿ ಇಲ್ಲವೇ ನೋಂದಣಿ ಅಂಚೆ ಮೂಲಕ ತಲುಪಿಸಬಹುದಾಗಿದೆ. ಅವಧಿ ಮೀರಿ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂಬುದನ್ನು ಸಾರ್ವಜನಿಕರು/ಸಂಘ ಸಂಸ್ಥೆಗಳಿಗೆ ಈ ಮೂಲಕ ತಿಳಿಸಲಾಗಿದೆ.

| ಕ್ರ. ಸಂ | ಅರ್ಜಿದಾರರ ಹೆಸರು | ಗ್ರಾಮ & ಸರ್ವೆ ನಂಬರ್ | ಒಟ್ಟು ವಿಸ್ತೀರ್ಣ (ಎಕರೆ-ಗುಂಟೆ) | ಮಹಾಯೋಜನೆಯಲ್ಲಿ ಕಾಯ್ದಿರಿಸಿರುವ ಭೂಉಪಯೋಗ | ಅರ್ಜಿದಾರರು ಬದಲಾವಣೆ ಕೋರಿರುವ ಭೂ ಉಪಯೋಗ |
|---|---|---|---|---|---|
| 1 | ಮೆ|| ಭಾರತಿ ಟ್ರೇಡಿಂಗ್ ಅಂಡ್ ಇಂಡಸ್ಟ್ರೀಯಲ್ ಕಂಪನಿ | ಬೂವನಹಳ್ಳಿ ಗ್ರಾಮ ಸರ್ವೆ ನಂ:142/2,3,4,56, & ಇತರೆ | 8-07 | ಉದ್ಯಾನವನ | ವಸತಿ |
| 2 | ಶ್ರೀಮತಿ.ಉಷಾರಾಣಿ ಬಿನ್ ಪಾಪಣ್ಣ | ಚಿಕ್ಕಮಂಡಿಗನಹಳ್ಳಿ ಗ್ರಾಮದ ಸರ್ವೆ ನಂ:26 | 2-06¼ | ಸಾರ್ವಜನಿಕ/ ಅರೆಸಾರ್ವಜನಿಕ ಮತ್ತು ಉದ್ಯಾನವನ | ವಸತಿ |
| 3 | ಶ್ರೀಮತಿ. ಎಸ್.ಮಿಥುನ ಬಿನ್ ಲೇ|| ಎನ್.ಎಸ್.ಸುದರಂ & ಶ್ರೀಮತಿ.ಉಷಾರಾಣಿ ಬಿನ್ ಪಾಪಣ್ಣ | ಚಿಕ್ಕಮಂಡಿಗನಹಳ್ಳಿ ಗ್ರಾಮದ ಸರ್ವೆ ನಂ:25/1, 25/2, ಮತ್ತು 24 & 26 ಭಾಗಶಃ | 7-35¾ | ಉದ್ಯಾನವನ | ವಸತಿ |
| 4 | ಎಂ.ಎನ್.ವಿರೂಪಾಕ್ಷ ಬಿನ್ ಎಂ.ಎನ್.ನಂಜಪ್ಪ | ದೊಡ್ಡಪುರ ಗ್ರಾಮ ಸವೆ ನಂ: 118/2,3 121/2,3 120/,4,5, 3,6,1,7 | 2-15 | ಉದ್ಯಾನವನ | ವಸತಿ |
| 5 | ಪಾಂಡುರಂಗ ಬಿನ್ ಮಂಜೇಗೌಡ | ಚಿಕ್ಕಹೊನ್ನೇನಹಳ್ಳಿ ಗ್ರಾಮದ ಸರ್ವೆ ನಂ: 32/7 | 0-02½ | ಸಾರ್ವಜನಿಕ/ ಅರೆಸಾರ್ವಜನಿಕ | ವಸತಿ |
| 6 | ಹಲಗಪ್ಪ ಲೇ|| ರುದ್ರೇಗೌಡ & ಮಹೇಶ್ ಹೆಚ್.ಎನ್. ನಂಜೇಗೌಡ | ತಮ್ಲಾಪುರ ಗ್ರಾಮ ಸರ್ವೆ ನಂ: 54/12, 54/8 | 0-05 | ಉದ್ಯಾನವನ | ವಸತಿ |
| 7 | ಎನ್.ಸುಜಾತ ಕೋಂ ಲೇ|| ಶಿವಾಜಿರಾವ್ ಎನ್, | ಚಿಕ್ಕಕೊಂಡಗುಳ ಗ್ರಾಮ ಸರ್ವೆ ನಂ:59/35 | 0-03 | ಸಾರ್ವಜನಿಕ/ ಅರೆಸಾರ್ವಜನಿಕ | ವಸತಿ |
| 8 | ಲೋಕೇಶ್ವರಿ ಬಿ ಕೋಂ ಆನಂದ & ಇತರರು | ಹರಳಹಳ್ಳಿ ಗ್ರಾಮ ಸರ್ವೆ ನಂ: 28/24, 28/25,28/26,28/27 | 0-08¼ | ಉದ್ಯಾನವನ | ವಸತಿ |
| 9 | ಚಂದ್ರಕಲಾ ಕೋಂ ಲೇ|| ಮಂಜುನಾಥ | ಚಿಕ್ಕಕೊಂಡಗುಳ ಗ್ರಾಮ ಸರ್ವೆ ನಂ:60/22, 60/29 | 0-03¼ | ಸಾರ್ವಜನಿಕ/ ಅರೆಸಾರ್ವಜನಿಕ | ವಸತಿ |
| 10 | ಡಿ.ಕೆ.ಶಶಿಕುಮಾರ್ ಬಿನ್ ಚಲುವೇಗೌಡ | ಚಿಕ್ಕಕೊಂಡಗುಳ ಗ್ರಾಮ ಸರ್ವೆ ನಂ:59/9 | 0-04 | ಸಾರ್ವಜನಿಕ/ ಅರೆಸಾರ್ವಜನಿಕ | ವಸತಿ |
| 11 | ಡಿ.ಎನ್.ತೇಜೇಶ್ ಬಿನ್ ಡಿ.ಕೆ. ನಾರಾಯಣಗೌಡ | ಮಾವೀನಹಳ್ಳಿ ಗ್ರಾಮ ಸರ್ವೆ ನಂ:32/26 | 0-13 | ಸಾರ್ವಜನಿಕ/ ಅರೆಸಾರ್ವಜನಿಕ | ವಸತಿ |
| 12 | ಸಬಿಹ ಬಾನು ಕೋಂ ಜಬೀ | ಹಾಸನ ಗ್ರಾಮ ಸರ್ವೆ ನಂ: 250/18 | 0-01 | ಸಾರ್ವಜನಿಕ/ ಅರೆಸಾರ್ವಜನಿಕ | ವಸತಿ |
| 13 | ಕುಮಾರ ಬಿನ್ ನಂಜೇಗೌಡ | ಬುಸ್ತೇನಹಳ್ಳಿ ಗ್ರಾಮದ ಸರ್ವೆ ನಂ: 7/2, 7/3, 7/18,7/19 | 0-07½ | ಉದ್ಯಾನವನ | ವಸತಿ |
| 14 | ಎ.ಎನ್.ನಾಗರಾಜು ಬಿನ್ ಲೇ|| ನಿಂಗೇಗೌಡ | ಬುಸ್ತೇನಹಳ್ಳಿ ಗ್ರಾಮ ಸರ್ವೆ ನಂ:3/27 | 0-04 | ಉದ್ಯಾನವನ | ವಸತಿ |
| 15 | ಅಶೋಕ ಬಿನ್ ಲೇ|| ಯಲ್ಲಕಿಗೌಡ | ಉದ್ದೂರು ಗ್ರಾಮ ಸರ್ವೆ ನಂ: 59/13 | 0-20 | ಸಾರ್ವಜನಿಕ/ ಅರೆಸಾರ್ವಜನಿಕ | ವಸತಿ |
| 16 | ಧರ್ಮೇಶ್ ಬಿನ್ ಚನ್ನೇಗೌಡ | ಬುಸ್ತೇನಹಳ್ಳಿ ಗ್ರಾಮ ಸರ್ವೆ ನಂ:7/12 | 0-02 | ಉದ್ಯಾನವನ | ವಾಣಿಜ್ಯ |

ಸಹಿ/- ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ
ಸಹಿ/-ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ
ಸಹಿ/- (ಪಟೇಲ್ ಶಿವಣ್ಣ) ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ

ವಾಸಾಸಂಇ/ಹಿಸನಿ/ಹಾಸನ/499/ಕೆಎಸ್‌ಎಂಸಿಎ/2026-27

# ಅರೇಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲೀಗ ಕಗ್ಗತ್ತಲು

**ಗಂಟೆಗಟ್ಟಲೆ ವಿದ್ಯುತ್ ಇಲ್ಲದೆ ಗರ್ಭಿಣಿಯರು, ರೋಗಿಗಳ ಪರದಾಟ | ಜನರೇಟರ್ ಅಳವಡಿಕೆಗೆ ಒತ್ತಾಯ**

• ಪ್ರಜೋದಯ ವರದಿ

**ಅರೇಹಳ್ಳಿ:** ಆರೋಗ್ಯ ತುರ್ತು ಸಂದರ್ಭಗಳಲ್ಲಿ ಜೀವ ರಕ್ಷಿಸುವ ಪ್ರಮುಖ ಕೇಂದ್ರವಾಗಿರುವ ಸರ್ಕಾರಿ ಆಸ್ಪತ್ರೆಯಲ್ಲೇ ಗಂಟೆಗಟ್ಟಲೆ ವಿದ್ಯುತ್ ಇಲ್ಲದೆ ಕಗ್ಗತ್ತಲು ಆವರಿಸಿದ ಘಟನೆ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.



ಬೇಲೂರು ತಾಲ್ಲೂಕಿನ ಅರೇಹಳ್ಳಿ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಗುರುವಾರ ರಾತ್ರಿ ನಾಲ್ಕೈದು ಗಂಟೆಗಳ ಕಾಲ ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು. ಪರಿಣಾಮ ಆಸ್ಪತ್ರೆಯ ವಿವಿಧ ವಿಭಾಗಗಳು ಕತ್ತಲಲ್ಲಿ ಮುಳುಗಿದ್ದು, ಚಿಕಿತ್ಸೆಗಾಗಿ ದಾಖಲಾಗಿದ್ದ ಗರ್ಭಿಣಿಯರು, ಬಾಣಂತಿಯರು, ರೋಗಿಗಳು ಹಾಗೂ ಅವರ ಸಂಬಂಧಿಕರು ಆತಂಕದ ಪರಿಸ್ಥಿತಿ ಎದುರಿಸುವಂತಾಯಿತು.

ವಿದ್ಯುತ್‌ದುರಸ್ತಿ ಕಾರ್ಯ, ಮಾಸಿಕ ನಿರ್ವಹಣೆ, ಹೊಸ ವಿದ್ಯುತ್ ಗೋಪುರಗಳ ನಿರ್ಮಾಣ ಸೇರಿ ವಿವಿಧ ಕಾಮಗಾರಿಗಳ ಸಂದರ್ಭದಲ್ಲಿ ಕೆಲವೊಮ್ಮೆ ನಿಗದಿತ ಅವಧಿಗಿಂತ ಹೆಚ್ಚು ಕಾಲ ವಿದ್ಯುತ್ ವ್ಯತ್ಯಯವಾಗುತ್ತಿದೆ. ಮಳೆ ಹಾಗು ಗಾಳಿ ಸಂದರ್ಭದಲ್ಲಿ ಮರಗಳು ವಿದ್ಯುತ್ ಕಂಬಗಳ ಮೇಲೆ ಬಿದ್ದು ದೀರ್ಘಕಾಲ ವಿದ್ಯುತ್ ಸಂಪರ್ಕ ಕಡಿತಗೊಳ್ಳುವ ಘಟನೆಗಳೂ ಮರುಕಳಿಸುತ್ತಿವೆ.

ಆಸ್ಪತ್ರೆಯಲ್ಲಿ ವಿದ್ಯುತ್ ಕಡಿತವಾದ ಸಂದರ್ಭದಲ್ಲಿ ಕೆಲ ಗಂಟೆಗಳ ಕಾಲ ಯುಪಿಎಸ್ ಮೂಲಕ ವಿದ್ಯುತ್ ಪೂರೈಕೆ ಮಾಡಲಾಗುತ್ತದೆ. ಆದರೆ, ಯುಪಿಎಸ್‌ನ ಬ್ಯಾಟರಿ ಸಾಮರ್ಥ್ಯವೂ ಮುಗಿದ ಬಳಿಕ ಪರ್ಯಾಯ ವ್ಯವಸ್ಥೆ ಇಲ್ಲದಿರುವುದರಿಂದ ಆಸ್ಪತ್ರೆ ಸಂಪೂರ್ಣ ಕತ್ತಲಲ್ಲಿ ಉಳಿಯುವ ಪರಿಸ್ಥಿತಿ ನಿರ್ಮಾಣ ವಾಗುತ್ತಿದೆ.

ವಿಶೇಷವಾಗಿ ಹೆರಿಗೆ ವಿಭಾಗದಲ್ಲಿ ದಾಖಲಾಗಿರುವ ಗರ್ಭಿಣಿಯರು ಹಾಗೂ ಬಾಣಂತಿಯರು ವಿದ್ಯುತ್ ಇಲ್ಲದೆ ಪರದಾಡುವಂತಾಗುತ್ತಿದೆ. ತುರ್ತು ಚಿಕಿತ್ಸೆ ಅಗತ್ಯವಿರುವ ರೋಗಿಗಳಿಗೆ ಮಾತ್ರವಲ್ಲದೆ ಕರ್ತವ್ಯದಲ್ಲಿರುವ ವೈದ್ಯರು ಹಾಗೂ ಸಿಬ್ಬಂದಿಗೂ ಕತ್ತಲಿನಲ್ಲಿ ಕಾರ್ಯನಿರ್ವಹಿಸುವುದು ಕಷ್ಟಕರವಾಗುತ್ತಿದೆ. ತುರ್ತು ಸಂದರ್ಭದಲ್ಲಿ ವಿದ್ಯುತ್ ವ್ಯತ್ಯಯದಿಂದ ಯಾವುದೇ ಅನಾಹುತ ಸಂಭವಿಸಿದರೆ ಹೊಣೆಯಾರೆಂಬ ಪ್ರಶ್ನೆಯೂ ಸಾರ್ವಜನಿಕರಲ್ಲಿ ಮೂಡಿದೆ.

**ಜನರೇಟರ್ ಅಳವಡಿಕೆಗೆ ಒತ್ತಾಯ**

ಆಸ್ಪತ್ರೆಯಂತಹ ನಿರಂತರ ಹಾಗು ತುರ್ತು ಸೇವೆ ಒದಗಿಸುವ ಕೇಂದ್ರದಲ್ಲಿ ವಿದ್ಯುತ್ ವ್ಯತ್ಯಯವಾದರೂ ವೈದ್ಯಕೀಯ ಸೇವೆಗೆ ಯಾವುದೇ ರೀತಿಯ ಅಡ್ಡಿಯಾಗದಂತೆ ಪರ್ಯಾಯ ವಿದ್ಯುತ್ ವ್ಯವಸ್ಥೆ ಕಲ್ಪಿಸುವುದು ಅತ್ಯವಶ್ಯಕವಾಗಿದೆ. ಅದರಲ್ಲೂ ಹೆರಿಗೆ ವಿಭಾಗವಿರುವ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಜನರೇಟರ್ ವ್ಯವಸ್ಥೆ ಕಡ್ಡಾಯವಾಗ ಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಅರೇಹಳ್ಳಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವಿದ್ಯುತ್ ಸಮಸ್ಯೆ ಆಗಾಗ್ಗೆ ಮರುಕಳಿಸುತ್ತಿರುವ ಹಿನ್ನೆಲೆ ಆರೋಗ್ಯ ಇಲಾಖೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ತಾತ್ಕಾಲಿಕ ಪರಿಹಾರಕ್ಕೆ ಸೀಮಿತವಾಗದೆ, ಸಮರ್ಪಕ ಸಾಮರ್ಥ್ಯದ ಜನರೇಟರ್ ಅಳವಡಿಸುವ ಮೂಲಕ ಶಾಶ್ವತ ಪರಿಹಾರ ಕಲ್ಪಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

## ನಲ್ಲಿ ನೀರಿಗಾಗಿ ಮಾರಣಾಂತಿಕ ಹಲ್ಲೆ

**ಸಕಲೇಶಪುರ:** ನಲ್ಲಿ ನೀರು ಬಿಡಲಿಲ್ಲವೆಂದು ಆರೋಪಿಸಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರ ಮೇಲೆ ಯುವಕ, ಆತನ ತಾಯಿ ಸೇರಿ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ಮಾಸುವಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಗಿಡ್ಡೇಗೌಡ ಗಾಯಗೊಂಡಿದ್ದಾರೆ. ಗುರುವಾರ ಬೆಳಿಗ್ಗೆ 9ರ ಸಮಯದಲ್ಲಿ ಜಯಮ್ಮ ಗ್ರಾಮ ಪಂಚಾಯಿತಿ ನೀರು ಸರಬರಾಜು ಮೋಟಾರ್ ಬಳಿ ಬಂದು ಗಿಡ್ಡೇಗೌಡರ ಹೆಂಡತಿ ಹೇಮಾ ಅವರಿಗೆ ನೀರು ಬಿಡುವಂತೆ ಕೇಳಿದ್ದಾರೆ. ಹೇಮಾ ಮೋಟಾರ್ ಆನ್ ಮಾಡಿದ್ದು, ಪೈಪ್ ಒಡೆದಿರುವುದರಿಂದ ನೀರು ಬರುತ್ತಿಲ್ಲವೆಂದು ತಿಳಿಸಿದ್ದಾರೆ. ಅಷ್ಟಕ್ಕೆ ಕೋಪಗೊಂಡ ಜಯಮ್ಮ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ವಾಗ್ವಾದ ಜೋರಾಗುತ್ತಿದ್ದಂತೆ ಸ್ಥಳಕ್ಕೆ ಗಿಡ್ಡೇಗೌಡ ಹಾಗು ಗಿರೀಶ್ ಬಂದಿದ್ದು, ಇಬ್ಬರ ನಡುವೆ ಜೋರು ವಾಗ್ವಾದ ನಡೆದಿದೆ.

ಕೆಲ ಹೊತ್ತಿನ ಬಳಿಕ ಗಿರೀಶ್ ಮಚ್ಚು ಹಿಡಿದುಕೊಂಡು ಬಂದು ಗಿಡ್ಡೇಗೌಡರ ಜೊತೆಗೆ ಜಗಳ ಶುರು ಮಾಡಿದ್ದಾರೆ. ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ತಿರುಗಿ ಮಚ್ಚಿನಿಂದ ಗಿಡ್ಡೇಗೌಡರ ಮೇಲೆ ಹಲ್ಲೆಗೆ ಮುಂದಾಗಿದ್ದಾನೆ. ತಕ್ಷಣವೇ ಎಚ್ಚೆತ್ತ ಅವರು ಬಲಗೈ ನೀಡಿದ್ದರಿಂದ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕೂಡಲೇ ಅವರನ್ನು ಪಟ್ಟಣದ ಕ್ರಾಫರ್ಡ್ ಆಸ್ಪತ್ರೆಗೆ ದಾಖಲಿಸಿದ್ದಾರೆ.

# ವಾರದಲ್ಲಿ 5 ದಿನ ಕೆಲಸ: ಬ್ಯಾಂಕ್ ನೌಕರರ ಆಗ್ರಹ

• ಪ್ರಜೋದಯ ವರದಿ

**ಹಾಸನ:** ವಾರದಲ್ಲಿ ಐದು ದಿನಗಳ ಬ್ಯಾಂಕಿಂಗ್ ವ್ಯವಸ್ಥೆ ಜಾರಿ, ಸಮಾನ ಪ್ರೋತ್ಸಾಹಧನ ನೀತಿ ಸೇರಿ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಬ್ಯಾಂಕ್ ಸಂಘಟನೆಗಳ ಸಂಯುಕ್ತ ವೇದಿಕೆಯಿಂದ ಶುಕ್ರವಾರ ಎನ್.ಆರ್.ವೃತ್ತದ ಎಸ್‌ಬಿಐ ಬ್ಯಾಂಕ್ ಎದುರು ಪ್ರತಿಭಟನೆ ನಡೆಸಲಾಯಿತು.




ವೇದಿಕೆ ಹಾಸನ ಘಟಕದ ಸಂಚಾಲಕ ಆರ್.ಕುಮಾರ್ ಅವರು ಮಾತನಾಡಿ, ವಾರದಲ್ಲಿ ಐದು ದಿನಗಳ ಬ್ಯಾಂಕಿಂಗ್ ವ್ಯವಸ್ಥೆ ಜಾರಿ ಮಾಡುವಂತೆ ಹಲವು ವರ್ಷಗಳಿಂದ ಆಗ್ರಹಿಸ ಲಾಗುತ್ತಿದೆ. ಇಂಡಿಯನ್ ಬ್ಯಾಂಕ್ ಅಸೋಸಿಯೇಷನ್ ಮತ್ತು ಬ್ಯಾಂಕ್ ನೌಕರರ ಸಂಘಟನೆಗಳ ನಡುವೆ ಚರ್ಚೆಯಾಗಿ 2024ರ ಮಾರ್ಚ್‌ನಲ್ಲೇ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಆದರೆ ಕಾನೂನು ಜಾರಿಯಾಗಿಲ್ಲ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳದೆ ವಿಳಂಬ ಧೋರಣೆ ಅನುಸರಿಸುತ್ತಿದೆ ಎಂದು ಆರೋಪಿಸಿದರು.

ಬ್ಯಾಂಕ್ ನೌಕರರು ಸಾರ್ವಜನಿಕರಿಗೆ ಅಗತ್ಯವಾದ ಬ್ಯಾಂಕಿಂಗ್ ಸೇವೆಗಳನ್ನು ನಿರಂತರವಾಗಿ ಒದಗಿಸುತ್ತಿದ್ದು, ಕೆಲಸದ ಒತ್ತಡ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ನೌಕರರ ಕೆಲಸ, ಜೀವನ ಸಮ ತೋಲನಕ್ಕೂ ಆದ್ಯತೆ ನೀಡಬೇಕಿದೆ. ವಾರದಲ್ಲಿ ಐದು ದಿನಗಳ ಬ್ಯಾಂಕಿಂಗ್ ವ್ಯವಸ್ಥೆ ಜಾರಿಯಾದರೆ ನೌಕರರಿಗೆ ಹೆಚ್ಚಿನ ವಿಶ್ರಾಂತಿ ದೊರೆಯುವುದರ ಜೊತೆಗೆ ಸೇವಾ ದಿನಗಳಲ್ಲಿ ಕೆಲಸದ ಸಾಮರ್ಥ್ಯ ಮತ್ತು ಕಾರ್ಯಕ್ಷಮತೆ ಹೆಚ್ಚಲು ಸಹಕಾರಿಯಾಗಲಿದೆ. ಬ್ಯಾಂಕಿಂಗ್ ಕ್ಷೇತ್ರದ ಬದಲಾಗುತ್ತಿರುವ ಕಾರ್ಯವೈಖರಿ ಹಾಗು ಡಿಜಿಟಲ್ ಬ್ಯಾಂಕಿಂಗ್ ವ್ಯವಸ್ಥೆಯ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಐದು ದಿನಗಳ ಬ್ಯಾಂಕಿಂಗ್ ವ್ಯವಸ್ಥೆಯನ್ನು ಜಾರಿಗೊಳಿಸುವುದು ಅಗತ್ಯವಾಗಿದೆ ಎಂದರು.

ನೌಕರರಿಗೆ ಸಮಾನ ಹಾಗು ನ್ಯಾಯಸಮ್ಮತ ಪ್ರೋತ್ಸಾಹ ಧನ ನೀತಿ ಜಾರಿಗೊಳಿಸಬೇಕು. ಅಗತ್ಯ ಪ್ರಮಾಣದಲ್ಲಿ ಕ್ಲರಿಕಲ್ ಹಾಗು ಸಬ್ ಸ್ಟಾಫ್ ನೇಮಕಾತಿ, ಎನ್‌ಪಿಎಸ್ ರದ್ದು, ಗ್ರಾಚ್ಯುಟಿ ಮಿತಿ ಹೆಚ್ಚಳ, ಪಿಂಚಣಿ ಪರಿಷ್ಕರಣೆ, ಏಕರೂಪದ ತುಟ್ಟಿ ಭತ್ಯೆ, ನಿವೃತ್ತ ನೌಕರರ ವೈದ್ಯಕೀಯ ವಿಮೆ ಸೇರಿ ಹಲವು ಬಾಕಿ ಬೇಡಿಕೆಗಳನ್ನೂ ಶೀಘ್ರ ಪರಿಹರಿಸಬೇಕೆಂದು ಒತ್ತಾಯಿಸಿದರು.

ಮೂಲಭೂತ ಹಕ್ಕುಗಳ ಈಡೇರಿಕೆಗಾಗಿ ಸೆ.28 ರಿಂದ 30ರ ವರೆಗೆ ಅಖಿಲ ಭಾರತ ಬ್ಯಾಂಕ್ ಮುಷ್ಕರ ಮತ್ತು ಅ.26ರಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲಾಗುವುದೆಂದರು.

ಪ್ರತಿಭಟನೆಯಲ್ಲಿ ಸಂಘದ ಜಿ.ಟಿ.ಲೋಕೇಶ್, ಜಾವೀದ್, ಅಶೋಕ್ ಭಟ್, ಚೇತನ್ ಕುಮಾರ್, ಜಯಚಂದ್ರ, ಚಂದ್ರಶೇಖರ್ ಇತರರು ಉಪಸ್ಥಿತರಿದ್ದರು.

# ಎಪಿಎಂಸಿಯಲ್ಲಿ ಶುಂಠಿ ಕಟ್ಟೆ ತೆರವಿಗೆ ವ್ಯಾಪಾರಿಗಳ ವಿರೋಧ

• ಪ್ರಜೋದಯ ವರದಿ

**ಹಾಸನ:** ಇಲ್ಲಿನ ಎಪಿಎಂಸಿಯಲ್ಲಿ ಶುಂಠಿ ವ್ಯಾಪಾರಿ ಕಟ್ಟೆಗಳನ್ನು ತೆರವುಗೊಳಿಸುವ ಮೊದಲು ವ್ಯಾಪಾರಿಗಳು ವಹಿವಾಟು ನಡೆಸಲು ಪರ್ಯಾಯ ವ್ಯವಸ್ಥೆ ಮಾಡಿಕೊಡಬೇಕೆಂದು ಎಪಿಎಂಸಿ ಜಿಂಜರ್ ಅಸೋಸಿಯೇಷನ್‌ನಿಂದ ಎಪಿಎಂಸಿ ಅಧಿಕಾರಿಗಳಿಗೆ ಶುಕ್ರವಾರ ಮನವಿ ಸಲ್ಲಿಸಲಾಯಿತು.



ಹಲವು ವರ್ಷಗಳಿಂದ ಶುಂಠಿ ವ್ಯಾಪಾರವನ್ನು ಅವಲಂಬಿಸಿಕೊಂಡು ಅನೇಕ ವ್ಯಾಪಾರಸ್ಥರು ತಮ್ಮ ಜೀವನೋಪಾಯ ಕಂಡುಕೊಂಡಿದ್ದಾರೆ. ಶುಂಠಿ ವ್ಯಾಪಾರಕ್ಕೆ ಸಂಬಂಧಿಸಿ ಎಪಿಎಂಸಿ ಆವರಣದಲ್ಲಿರುವ ಕಟ್ಟೆಗಳು ಹಾಗು ವ್ಯಾಪಾರ ಸ್ಥಳಗಳು ಪ್ರಮುಖವಾಗಿವೆ. ಅಭಿವೃದ್ಧಿ, ಸ್ವಚ್ಛತೆ ಹಾಗು ಮೂಲಸೌಕರ್ಯ ಸುಧಾರಣೆಯ ಹೆಸರಿನಲ್ಲಿ ಕಟ್ಟೆಗಳನ್ನು ತೆರವುಗೊಳಿಸಲಾಗುತ್ತಿದೆ. ಆದರೆ ವ್ಯಾಪಾರಕ್ಕೆ ಪರ್ಯಾಯ ಕ್ರಮ ಕೈಗೊಂಡಿಲ್ಲ. ಕಟ್ಟೆಗಳನ್ನು ತೆರವುಗೊಳಿಸುವ ಮೊದಲು ಪ್ರತಿ ವ್ಯಾಪಾರಸ್ಥರ ವ್ಯಾಪಾರ ಹಾಗು ಜೀವನೋಪಾಯದ ಹಿತದೃಷ್ಟಿಯಿಂದ ಕ್ರಮ ಜರುಗಿಸ ಬೇಕೆಂದು ಕೋರಿದರು.

ವ್ಯಾಪಾರಿಗಳಿಗೆ ಅಂಗಡಿ ಹಂಚಿಕೆ ಪ್ರಕ್ರಿಯೆಯಲ್ಲಿ ಹಲವು ವರ್ಷಗಳಿಂದ ಎಪಿಎಂಸಿಯಲ್ಲಿ ವ್ಯಾಪಾರ ನಡೆಸುತ್ತಿರುವ ಹಾಲಿ ವ್ಯಾಪಾರಿಗಳಿಗೆ ಆದ್ಯತೆ ನೀಡಬೇಕು. ಅಂಗಡಿ ಹಂಚಿಕೆ, ಬಾಡಿಗೆ, ಸ್ಥಳ ಹಾಗು ಇತರೆ ವಿಚಾರಗಳ ಬಗ್ಗೆ ಸಂಘದೊಂದಿಗೆ ಚರ್ಚಿಸಿ ಪಾರದರ್ಶಕತೆ ಕಾಪಾಡಬೇಕು. ಅಗತ್ಯವಿರುವ ಲೋಡಿಂಗ್-ಅನ್‌ಲೋಡಿಂಗ್, ವಾಹನ ನಿಲುಗಡೆ, ಸರಕು ಸಂಗ್ರಹಣೆ ಹಾಗು ವ್ಯಾಪಾರಕ್ಕೆ ಅನುಕೂಲವಾಗುವ ಮೂಲ ಸೌಕರ್ಯ ಕಲ್ಪಿಸಬೇಕು. ಅಭಿವೃದ್ಧಿ ಕಾಮಗಾರಿಗಳಿಂದ ವ್ಯಾಪಾರಕ್ಕೆ ಅಡ್ಡಿಯಾಗದಂತೆ ಕ್ರಮ ವಹಿಸಬೇಕು ಎಂದು ಮನವಿ ಮಾಡಿದರು.

ಎಪಿಎಂಸಿ ಜಿಂಜರ್ ಅಸೋಸಿಯೇಷನ್ ಅಧ್ಯಕ್ಷ ಫೈಜ್ ಅರಷು, ಉಪಾಧ್ಯಕ್ಷ ಜಮೀಲ್ ಬೇಗ್, ಕಾರ್ಯದರ್ಶಿ ಇರ್ಫಾನ್ ಕೊಡ್ಲಿಪೇಟೆ, ಸದಸ್ಯರಾದ ಫೈರೋಜ್ ಪಾಷ, ಶಮೀಲ್, ಸಜ್ಜದ್, ಎಸ್.ಎ.ಸಾದಿಕ್, ಯೋಗೇಶ್, ನಹೀಮ್, ನವೀನ್ ಮುಸವಿರ್, ಜಾಕಿರ್, ಖಮರ್, ಅಲೀಮ್, ಇಲ್ಯಾಜ್ ರೂಮನ್ ಇತರರಿದ್ದರು.

# ಎತ್ತಿನಹೊಳೆ ಸಂತ್ರಸ್ತರಿಗೆ ನ್ಯಾಯಯುತ ಪರಿಹಾರ

• ಪ್ರಜೋದಯ ವರದಿ

**ಹಾಸನ:** ಎತ್ತಿನಹೊಳೆ ಯೋಜನೆ ಕಾಮಗಾರಿಯಿಂದ ಭೂಮಿ ಕಳೆದುಕೊಳ್ಳುವ ರೈತರ ಅಹ ವಾಲುಗಳನ್ನು ಆಲಿಸಿದ್ದೇನೆ. ಭೂಮಿ ಕಳೆದುಕೊಂಡ ಸಂತ್ರಸ್ತರ ಜೀವನೋಪಾಯಕ್ಕೆ ತೊಂದರೆ ಯಾಗದ ರೀತಿಯಲ್ಲಿ ನ್ಯಾಯಯುತ ಪರಿಹಾರ ನೀಡಲಾಗುವುದೆಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಭರವಸೆ ನೀಡಿದರು.



ನಗರದ ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಶುಕ್ರವಾರ ಎತ್ತಿನಹೊಳೆ ಯೋಜನೆಗೆ ಸಂಬಂಧಿಸಿದಂತೆ ಹಳೇಬೀಡು, ಗಂಗೂರು ಗ್ರಾಮದ ರೈತರೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ರೈತರ ಭೂಮಿ, ಬದುಕು ಹಾಗು ಭವಿಷ್ಯಕ್ಕೆ ಯಾವುದೇ ರೀತಿಯ ಧಕ್ಕೆ ಉಂಟಾಗದಂತೆ ಎತ್ತಿನಹೊಳೆ ಯೋಜನೆ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ. ಸಚಿವ ಸಂಪುಟದ ಅನುಮೋದನೆ ಪಡೆದು ರೈತರಿಗೆ ಅನ್ಯಾಯವಾಗದಂತೆ ಎಕ್ಸ್‌ಗ್ರೇಷಿಯಾ ಪರಿಹಾರ ನೀಡಲಾಗುತ್ತಿದೆ ಎಂದು ತಿಳಿಸಿದರು.

ಬಯಲು ಸೀಮೆಯ ರೈತರು, ಜನರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಎತ್ತಿನ ಹೊಳೆ ಯೋಜನೆ ಅನುಷ್ಠಾನಗೊಳಿಸಲಾಗಿದೆ. ಸ್ಥಳೀಯ ರೈತರಿಗೆ ಅನ್ಯಾಯವಾಗದಂತೆ ಅಧಿ ಕಾರಿಗಳು ಎಚ್ಚರಿಕೆ ವಹಿಸಬೇಕು. ರೈತರ ಸಮಸ್ಯೆಗಳಿಗೆ ಸ್ಪಂದಿಸಿ, ದಯ ಪರಿಹಾರವನ್ನು ಸೂಕ್ತ ರೀತಿಯಲ್ಲಿ ಒದಗಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕೆಂದು ಸಚಿವರು ಸೂಚಿಸಿದರು.

ಈ ವೇಳೆ ಶಾಸಕ ಹೆಚ್.ಕೆ.ಸುರೇಶ್, ಮಾಜಿ ಸಚಿವ ಬಿ.ಶಿವರಾಮ್ ಅವರು, ಬೇಲೂರು ತಾಲ್ಲೂಕಿನ ಐದಳ್ಳ ಕಾವಲು ವ್ಯಾಪ್ತಿಯಲ್ಲಿ ಹಾದುಹೋಗಿರುವ ಎತ್ತಿನ ಹೊಳೆ ಯೋಜನೆ ಕಾಮಗಾರಿಯಿಂದ ರೈತರಿಗೆ ಎದುರಾಗುತ್ತಿರುವ ಸಮಸ್ಯೆಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಸಂತ್ರಸ್ತ ರೈತರು ಹಾಜರಿದ್ದರು.

## ಗ್ರಾಮಗಳಿಗೆ ತೆರಳಿ ಜನರ ಸಮಸ್ಯೆ ಆಲಿಸುವುದು ತಪ್ಪೇ

» ಮೊದಲನೇ ಪುಟದಿಂದ

ಎ.ಮಂಜು ಅವರು ಹಿರಿಯ ಶಾಸಕರಾಗಿದ್ದು, ಚುನಾವಣೆಯಲ್ಲಿ ರಾಜಕೀಯವಾಗಿ ಅವರೊಂದಿಗೆ ಹೋರಾಟ ಮಾಡುತ್ತೇವೆ. ಆದರೆ, ಜನರ ಕೆಲಸ ಮಾಡುವ ವಿಚಾರದಲ್ಲಿ ಎಲ್ಲರೂ ಒಗ್ಗಟ್ಟಾಗಿ ಸಾಗಬೇಕು. ಜನರಿಗಾಗಿ ಕೆಲಸ ಮಾಡುವುದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ನನ್ನ ಕೊನೆಯ ಉಸಿರು ಇರುವವರೆಗೂ ಜನರ ಸೇವೆಗೆ ಜೀವನ ಮುಡಿಪಾಗಿಡುತ್ತೇನೆ. ಯಾರು ಏನೇ ಮಾಡಿದರೂ ಅದನ್ನು ಆಶೀರ್ವಾದವಾಗಿ ಸ್ವೀಕರಿಸುತ್ತೇನೆಂದು ಹೇಳಿದರು.

## ಗಣೇಶ ಹಬ್ಬ : ಕಾನೂನು ಪಾಲನೆಗೆ ಎಸ್‌ಪಿ ಸೂಚನೆ

» ಮೊದಲನೇ ಪುಟದಿಂದ

ದ್ದರೆ ಲೋಕೋಪಯೋಗಿ ಇಲಾಖೆಯ ಅನುಮತಿ ಪಡೆಯಬೇಕು. ಪೆಂಡಾಲ್‌ನಲ್ಲಿ ಪ್ರಥಮ ಚಿಕಿತ್ಸಾ ವ್ಯವಸ್ಥೆ ಮಾಡಿಕೊಳ್ಳಬೇಕು. ಏಕಗವಾಕ್ಷಿ ವ್ಯವಸ್ಥೆಯಡಿ ಈ ಎಲ್ಲಾ ಮುನ್ನೆಚ್ಚರಿಕೆ ಕೈಗೊಳ್ಳಬೇಕಾಗುತ್ತದೆ. ಅಗ್ನಿ ಅನಾಹುತ ಸಂಭವಿಸಿದರೆ ಅದನ್ನು ತಡೆಯಲು ನೀರಿನ ವ್ಯವಸ್ಥೆ, ಸಹಾಯವಾಣಿ ನಂಬರ್‌ಗಳನ್ನು ಪ್ರದರ್ಶಿಸಬೇಕೆಂದು ಹೇಳಿದರು.

ಮೆರವಣಿಗೆ ಮಾಹಿತಿ ನೀಡಿ

ಅದ್ದೂರಿ ಮೆರವಣಿಗೆಗೆ ಭದ್ರತೆ ಕಲ್ಪಿಸಬೇಕಿರುವುದರಿಂದ ಮೂರು ದಿನ ಮೊದಲೇ ಪೊಲೀಸರಿಗೆ ಮಾಹಿತಿ ನೀಡಬೇಕು. ಪೆಂಡಾಲ್‌ಗಳಲ್ಲಿ ಪ್ರತಿ ದಿನ ಇಬ್ಬರು ರಾತ್ರಿ ವಾಸ್ತವ್ಯ ಮಾಡಬೇಕು. ಸ್ಥಳೀಯ ಪೊಲೀಸರೊಂದಿಗೆ ಸಂಪರ್ಕದಲ್ಲಿರುವುದು ಹಾಗು ಸಿಸಿಟಿವಿ ಕ್ಯಾಮರಾ ಅಳವಡಿಸಬೇಕು. ಸಾವಿರಕ್ಕಿಂತ ಅಧಿಕ ಜನರು ಪಾಲ್ಗೊಳ್ಳುವುದಿದ್ದರೆ ಅಂತಹ ಸಮಿತಿಯವರು ಸ್ವಯಂ ಸೇವಕರ ನಿಯೋಜಿಸಬೇಕು. 5 ಸಾವಿರಕ್ಕಿಂತ ಅಧಿಕ ಮಂದಿ ಪಾಲ್ಗೊಳ್ಳುವ ಮೆರವಣಿಗೆ ಇದ್ದರೆ 200 ಸ್ವಯಂ ಸೇವಕರನ್ನು ನಿಯೋಜಿಸುವುದರ ಜೊತೆಗೆ ಅವರ ಮೊಬೈಲ್ ನಂಬರ್, ಫೋಟೊ ಪೊಲೀಸ್ ಠಾಣೆಗೆ ನೀಡಬೇಕು. ಜೊತೆಗೆ ಅವರಿಗೆ ಗುರುತಿನ ಚೀಟಿ ನೀಡಬೇಕು.



> **ಗಣೇಶ ಉತ್ಸವದ ವೇಳೆ ಡಿಜೆ ಬಳಕೆಗೆ ನಿಷೇಧವಿಲ್ಲ. ವಸತಿ ಪ್ರದೇಶಗಳಲ್ಲಿ 65 ಹಾಗು ವಸತಿ ರಹಿತ ಪ್ರದೇಶಗಳಲ್ಲಿ 75 ಡೆಸಿಬಲ್ ವರೆಗೆ ಡಿಜೆ ಹಾಕಬಹುದು. ಮೆರವಣಿಗೆ ನೆಪದಲ್ಲಿ ವಿನಾಕಾರಣ ಸಾರ್ವಜನಿಕರಿಗೆ ತೊಂದರೆ ನೀಡುವುದು ಕಂಡು ಬಂದರೆ ಕ್ರಮ ಜರುಗಿಸಲಾಗುವುದು.**
> **-ಶುಭನ್ವಿತಾ, ಎಸ್.ಪಿ.**

ಶಾಂತಿಯುತ ಹಬ್ಬ ಆಚರಣೆಗೆ ಎಲ್ಲರೂ ಸಹಕರಿಸಬೇಕು. ನಮ್ಮ ಇಲಾಖೆಯಿಂದ ಎಲ್ಲಾ ಕ್ರಮ ಕೈಗೊಳ್ಳಲಾಗಿದೆ. ಏನೇ ಸಮಸ್ಯೆಗಳಿದ್ದರೂ ತಕ್ಷಣವೇ ಪೊಲೀಸರನ್ನು ಸಂಪರ್ಕಿಸಬೇಕೆಂದರು.

# ಇಂದಿನಿಂದ ಹೋಬಳಿ ಮಟ್ಟದ ಪ್ರಜಾ ಸೇವಾ ಆಂದೋಲನಾ ಸಭೆ

• ಪ್ರಜೋದಯ ವರದಿ

**ಹಾಸನ:** ರಾಜ್ಯದ ಜನತೆಯ ಅಹವಾಲುಗಳನ್ನು ಆಲಿಸಿ ಮನೆ ಬಾಗಿಲಿನಲ್ಲಿಯೇ ಸಮಸ್ಯೆ ಗಳಿಗೆ ಪರಿಹಾರ ನೀಡಲು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಆಯಾ ವಿಧಾನಸಭಾ ಕ್ಷೇತ್ರದ ಶಾಸಕರ ನೇತೃತ್ವದಲ್ಲಿ ಹೋಬಳಿ ಮಟ್ಟದ ಪ್ರಜಾ ಸೇವೆ ಆಂದೋಲನ ಸಭೆಗಳನ್ನು ಈ ವೇಳಾಪಟ್ಟಿಯಂತೆ ಆಯೋಜಿಸಲಾಗುವುದೆಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ತಿಳಿಸಿದ್ದಾರೆ.



**ಹೋಬಳಿ ಮಟ್ಟದ ಪ್ರಜಾಸೇವೆ ಆಂದೋಲನ ಸಭೆಯ ವೇಳಾಪಟ್ಟಿ**

ಸೆ.12 ರಂದು ಬೆಳಿಗ್ಗೆ 10:30ಕ್ಕೆ ಅರಸೀಕೆರೆ ತಾಲ್ಲೂಕಿನ ಕಸಬಾ ಹೋಬಳಿಯ ಗಿಜೀಹಳ್ಳಿ ಎಪಿಎಂಸಿ ಆವರಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರ ಅಧ್ಯಕ್ಷತೆ ಯಲ್ಲಿ ಅರಸೀಕೆರೆ ವಿಧಾನ ಸಭಾ ಕ್ಷೇತ್ರ ಹೋಬಳಿ ಮಟ್ಟದ ಪ್ರಜಾ ಸೇವೆ ಆಂದೋಲನಾ ಸಭೆ ನಡೆಯಲಿದೆ.

ಸೆ.26ರಂದು ಬೆಳಿಗ್ಗೆ 10:30ಕ್ಕೆ ಅರಸೀಕೆರೆ ತಾಲ್ಲೂಕಿನ ಜಾವಗಲ್ ಹೋಬಳಿ, ಎಪಿಎಂಸಿ ಆವರಣ ಜಾವಗಲ್‌ನಲ್ಲಿ ಶಾಸಕ ಹೆಚ್.ಕೆ.ಸುರೇಶ್ ಅವರ ಅಧ್ಯಕ್ಷತೆಯಲ್ಲಿ ಹೋಬಳಿ ಮಟ್ಟದ ಪ್ರಜಾ ಸೇವೆ ಆಂದೋಲನಾ ಸಭೆ ನಡೆಯಲಿದೆ.

ಸೆ.12 ರಂದು ಬೆಳಿಗ್ಗೆ 10:30ಕ್ಕೆ ಹಾಸನ ತಾಲ್ಲೂಕಿನ ಸಾಲಗಾಮೆ ಹೋಬಳಿಯ ಸಾಲಗಾಮೆ ಗ್ರಾಮ ಪಂಚಾಯಿತಿ ಆವರಣದಲ್ಲಿ ಶಾಸಕ ಸ್ವರೂಪ್ ಪ್ರಕಾಶ್ ಅವರ ಅಧ್ಯಕ್ಷತೆಯಲ್ಲಿ ಹೋಬಳಿ ಮಟ್ಟದ ಪ್ರಜಾ ಸೇವೆ ಆಂದೋಲನಾ ಸಭೆ ನಡೆಯಲಿದೆ.

ಸೆ.26 ರಂದು ಬೆಳಿಗ್ಗೆ 10:30ಕ್ಕೆ ಹಾಸನ ತಾಲ್ಲೂಕಿನ ಶಾಂತಿಗ್ರಾಮ ಹೋಬಳಿಯ ಶಾಂತಿಗ್ರಾಮ ದೇವಾಂಗ ಸಮುದಾಯ ಭವನ ಆವರಣದಲ್ಲಿ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ಅಧ್ಯಕ್ಷತೆಯಲ್ಲಿ ಹೋಬಳಿ ಮಟ್ಟದ ಪ್ರಜಾ ಸೇವೆ ಆಂದೋಲನಾ ಸಭೆ ನಡೆಯಲಿದೆ.

ಸೆ.12 ರಂದು ಬೆಳಿಗ್ಗೆ 10:30ಕ್ಕೆ ಆಲೂರು ತಾಲ್ಲೂಕಿನ ಪಾಳ್ಯ ಹೋಬಳಿ ಡಾ:ಬಿ.ಆರ್.ಅಂಬೇಡ್ಕರ್ ಭವನ ಪಾಳ್ಯದಲ್ಲಿ ಶಾಸಕ ಸಿಮೆಂಟ್ ಮಂಜು ಅವರ ಅಧ್ಯಕ್ಷತೆಯಲ್ಲಿ ಹೋಬಳಿ ಮಟ್ಟದ ಪ್ರಜಾ ಸೇವೆ ಆಂದೋಲನಾ ಸಭೆ ನಡೆಯಲಿದೆ.

ಸೆ.26 ರಂದು ಬೆಳಿಗ್ಗೆ 10.30ಕ್ಕೆ ಸಕಲೇಶಪುರ ತಾಲ್ಲೂಕಿನ ಹಾನುಬಾಳು ಹೋಬಳಿಯ ಡಾ:ಬಿ.ಆರ್. ಅಂಬೇಡ್ಕರ್ ಭವನ ಹಾನುಬಾಳುನಲ್ಲಿ ಶಾಸಕ ಸಿಮೆಂಟ್ ಮಂಜು ಅವರ ಅಧ್ಯಕ್ಷತೆಯಲ್ಲಿ ಹೋಬಳಿ ಮಟ್ಟದ ಪ್ರಜಾ ಸೇವೆ ಆಂದೋಲನಾ ಸಭೆ ನಡೆಯಲಿದೆ. ಸೆ.12 ರಂದು ಬೆಳಿಗ್ಗೆ 10:30ಕ್ಕೆ ಬೇಲೂರು ತಾಲ್ಲೂಕಿನ ಕಸಬಾ ಹೋಬಳಿ ಕಚೇರಿ ಆವರಣದಲ್ಲಿ ಶಾಸಕ ಹೆಚ್.ಕೆ.ಸುರೇಶ್ ಅವರ ಅಧ್ಯಕ್ಷತೆಯಲ್ಲಿ ಹೋಬಳಿ ಮಟ್ಟದ ಪ್ರಜಾ ಸೇವೆ ಆಂದೋಲನಾ ಸಭೆ ನಡೆಯಲಿದೆ.

ಸೆ.26 ರಂದು ಬೆಳಿಗ್ಗೆ ಬೇಲೂರು ತಾಲ್ಲೂಕಿನ ಹಳೇಬೀಡು ಹೋಬಳಿಯ ಹಳೇಬೀಡು ಗ್ರಾಮ ಪಂಚಾಯಿತಿ ಆವರಣದಲ್ಲಿ ಶಾಸಕ ಹೆಚ್.ಕೆ.ಸುರೇಶ್ ಅವರ ಅಧ್ಯಕ್ಷತೆಯಲ್ಲಿ ಹೋಬಳಿ ಮಟ್ಟದ ಪ್ರಜಾ ಸೇವೆ ಆಂದೋಲನಾ ಸಭೆ ನಡೆಯಲಿದೆ. ಸೆ.12 ರಂದು ಬೆಳಿಗ್ಗೆ 10-30ಕ್ಕೆ ಅರಕಲಗೂಡು ತಾಲ್ಲೂಕಿನ ಮಲ್ಲಿಪಟ್ಟಣ ಹೋಬಳಿಯ ಮಲ್ಲಿಪಟ್ಟಣ ಸಮುದಾಯ ಭವನದಲ್ಲಿ ಮಾಜಿ ಸಚಿವ ಎ.ಮಂಜು ಅವರ ಅಧ್ಯಕ್ಷತೆಯಲ್ಲಿ ಹೋಬಳಿ ಮಟ್ಟದ ಪ್ರಜಾ ಸೇವೆ ಆಂದೋಲನಾ ಸಭೆ ನಡೆಯಲಿದೆ.

ಸೆ.26 ರಂದು ಬೆಳಿಗ್ಗೆ 10.30ಕ್ಕೆ ಅರಕಲಗೂಡು ತಾಲ್ಲೂಕಿನ ದೊಡ್ಡಮಗ್ಗೆ ಹೋಬಳಿಯ ಸಮುದಾಯ ಭವನದಲ್ಲಿ ಮಾಜಿ ಸಚಿವ ಎ.ಮಂಜು ಅವರ ಅಧ್ಯಕ್ಷತೆಯಲ್ಲಿ ಹೋಬಳಿ ಮಟ್ಟದ ಪ್ರಜಾ ಸೇವೆ ಆಂದೋಲನಾ ಸಭೆ ನಡೆಯಲಿದೆ. ಸೆ.12 ರಂದು ಬೆಳಿಗ್ಗೆ 10.30ಕ್ಕೆ ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೇಹಳ್ಳಿ ಹೋಬಳಿ ಕೆಪಿಎಸ್‌ಸಿ ಪ್ರೌಢಶಾಲೆ ಶಾಲಾ ಆವರಣದಲ್ಲಿ ಶಾಸಕ ಸಿ.ಎನ್.ಬಾಲಕೃಷ್ಣ ಅವರ ಅಧ್ಯಕ್ಷತೆಯಲ್ಲಿ ಹೋಬಳಿ ಮಟ್ಟದ ಪ್ರಜಾ ಸೇವೆ ಆಂದೋಲನಾ ಸಭೆ ನಡೆಯಲಿದೆ.

ಸೆ.26 ರಂದು ಬೆಳಿಗ್ಗೆ 10.30ಕ್ಕೆ ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೇಹಳ್ಳಿ ಹೋಬಳಿಯ ದಿಡಗ ಗ್ರಾಮ ಸರ್ಕಾರಿ ಪ್ರೌಢಶಾಲೆ ಶಾಲಾ ಆವರಣದಲ್ಲಿ ಶಾಸಕ ಸಿ.ಎನ್.ಬಾಲಕೃಷ್ಣ ಅವರ ಅಧ್ಯಕ್ಷತೆಯಲ್ಲಿ ಹೋಬಳಿ ಮಟ್ಟದ ಪ್ರಜಾ ಸೇವೆ ಆಂದೋಲನಾ ಸಭೆ ನಡೆಯಲಿದೆ.

ಸೆ12 ರಂದು ಬೆಳಿಗ್ಗೆ 10.30ಕ್ಕೆ ಹೊಳೆನರಸೀಪುರ ತಾಲ್ಲೂಕಿನ ಹಳೇಕೋಟೆ ಹೋಬಳಿಯ ನಾಡ ಕಚೇರಿ ಆವರಣದಲ್ಲಿ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ಅಧ್ಯಕ್ಷತೆಯಲ್ಲಿ ಹೋಬಳಿ ಮಟ್ಟದ ಪ್ರಜಾ ಸೇವೆ ಆಂದೋಲನಾ ಸಭೆ ನಡೆಯಲಿದೆಂದು ಜಿಲ್ಲಾಧಿಕಾರಿ ಅವರು ತಿಳಿಸಿದ್ದಾರೆ.

# ಇಂದು ಜಿಲ್ಲೆಯ 100 ಶಾಲೆಗಳಿಗೆ 10 ಸಾವಿರ ಪುಸ್ತಕ ವಿತರಣೆ

• ಪ್ರಜೋದಯ ವರದಿ

**ಹಾಸನ:** ನಗರದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಸೆ.12ರ ಶನಿವಾರ ಬೆಳಿಗ್ಗೆ 9.30 ಗಂಟೆಗೆ ನೂರು ಶಾಲೆಗಳಿಗೆ-ನೂರು ನೂರು ಉಚಿತ ಪುಸ್ತಕ ವಿತರಣೆ ಸಮಾರಂಭ ಹಮ್ಮಿಕೊಳ್ಳ ಲಾಗಿದೆ ಎಂದು ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ಅಧ್ಯಕ್ಷ ನೀಡಸಾಲೆ ಪುಟ್ಟಸ್ವಾಮಯ್ಯ ಅವರು ತಿಳಿಸಿದರು.




ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಸರ್ಕಾರಿ ಶಾಲಾ ಮಕ್ಕಳಲ್ಲಿ ಪುಸ್ತಕ ಓದಿಸುವ ಅಭಿರುಚಿ ಬೆಳೆಸಬೇಕೆಂಬ ಉದ್ದೇಶದಿಂದ ರಾಜ್ಯಾದ್ಯಂತ ಯೋಜನೆ ಜಾರಿಗೊಳಿಸ ಲಾಗಿದೆ. ವಿಶ್ವಕೋಶ, ವಿಜ್ಞಾನ ಕೋಶ, ಮಹನೀಯರ ಆತ್ಮಚರಿತ್ರೆ, ಸೇರಿ ಎಲ್ಲಾ ಬಗೆಯ ಪುಸ್ತಕ ಗಳನ್ನು ಮಕ್ಕಳಿಗೆ ಉಚಿತವಾಗಿ ನೀಡಲಾಗುತ್ತಿದೆ. ಈಗಾಗಲೇ 10 ಜಿಲ್ಲೆಗಳ 1000 ಶಾಲೆಗಳಿಗೆ 1 ಲಕ್ಷ ಪುಸ್ತಕ ವಿತರಿಸಲಾಗಿದೆ ಎಂದರು.

ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ ರಾಜ್ಯಾದ್ಯಂತ ಸದಸ್ಯರನ್ನು ಹೊಂದಿದೆ. ಉತ್ಸಾಹಿ, ಆಸಕ್ತ, ಕ್ರಿಯಾ ಶೀಲ, ಸಮಾನ ಮನಸ್ಕ ಬರಹಗಾರರು ಮತ್ತು ಪ್ರಕಾಶಕರು ಸಂಘದಲ್ಲಿದ್ದು ಎಲ್ಲರ ನೆರವಿನೊಂದಿಗೆ ಪುಸ್ತಕ ವಿತರಣೆ ನಡೆಯುತ್ತಿದೆಂದು ಮಾಹಿತಿ ನೀಡಿದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶುಭಂ ಶುಕ್ಲಾ ಪುಸ್ತಕ ಅನಾವರಣ ಮಾಡಲಿದ್ದಾರೆ. ಸಂಘದ ಮಾಹಿತಿ ಪುಸ್ತಕ ಬಿಡುಗಡೆಯನ್ನು ಸಾಹಿತಿ ರೂಪ ಹಾಸನ ನೆರವೇರಿಸಲಿದ್ದಾರೆ. ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಕೆ.ಎನ್.ಬಲರಾಮ್, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ.ಎಚ್.ಎಲ್.ಮಲ್ಲೇಶಗೌಡ, ಸಾಹಿತಿ ಹಾಡ್ಲಹಳ್ಳಿ ನಾಗರಾಜ್ ಪಾಲ್ಗೊಳ್ಳಲಿ ದ್ದಾರೆಂದರು.

ಸುದ್ದಿಗೋಷ್ಠಿಯಲ್ಲಿ ಕಸಾಪ ಜಿಲ್ಲಾಧ್ಯಕ್ಷ ಡಾ.ಎಚ್.ಎಲ್.ಮಲ್ಲೇಶಗೌಡ, ಗೌರವ ಕಾರ್ಯದರ್ಶಿ ಬಿ.ಆರ್. ಬೊಮ್ಮೇಗೌಡ, ಚಂದ್ರಕೀರ್ತಿ, ಸುರೇಶ್, ವಿಜಯ್, ರಘುವೀರ್ ಇದ್ದರು.

## ಸಾಲಬಾಧೆ: ರೈತ ಆತ್ಮಹತ್ಯೆ



• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ಮಲ್ಲಿಪಟ್ಟಣ ಹೋಬಳಿಯ ಮತರ ಗ್ರಾಮದ ರೈತ ಪುಟ್ಟರಾಜು (45)ಅವರು ಶುಕ್ರವಾರ ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕೃಷಿಗಾಗಿ ಮಲ್ಲಿಪಟ್ಟಣದ ಕೆನರಾ ಬ್ಯಾಂಕ್‌ನಲ್ಲಿ 4 ಲಕ್ಷ ರೂ. ಹಾಗೂ 5 ಲಕ್ಷ ಕೈ ಸಾಲ ಮಾಡಿ ಕೊಂಡಿದ್ದರು ಎನ್ನಲಾಗಿದೆ. ಸಾಲದ ಒತ್ತಡದಿಂದ ಮನನೊಂದು ಆತ್ಮಹತ್ಯೆ ಮಾಡಿ ಕೊಂಡಿರುವುದಾಗಿ ತಿಳಿದುಬಂದಿದೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ತಮಿಳುನಾಡಿಗೆ ಕಾವೇರಿ ನೀರು: ನ್ಯಾಯಾಲಯ ಆದೇಶ ಪಾಲಿಸಲೇಬೇಕು

• ಪ್ರಜೋದಯ ವರದಿ



**ಮಂಡ್ಯ:** ತಮಿಳುನಾಡಿಗೆ ಕಾವೇರಿ ನೀರು ಹರಿಸುವ ಸಂಬಂಧ ರಾಜ್ಯ ಸರ್ಕಾರ ಸಲ್ಲಿಸಿರುವ ಮೇಲ್ಮನವಿ ಅರ್ಜಿ ಸೋಮವಾರ ಸುಪ್ರೀಂ ಕೋರ್ಟ್ ಮುಂದೆ ವಿಚಾರಣೆಗೆ ಬರಲಿದೆ ಎಂದು ಜಲಸಂಪನ್ಮೂಲ ಸಚಿವ ಎನ್.ಚಲುವರಾಯಸ್ವಾಮಿ ಅವರು ತಿಳಿಸಿದ್ದಾರೆ.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾವೇರಿ ನೀರು ನಿಯಂತ್ರಣ ಸಮಿತಿ ಆದೇಶವನ್ನು ಉಲ್ಲಂಘಿಸಿ ನೇರವಾಗಿ ನ್ಯಾಯಾಲಯದ ಮೊರೆ ಹೋದರೆ ಅರ್ಜಿ ತಿರಸ್ಕೃತಗೊಳ್ಳುವ ಅಪಾಯವಿರುತ್ತದೆ. ಹೀಗಾಗಿ ಕಾನೂನು ತಜ್ಞರ ಸಲಹೆಯಂತೆ ಸೋಮವಾರದವರೆಗೆ ತಮಿಳುನಾಡಿಗೆ ನೀರು ಹರಿಸುವುದು ಅನಿವಾರ್ಯವಾಗಿದೆ ಎಂದು ಸ್ಪಷ್ಟಪಡಿಸಿದರು. ರಾಜ್ಯದಲ್ಲಿ ತೀವ್ರ ನೀರಿನ ಕೊರತೆ ಇದ್ದರೂ, ಒಕ್ಕೂಟ ವ್ಯವಸ್ಥೆಯ ಚೌಕಟ್ಟಿನಲ್ಲಿ ನ್ಯಾಯಾಲಯದ ಆದೇಶಗಳನ್ನು ಗೌರವಿಸಬೇಕಾದ ಇಕ್ಕಟ್ಟಿಗೆ ಸರ್ಕಾರ ಸಿಲುಕಿದೆ ಎಂದರು.

**ಇಂದು ಮಧ್ಯಾಹ್ನ ಸಭೆ ಆರಂಭ | ಜಾಗತಿಕ ಸಮಸ್ಯೆ ಚರ್ಚೆ ಸಾಧ್ಯತೆ**

# 18ನೇ ಬ್ರಿಕ್ಸ್ ಶೃಂಗ ಸಭೆಗೆ ವೇದಿಕೆ ಅಣಿ

• ಪ್ರಜೋದಯ ವರದಿ

**ನವದೆಹಲಿ:** ಪಶ್ಚಿಮ ಏಷ್ಯಾ ಸಂಘರ್ಷ, ರಷ್ಯಾ-ಉಕ್ರೇನ್ ನಡುವಿನ ಯುದ್ಧ ಹಾಗು ಜಾಗತಿಕ ಆರ್ಥಿಕ ಅಸ್ಥಿರತೆ ನಡುವೆಯೇ 18ನೇ ಬ್ರಿಕ್ಸ್ ಶೃಂಗ ಸಭೆಗೆ ವೇದಿಕೆ ಅಣಿಯಾಗಿದೆ.



ಸದಸ್ಯ ರಾಷ್ಟ್ರಗಳ ಆರ್ಥಿಕ ಪ್ರಗತಿಯನ್ನು ಸಂಭ್ರಮಿಸಲು ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳ ಭವಿಷ್ಯದ ಕಾರ್ಯಸೂಚಿಗಳಿಗೆ ಅನುಮೋದನೆ ನೀಡಲು ಬ್ರಿಕ್ಸ್ ರಾಷ್ಟ್ರಗಳ ನಾಯಕರು ಭಾರತ ಮಂಟಪದಲ್ಲಿ ಸೇರಲಿದ್ದಾರೆ. ತಮ್ಮ ರಾಷ್ಟ್ರದ ಮೇಲೆ ಅಮೇರಿಕಾ ಹಾಗು ಇಸ್ರೇಲ್ ನಡೆಸಿದ ಸೇನಾ ದಾಳಿಗಳನ್ನು ಬ್ರಿಕ್ಸ್ ರಾಷ್ಟ್ರಗಳು ಬಲವಾಗಿ ಖಂಡಿಸಿ ಕಠಿಣ ನಿರ್ಣಯ ತೆಗೆದುಕೊಳ್ಳಬೇಕೆಂದು ಇರಾನ್ ಅಧ್ಯಕ್ಷ ಮಸೂದ್ ಪೆಜೆಷ್ಕಿಯಾನ್ ಅವರು ಶೃಂಗಸಭೆಯಲ್ಲಿ ಪ್ರಸ್ತಾಪಿಸಲು ಸಜ್ಜಾಗಿ ಬಂದಿದ್ದಾರೆ. ಅವರಿಗೆ ಸೌದಿ ಅರೇಬಿಯಾ ಹಾಗು ಯುಎಇ ನಾಯಕರಿಂದ ಪ್ರತಿರೋಧ ಎದುರಾಗುವ ಸಾಧ್ಯತೆ ಇದೆ.

ಶನಿವಾರ ಮಧ್ಯಾಹ್ನ 2.35ಕ್ಕೆ ಶೃಂಗಸಭೆ ಆರಂಭವಾಗಲಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ 2 ದಿನ ನಡೆಯಲಿರುವ ಶೃಂಗಸಭೆಯಲ್ಲಿ ಜಾಗತಿಕ ಸಮಸ್ಯೆಗಳು, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಆರ್ಥಿಕತೆಗಳನ್ನು ರಕ್ಷಿಸುವುದು ಸೇರಿ ಹಲವು ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವ ಕುರಿತು ಜಾಗತಿಕ ನಾಯಕರ ನಡುವೆ ಗಂಭೀರ ಚರ್ಚೆ ಯಾಗುವ ನಿರೀಕ್ಷೆಯಿದೆ.

ಸಂಘರ್ಷಗಳಿಂದ ಉಂಟಾಗಿರುವ ಆರ್ಥಿಕ ಬಿಕ್ಕಟ್ಟಿನಿಂದ ಅಭಿವೃದ್ಧಿಶೀಲ ರಾಷ್ಟ್ರಗಳನ್ನು ಪಾರು ಮಾಡಲು ಆಹಾರ, ಇಂಧನ ಮತ್ತು ಪೂರೈಕೆ ಸರಪಳಿ ಭದ್ರತೆಯಂತಹ ಜಾಗತಿಕ ವಿವಾದಗಳಿಗೆ ಕಾರ್ಯಸಾಧ್ಯ ಪರಿಹಾರಗಳನ್ನು ಹುಡುಕಲು ಭಾರತ ಪ್ರಯತ್ನಿಸಲಿದೆ. ಪ್ರಾದೇಶಿಕ ವಿಷಯಗಳಿಗೂ ಸಮಾನ ಆದ್ಯತೆ ನೀಡಲಾಗುತ್ತದೆಯೆಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಮೂಲಗಳು ತಿಳಿಸಿವೆ.

ಶೃಂಗಸಭೆಯಲ್ಲಿ ಜಂಟಿ ಹೇಳಿಕೆ ನೀಡುವ ಕುರಿತು ಸದಸ್ಯ ರಾಷ್ಟ್ರಗಳು ಶುಕ್ರವಾರ ಸಂಜೆಯವರೆಗೂ ಒಮ್ಮತಕ್ಕೆ ಬಂದಿರಲಿಲ್ಲ. ಪಶ್ಚಿಮ ಏಷ್ಯಾದ ಬಿಕ್ಕಟ್ಟಿನ ಕುರಿತು ಇರಾನ್, ಸೌದಿ ಅರೇಬಿಯಾ ಮತ್ತು ಯುಎಇ ನಡುವಿನ ಭಿನ್ನಾಭಿಪ್ರಾಯಗಳು ಮುಂದುವರಿದಿವೆ. ಅಮೇರಿಕಾ, ಯುರೋಪ್, ಜಪಾನ್, ಆಸ್ಟ್ರೇಲಿಯಾ ಮತ್ತು ಇತರೆ ದೇಶಗಳೊಂದಿಗಿನ ಪಾಲುದಾರಿಕೆಯನ್ನು ಕಾಯ್ದುಕೊಳ್ಳುವುದರ ಜೊತೆಗೆ ಬ್ರಿಕ್ಸ್ ರಾಷ್ಟ್ರಗಳ ನಡುವಿನ ಬಾಂಧವ್ಯವನ್ನು ಇನ್ನಷ್ಟು ಬಲಪಡಿ ಸಲು ಈ ಶೃಂಗಸಭೆಯು ಭಾರತಕ್ಕೆ ಅವಕಾಶ ಒದ ಗಿಸಿದೆ. ಅಭಿವೃದ್ಧಿ ಹೊಂದುತ್ತಿರುವ ಮತ್ತು ಉದಯೋನ್ಮುಖ ಆರ್ಥಿಕತೆಗಳ ಧ್ವನಿಯಾಗಿ ತನ್ನನ್ನು ತಾನು ಗುರುತಿಸಿ ಕೊಳ್ಳಲು ಭಾರತಕ್ಕೆ ಮಹತ್ವದ ವೇದಿಕೆ ಸಿಕ್ಕಿದೆ ಎಂದು ಮೂಲಗಳು ಹೇಳಿವೆ.

**ಜಾಗತಿಕ ಆರ್ಥಿಕತೆಗೆ ಕೊಡುಗೆ**

ಬ್ರಿಕ್ಸ್ ರಾಷ್ಟ್ರಗಳು ಜಾಗತಿಕ ಆರ್ಥಿಕತೆಗೆ ಜಿ-7 ದೇಶಗಳಿಗಿಂತ ಹೆಚ್ಚಿನ ಕೊಡುಗೆ ನೀಡುತ್ತಿವೆ ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಹೇಳಿದರು.

ಬ್ರಿಕ್ಸ್ ಸಮ್ಮೇಳನಕ್ಕೂ ಮುನ್ನ ನಡೆದ ವ್ಯಾಪಾರ ವೇದಿಕೆ ಸಭೆಯಲ್ಲಿ ಮಾತನಾಡಿದ ಅವರು, ಕಳೆದ ಐದು ವರ್ಷಗಳಲ್ಲಿ ವಿಶ್ವದ ಒಟ್ಟು ಜಿಡಿಪಿಯಲ್ಲಿ ಬ್ರಿಕ್ಸ್ ರಾಷ್ಟ್ರಗಳ ಪಾಲು ಶೇ.40ಕ್ಕಿಂತ ಹೆಚ್ಚಿದೆ. ಇದೇ ಅವಧಿಯಲ್ಲಿ ಜಿ-7 ರಾಷ್ಟ್ರಗಳ ಪಾಲು ಶೇ.29ರಷ್ಟಿದೆ ಎಂದು ತಿಳಿಸಿದರು.

ಜಗತ್ತು ನಿರಂತರವಾಗಿ ಬದಲಾಗುತ್ತಿದೆ. ಕಳೆದ ಐದು ವರ್ಷಗಳ ಅಂಕಿ-ಅಂಶಗಳೇ ಇದಕ್ಕೆ ಸಾಕ್ಷಿ. ಜಾಗತಿಕ ಆರ್ಥಿಕ ಬೆಳವಣಿಗೆಯಲ್ಲಿ ಮುಂಚೂಣಿಯಲ್ಲಿದ್ದ ಹಳೆಯ ಶಕ್ತಿಗಳ ಬದಲಿಗೆ ಹೊಸ ಆರ್ಥಿಕ ಶಕ್ತಿಗಳು ಮುನ್ನೆಲೆಗೆ ಬರುತ್ತಿವೆಂದು ಹೇಳಿದರು.

**ಪಾಶ್ಚಿಮಾತ್ಯ ರಾಷ್ಟ್ರಗಳ ವಿರುದ್ಧ ಕಿಡಿ**

ಪಾಶ್ಚಿಮಾತ್ಯ ರಾಷ್ಟ್ರಗಳು ಇತರೆ ದೇಶಗಳು ಆರ್ಥಿಕವಾಗಿ ಸದೃಢವಾಗದಂತೆ ಅಡ್ಡಿಪಡಿಸುತ್ತಿವೆಯೆಂದು ಪುಟಿನ್ ಆರೋಪಿಸಿದರು. ಸ್ಪರ್ಧೆಯ ಹೆಸರಿನಲ್ಲಿ ಎದುರಾಳಿಗಳ ಆರ್ಥಿಕ ಸಾಮರ್ಥ್ಯ ಕುಗ್ಗಿಸಲು ಹಲವು ಕ್ರಮ ಕೈಗೊಳ್ಳಲಾಗುತ್ತಿದೆ. ದೇಶಗಳ ನಡುವೆ ಸ್ಪರ್ಧೆ ಇರಬೇಕು. ಆದರೆ, ಪಾಶ್ಚಿಮಾತ್ಯ ರಾಷ್ಟ್ರಗಳು ತಮ್ಮ ಹಿಂದಿನ ಸ್ಥಾನವನ್ನು ಮರಳಿ ಪಡೆಯುವ ಪ್ರಯತ್ನದಲ್ಲಿ ತಪ್ಪಾದ ಹಾದಿ ತುಳಿಯುತ್ತಿವೆ. ಕೆಲವೊಮ್ಮೆ ಈ ಸ್ಪರ್ಧೆ ಅಸಹ್ಯಕರ ರೂಪ ಪಡೆಯುತ್ತಿದೆ. ಪೈಪ್‌ಲೈನ್‌ಗಳನ್ನು ಧ್ವಂಸ ಮಾಡುವುದು, ಅಂತರ್‌ರಾಷ್ಟ್ರೀಯ ಸಾರಿಗೆ ಮಾರ್ಗಗಳಿಗೆ ತಡೆಯೊಡ್ಡುವುದು, ಹಡಗುಗಳನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುವುದು ಸೇರಿ ಹಲವು ಕ್ರಮ ಕೈಗೊಳ್ಳಲಾ ಗಿದೆ. ರಷ್ಯಾ ವಿರುದ್ಧ 30 ಸಾವಿರಕ್ಕೂ ಹೆಚ್ಚು ನಿರ್ಬಂಧಗಳನ್ನು ವಿಧಿಸಲಾಗಿದೆ. ಇದು ಜಗತ್ತಿನ ಇತರೆ ಎಲ್ಲಾ ದೇಶಗಳ ವಿರುದ್ಧ ವಿಧಿಸಲಾಗಿರುವ ನಿರ್ಬಂಧಗಳ ಒಟ್ಟು ಸಂಖ್ಯೆಯ 2 ಪಟ್ಟು ಎಂದು ಹೇಳಿದರು.

## ಅರಣ್ಯ ಸಂಪತ್ತು ರಕ್ಷಣೆಗೆ ಎಲ್ಲರೂ ಕೈಜೋಡಿಸಬೇಕು

» ಮೊದಲನೇ ಪುಟದಿಂದ

ನಿರ್ಮಾಣವಾಗಿದೆ. ಸಂವಿಧಾನ ನೀಡಿರುವ ಅವಕಾಶವನ್ನು ಎಲ್ಲರೂ ಪಡೆಯಬೇಕು. ಇಲಾಖೆಯ ನೌಕರರು ಏನೇ ಸಮಸ್ಯೆಗಳಿದ್ದರೂ ಕಾನೂನು ಸೇವಾ ಪ್ರಾಧಿಕಾರದ ಮೂಲಕ ನ್ಯಾಯ ಪಡೆಯಬಹುದೆಂದರು.

ಹಾಸನ ವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಏಡುಕುಂಡಲು ಅವರು ಮಾತನಾಡಿ, ದೇಶಾದ್ಯಂತ ಅರಣ್ಯ ಹುತಾತ್ಮರ ದಿನವನ್ನು ಆಚರಿಸಲಾಗುತ್ತಿದೆ. ಅರಣ್ಯ ಸಂಪತ್ತು, ನದಿ ಮೂಲಗಳು ಸೇರಿ ಪ್ರಕೃತಿ ಸಂಪನ್ಮೂಲಗಳ ಸಂರಕ್ಷಣೆಯಲ್ಲಿ ಅರಣ್ಯ ಇಲಾಖೆಯ ಸಿಬ್ಬಂದಿಯ ತ್ಯಾಗ ಶ್ಲಾಘನೀಯ. ಅರಣ್ಯ ಸಂಪತ್ತಿನ ರಕ್ಷಣೆಯಲ್ಲಿ ಹಲವು ಸವಾಲುಗಳಿವೆ. ಅರಣ್ಯ ಒತ್ತುವರಿ ಹಾಗು ಪ್ರಕೃತಿ ಸಂಪನ್ಮೂಲಗಳ ನಾಶದಿಂದ ಪರಿಸರ ಅಸಮತೋಲನ ಉಂಟಾಗುತ್ತಿದ್ದು, ಇದು ವಿಕೋಪಗಳಿಗೂ ಕಾರಣವಾಗುತ್ತಿದೆ. ಹವಾಮಾನ ಬದಲಾವಣೆ ಹಾಗು ಅರಣ್ಯ ನಾಶದ ನಡುವಿನ ಸಂಬಂಧವನ್ನು ಗಂಭೀರವಾಗಿ ಪರಿಗಣಿಸಬೇಕಿದೆ ಎಂದರು.

ಅರಣ್ಯ ಸಂರಕ್ಷಣೆಯ ಕಾರ್ಯದಲ್ಲಿ ಆಡಳಿತಾತ್ಮಕ ಸವಾಲುಗಳೂ ಇವೆ. ಸಿಬ್ಬಂದಿ ನಿತ್ಯ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಎಲ್ಲಾ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಕಾರ್ಯನಿರ್ವಹಿಸುವ ಅಗತ್ಯವಿದೆ ಎಂದು ಹೇಳಿದರು.

ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸುವ ಮೂಲಕ ಹುತಾತ್ಮ ನೌಕರರಿಗೆ ಗೌರವ ಸೂಚಿಸಲಾಯಿತು. ಕರ್ತವ್ಯದಲ್ಲಿದ್ದಾಗಲೇ ಮೃತಪಟ್ಟ ಇಲಾಖೆಯ 65 ನೌಕರರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ, ಡಿಸಿಎಫ್ ಸೌರಬ್ ಕುಮಾರ್, ಕಾವ್ಯಶ್ರೀ, ಡಿಸಿಎಫ್ ತಾಂತ್ರಿಕ ಸಹಾಯಕ ಅಧಿಕಾರಿ ಮೋಹನ್, ಶಿವಾನಂದ್ ಕೊಟ್ಯಾನ್, ನಳಿನಿ, ರಾಜಶೇಖರ್ ಗೌಡ, ಜಿಲ್ಲಾ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಗಿರೀಶ್, ಸಲೀಂ ಪಾಷಾ, ಜಗದೀಶ್, ಪ್ರಕಾಶ್ ಮತ್ತಿತರರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019